ಶ್ರೀಕೃಷ್ಣ ಆಲನಹಳ್ಳಿ

ಅಮರೇಶ ನುಗಡೋಣಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಶ್ರೀಕೃಷ್ಣ ಆಲನಹಳ್ಳಿ

ಅಮರೇಶ ನುಗಡೋಣಿ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

Srikrishna Alanahalli - By Amaresha Nugadoni, published by Dr. Karigowda, Beechanahalli, Director, Prasaranga, Kannada University, Hampi, Vidyaranya, Kamalapura - 583 221, Pages: viii+43, Rs. 13/-

First Edition 1995

ನಮ್ಮವರು ಪುಸ್ತಕಮಾಲೆ – ೧

ಮುಖಪುಟ ವಿನ್ಯಾಸ : ಕೆ. ಮಕಾಳಿ

ಪ್ರಕಾಶಕರು
ಡಾ. ಕರೀಗೌಡ ಬೀಚನಹಳ್ಳಿ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಾಮಲಾಪುರ-೫೮೩ ೨೧೧

ಬೆಲೆ : ಹದಿಮೂರು ರೂಪಾಯಿಗಳು

ಮುದ್ರಕರು
ನೇತ್ರಾ ಪ್ರಿಂಟರ್ಸ್
ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ನಿವೇದನೆ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೇ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ, ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರವಿಧಾನಗಳ ನಿರ್ಮಾಣ. ಈ ಬಗೆಯ ಶಾಸ್ತ್ರ-ಕಲೆ, ಅಭಿಜಾತ-ಜಾನಪದ, ಮಾರ್ಗ-ದೇಸಿ, ಸ್ವಕೀಯ-ಪರಕೀಯ, ಪೌರ್ವಾತ್ಯ-ಪಾಶ್ಚಾತ್ಯ ಈ ಬಗೆ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿ ಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲದು. ಅನುವಾದ, ಭಾಷಾಂತರ, ವಿವರಣೆ, ಟೀಕೆ, ವಿಮರ್ಶೆ ಇಂಥ ವಿಧಾನಗಳನ್ನು ಅನುಸರಿಸುತ್ತ ತಿಳುವಳಿಕೆಯ ಹೊಸ ಸಾಹಿತ್ಯ ನಿರ್ಮಾಣವಾಗಬೇಕು. ಅಂಥ ಎಲ್ಲ ಬಗೆಯ ಸಂಶೋಧನಕ್ಕೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದೆ, ಅವಕಾಶವೂ ಇದೆ.

ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ವಿದ್ಯೆಯ ಸೃಷ್ಟಿಯಾಗುವುದು ಈ ಪ್ರಸಾರಾಂಗದಲ್ಲಿ. ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನೂ ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಾಡಿನ ಪ್ರಕೃತಿಯಂತೆ ನಾಡಿನ ಸಂಸ್ಕೃತಿ ಕೂಡ ಈ ಪರಿಪ್ರೇಕ್ಷ್ಯವಿಲ್ಲದೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಕಲ್ಲಿನಲ್ಲಿರುವ ಶಾಸನಗಳನ್ನು ಕಣ್ಣೆತ್ತಿ ನೋಡದ ಜನ ಅದೇ ಪುಸ್ತಕದಲ್ಲಿ ಪ್ರಕಟಗೊಂಡರೆ ಓದುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ. ಜನರಾಡುವ ಶಬ್ದಗಳನ್ನೇ ಕೋಶದಲ್ಲಿ ಸಂಗ್ರಹಿಸಿದರೆ ಆ ಶಬ್ದಗಳಿಗೆ ತಿಳುವಳಿಕೆಯ ಬೆಲೆ ಬರುತ್ತದೆ.

ನಮ್ಮ ಪ್ರಸಾರಾಂಗ, ಈಗಾಗಲೇ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಸಾರಾಂಗ, ತನ್ನ ಪ್ರಕಟಣೆಗಳ ಮೂಲಕ ಸಾರ್ಥಕವಾಗಬೇಕಾದ ದಾರಿಯನ್ನು ಹುಡುಕಿಕೊಳ್ಳುತ್ತಿದೆ. ಲೋಕದಲ್ಲಿಯ ತಿಳುವಳಿಕೆಯನ್ನು ಸಂಗ್ರಹಿಸಿ ತಿರುಗಿ ಲೋಕಕ್ಕೇ ದಾನ ಮಾಡುವ ಪ್ರಕ್ರಿಯೆ ಪ್ರಸಾರಾಂಗದಲ್ಲಿ ನಡೆಯುತ್ತಿದೆ. ಸಂಗ್ರಹವಾದ ತಿಳುವಳಿಕೆಗೆ ಗ್ರಂಥಗಳ ರೂಪವನ್ನು ಕೊಡುವ ಹೊಣೆಗಾರಿಕೆ ಪ್ರಸಾರಾಂಗದ್ದಾಗಿದೆ. ಈ ರೂಪಾಂತರದ ಪ್ರಕ್ರಿಯೆ ನಮ್ಮ ವಿಶ್ವವಿದ್ಯಾಲಯದ ವೈಶಿಷ್ಟ್ಯವಾಗಿದೆ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪರಿವಿಡಿ

ಶ್ರೀಕೃಷ್ಣ ಆಲನಹಳ್ಳಿ

ಜನವರಿ ೪, ೯೯ರಂದು ಆಲನಹಳ್ಳಿಯವರು ಈ ಲೋಕವನ್ನು ತ್ಯಜಿಸಿದರು. ಸಾಹಿತ್ಯಾಸಕ್ತರು, ಅಭಿಮಾನಿಗಳು ಅದಕ್ಕಿಂತ ಹೆಚ್ಚಾಗಿ ಅವರ ಆಪ್ತ ಸ್ನೇಹಿತರು ಈ ಸುದ್ದಿ ಕೇಳಿ ಸ್ತಬ್ಧರಾದರು. ಯಾರೂ ಸಾಯಬಾರದ ವಯಸ್ಸಿನಲ್ಲಿ ಅವರು ಕೊನೆ ಉಸಿರೆಳೆದಿದ್ದರು. ಕೃಷ್ಣರ ಕವಿತೆ, ಕಥೆಗಳು ಯುವಕರಿಗೆ ಕನಸುಗಳನ್ನು ಮೂಡಿಸುವಷ್ಟು ದಂಗು ಹಿಡಿಸಿದ್ದವು. ಅವರ ಕಾದಂಬರಿಗಳು ಸಾಮಾನ್ಯ ಓದುಗನಿಂದ, ಗಂಭೀರ ಓದುಗ ಮತ್ತು ವಿಮರ್ಶಕರವರಿಗೆ ಎಲ್ಲರನ್ನೂ ಚಿಂತನೆಗೆ ಗುರಿಮಾಡಿದ್ದವು. ಅವರ ಕೃತಿಗಳ ಆಧಾರಿತ ಸಿನೆಮಾಗಳಿಗೂ ಈ ಮಾತನ್ನು ಅನ್ವಯಿಸಬಹುದು. ಈ ಕಾರಣದಿಂದ ಕೃಷ್ಣರು ಖ್ಯಾತರೂ ಹೌದು, ಜನಪ್ರಿಯರೂ ಹೌದು.

ಕೃಷ್ಣರು ತಮ್ಮ ಬಾಲ್ಯವನ್ನು ಚಿಕ್ಕ ಹಳ್ಳಿಯಾದ ಆಲನಹಳ್ಳಿಯಲ್ಲಿ ಕಳೆದರು. ಸೂಕ್ಷ್ಮಬುದ್ಧಿಯ, ಚುರುಕು ಸ್ವಭಾವದ ಮುಗ್ಧ ಕೃಷ್ಣ ಹಳ್ಳಿಯ ಜತೆ ಬಿಡಿಸಲಾಗದ ಒಡನಾಡಿಯಾಗಿದ್ದರು. ಹಳ್ಳಿಯ ಬದುಕಿನ ಜತೆ ಗಾಢ ಸಂಬಂಧವನ್ನೂ ಹೊಂದಿದ್ದ ಕಾರಣ, ಅಲ್ಲಿಯ ಪ್ರೀತಿ, ಕ್ರೌರ್ಯವನ್ನು ಅನುಭವಿಸಿದ್ದರು. ಇದರ ಸೊಗಡು ಅವರ ಸಾಹಿತ್ಯದಲ್ಲಿ ತುಂಬಿಕೊಳ್ಳಲು ಕಾರಣವಾಗಿದೆ.

ಹೆಗ್ಗಡದೇವನಕೋಟೆ, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಪದವಿಯನ್ನೂ ಮಾನಸಗಂಗೋತ್ರಿಯಲ್ಲಿ ಎಂ.ಎ. ಪದವಿಯನ್ನೂ ಗಳಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಬೇಕೆಂಬ ಕನಸು ನನಸಾಗದೆ ಹೋದಾಗ ಸ್ವಲ್ಪ ವ್ಯಥೆಪಟ್ಟರು. ಮುಂದೆ ಕೆಲವು ದಿನ ಯುವರಾಜಾ ಕಾಲೇಜಿನಲ್ಲಿ ಮತ್ತು ಭಾರತೀಯ ಭಾಷಾ ಸಂಸ್ಥಾನದಲ್ಲಿ ಕೆಲಸಮಾಡಿ ಆ ಮೇಲೆ ಮೈಸೂರು ಬಳಿ ವ್ಯವಸಾಯಕ್ಕೆ ತೊಡಗಿದರು. ವಿದ್ಯಾರ್ಥಿಯಾಗಿದ್ದಾಗ ಮಾನಸ ಗಂಗೋತ್ರಿಯಲ್ಲಿ ಪರಿಚಯವಾದ ಉದಕಮಂಡಲದ ವಿನುತಾ ಎಂಬ ಹುಡುಗಿಯನ್ನು ಮದುವೆಯಾದರು. ಪ್ರದ್ಯುಮ್ನ ಮತ್ತು ಕೃತಿಕಾ ಎಂಬ ಮಕ್ಕಳೊಡನೆ ಅವರ ಸಂಸಾರವಿತ್ತು.

ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ (ಬಿ.ಎ.) ಕವಿತೆಗಳನ್ನು ಬರೆದು 'ಮಣ್ಣಿನ ಹಾಡು' ಎಂಬ ಕವನ ಸಂಕಲನ ಪ್ರಕಟಿಸಿದರು. ಗೋಪಾಲಕೃಷ್ಣ ಅಡಿಗರ

ಮೆಚ್ಚುಗೆಮಾತುಗಳ ಮುನ್ನುಡಿಯೊಂದಿಗೆ ಅದು ಹೊರಬಂದಿತು. ಸಾಹಿತ್ಯಾಸಕ್ತರ ಗಮನ ಸೆಳೆಯಿತು. ಈ ಸಂಕಲನಕ್ಕೆ ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿತು. ಅದು ನವ್ಯದ ಕಾಲ. ಕೃಷ್ಣರು ನವ್ಯಸಾಹಿತಿಗಳ ಜತೆಗಿದ್ದರೂ ನವ್ಯರಂತೆ ಬರೆಯಲಿಲ್ಲ. ಅವರ 'ಕಾಡು' ಕಾದಂಬರಿ ಮತ್ತು ಕಥೆಗಳು, ಕವಿತೆಗಳು ನವ್ಯದ ಗುಣಾತ್ಮಕ ಅಂಶಗಳನ್ನು ಪಡೆದು ಕಲಾತ್ಮಕತೆಯೊಂದಿಗೆ ಸೃಷ್ಟಿಯಾಗಿದ್ದವು. ಮುಂದೆ ಬರೆದ ಕಾದಂಬರಿಗಳೆಲ್ಲ ಹಳ್ಳಿಯ ದಟ್ಟವಾದ ಅನುಭವವನ್ನು ದಕ್ಕಿಸಿಕೊಂಡು ನಿಂತವು. ಕೃಷ್ಣರು ಕಟ್ಟಿಕೊಡುವ ಪ್ರತಿಮೆ, ಸಂಕೇತ ಮತ್ತು ವಿವರಗಳು, ನುಡಿಗಟ್ಟುಗಳು ಅಲ್ಲಿಂದಲೇ ಸೃಷ್ಟಿಯಾಗತೊಡಗಿದವು. ಇದು ಕೃಷ್ಣರ ಅನನ್ಯತೆಗೆ ಕಾರಣವಾಗಿದೆ. ನವ್ಯದ ಪ್ರಭಾವವೂ ಯೌವನಕ್ಕೆ ತಕ್ಕ ಉತ್ಸಾಹವೂ ಕಾರಣವಾಗಿ ಅವರ ಮೊದಲ ಕಥೆ, ಕವಿತೆಗಳಲ್ಲಿ ಕಾಮವೇ ವಸ್ತುವಾಯಿತು. ನಂತರ ದಿನಕಳೆದಂತೆ ಅವರ ಅಪಾರ ಅನುಭವದ ತುಡಿತಕ್ಕೆ ಕವಿತೆ, ಕಥೆಯ ರೂಪ ಸಾಲದಾಯಿತು. ಅತ್ತ ಹಳ್ಳಿ ಹಾಗೂ ಕಳ್ಳುಬಳ್ಳಿಯ ಸಂಬಂಧಗಳು, ಇತ್ತ ನಗರದ ವ್ಯಾಮೋಹ ಇವುಗಳ ನಡುವೆ ಭೂತ, ವರ್ತಮಾನಗಳಲ್ಲಿ ತೊಳಲಾಡಿದ ತಪ್ತಸ್ಥಿತಿಯ ಅನುಭವಗಳು ಅವರ ಕಥೆಗಳಲ್ಲಿ ಮೊದಮೊದಲು ಮೂಡಿಬಂದವು. ಆದರೆ ಕೃಷ್ಣರ ಮೂಲ ಅನುಭವದ ಬೇರುಗಳು ಬಾಲ್ಯವನ್ನು ಕಳೆದ ಹಳ್ಳಿಯಲ್ಲಿತ್ತು. ಪ್ರಾರಂಭದಿಂದ ಕೊನೆಯ ವರೆಗೆ ಅವರು ಬಾಲ್ಯದ ಅನುಭವಗಳಿಂದ ಮುಕ್ತರಾಗಲಿಲ್ಲ. ಅವರ ಸಾಹಿತ್ಯದಲ್ಲಿ ಆ ಅನುಭವ ಕಾಣಿಸಿಕೊಳ್ಳುತ್ತಲೇ ಹೋಯಿತು. ಕಿಟ್ಟಿಯಿಂದ (ಕಾಡು) ರಾಜುವಿನ (ಭುಜಂಗಯ್ಯನ ದಶಾವತಾರಗಳು) ವರೆಗೆ ಅವರ ಮುಗ್ಧತೆ ಕಾಣಿಸಿಕೊಂಡಿತು.

ಕೃಷ್ಣರ 'ಕಾಡು' ಕಾದಂಬರಿ ಎಪ್ಪತ್ತರ ದಶಕದಲ್ಲಿ ಸಾಹಿತ್ಯಕ ವಲಯದಲ್ಲಿ ಬಿರುಗಾಳಿ ಎಬ್ಬಿಸಿತು. ಚಲನಚಿತ್ರವಾಗಿ ರಾಷ್ಟ್ರ ಪ್ರಶಸ್ತಿಯನ್ನು ಪಡೆಯಿತು. ಭಾರತೀಯ ಮತ್ತು ಭಾರತೀಯೇತರ ಭಾಷೆಗಳಿಗೆ ಅನುವಾದವಾಗಿ ಕೃಷ್ಣರ ಕೀರ್ತಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಿತು. ಚಿಕ್ಕವಯಸ್ಸಿನಲ್ಲಿಯೇ ರಾಷ್ಟ್ರ ಮಟ್ಟದಲ್ಲಿ ಹೆಸರುಮಾಡಿದ ಕೆಲವೇ ಕನ್ನಡ ಸಾಹಿತಿಗಳಲ್ಲಿ ಕೃಷ್ಣರು ಮೊದಲಿಗರೆಂದೇ ಹೇಳಬೇಕು.

'ಪರಸಂಗದ ಗೆಂಡೆತಿಮ್ಮ' ಹಾಗೂ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿ ಬರೆದು ಖ್ಯಾತಿಯನ್ನು ಹೆಚ್ಚಿಸಿಕೊಂಡರು. ಈ ಎರಡೂ ಕಾದಂಬರಿಗಳು ಚಲನಚಿತ್ರಗಳಾಗಿ ಜನಮನ್ನಣೆ ಪಡೆದವು.

ಕೃಷ್ಣರು ಬರೆದ ಕವಿತೆಗಳು, ಕಥೆಗಳು ಹಾಗೂ ಮೂರು ಕಾದಂಬರಿಗಳು ಇತರ ಭಾರತೀಯ ಭಾಷೆಗಳಾದ ಹಿಂದಿ, ಮಲೆಯಾಳಂ, ತೆಲುಗು ಹಾಗೂ ಅನ್ಯದೇಶ ಭಾಷೆಯಾದ ಇಂಗ್ಲಿಷಿಗೆ ಅನುವಾದಗೊಂಡವು. ಅವರು ಕನ್ನಡದಲ್ಲಿ ಬರೆದು ಎಷ್ಟು

ಪ್ರಸಿದ್ಧಿಯನ್ನು ಪಡೆದರೋ ಅಷ್ಟೇ ಪ್ರಸಿದ್ಧಿಯನ್ನು ಮಲೆಯಾಳಂನಲ್ಲಿ ಪಡೆದರು. ಮಲೆಯಾಳಂನಲ್ಲಿ ಕೃಷ್ಣರ ಮೂರು ಕಾದಂಬರಿಗಳು ಬಹು ಜನಪ್ರಿಯವಾಗಿ ಅವರು ತಮ್ಮ ಭಾಷೆಯ ಸಾಹಿತಿ ಎಂಬಷ್ಟು ಪ್ರೀತಿಸಿದರು. ಮಲೆಯಾಳಂ ಭಾಷಿಕರನ್ನು ಕೃಷ್ಣರ ಸಾಹಿತ್ಯ ಅಷ್ಟು ಹುಚ್ಚು ಹಿಡಿಸಿತ್ತು.

ಕೃಷ್ಣರ ವ್ಯಕ್ತಿತ್ವ ತುಂಬ ವಿಚಿತ್ರವಾದದ್ದು. ಅಪಾರ ಸ್ನೇಹ-ಪ್ರೀತಿಯನ್ನು ತುಂಬಿಕೊಂಡ ಅವರು ಅದ್ಭುತ ವಾಚಾಳಿಯಾಗಿದ್ದರು. ಮಾತು ಅವರ ಬದುಕಿನ ಬಹುಭಾಗವನ್ನು ಆವರಿಸಿಕೊಂಡಿತ್ತು. ವಿಚಿತ್ರವೆಂದರೆ ಅವರ ಸಾಹಿತ್ಯ ಮೌನದಿಂದ ತುಂಬಿದೆ. ಅವರು ಮಾತಾಡತೊಡಗಿದರೆ ಅವರದೊಂದೆ ಮಾತು. ಯಾವುದೇ ಗಂಭೀರ ಚಿಂತನೆಯಿರಲಿ, ಖಾಸಗಿ ಮಾತುಗಳಿರಲಿ – ಮಾತುಗಳು ಒಂದೇ ರೀತಿಯ ಅಬ್ಬರದಿಂದ ಕೂಡಿರುತ್ತಿದ್ದವು. ಯಾರನ್ನೋ ಗೇಲಿ ಮಾಡಲು ತೊಡಗಿದರೆ ಗೇಲಿಗೆ ಸಿಕ್ಕ ವ್ಯಕ್ತಿ ಚಿಂದಿಯಾಗಿ ಬಿಡುತ್ತಿದ್ದ. ಹೊಗಳಿಕೆಗೆ ಸಿಕ್ಕರೆ ಹೊಗಳಿಕೆಗೆ ಒಳಗಾದ ವ್ಯಕ್ತಿಗೇ ಮುಜುಗರವಾಗುವಂತೆ ಮಾಡುತ್ತಿದ್ದರು.

ಶ್ರೇಷ್ಠ ಸಾಹಿತ್ಯವನ್ನೇ ಇಷ್ಟಪಡುವ ಕೃಷ್ಣರು, ಸಾಹಿತ್ಯಶ್ರೇಷ್ಠರನ್ನು ಕಂಡರೆ ಅಪಾರ ಪ್ರೀತಿಸುತ್ತಿದ್ದರು. ಅವರ ದೇಶ, ಭಾಷೆ ಯಾವುದೇ ಇರಲಿ ಅವರನ್ನು ಗೌರವಿಸುತ್ತಿದ್ದರು. ರಷ್ಯನ್ ಸಾಹಿತಿಗಳನ್ನು ಇಷ್ಟ ಪಡುತ್ತಿದ್ದ ಅವರು ಸಂಪಾದಿಸುತ್ತಿದ್ದ 'ಪುಸ್ತಕ ಪ್ರಪಂಚ' ಪತ್ರಿಕೆಯಲ್ಲಿ ಒಳ್ಳೆಯ ಸಾಹಿತಿಗಳ ಸಾಹಿತ್ಯವನ್ನು ಕನ್ನಡಕ್ಕೆ ತಂದು ಪರಿಚಯಿಸಿದರು. ಕೃಷ್ಣರಿಗೆ ವೈಕಂ ಮಹಮ್ಮದ್ ಬಷೀರ್, ಎಂ.ಟಿ. ವಾಸುದೇವನ್, ನಿರ್ಮಲ್ ವರ್ಮಾ, ಟಾಲ್‌ಸ್ಟಾಯ್, ದಸ್ತಯೇವಸ್ಕಿ ಮುಂತಾದವರ ಬಗ್ಗೆ ಅಪಾರ ಪ್ರೀತಿಯಿತ್ತು. ಕನ್ನಡದಲ್ಲಿ ಕುವೆಂಪು, ಪು.ತಿ.ನ. ರಾವ್ ಬಹದ್ದೂರ್, ದೇಜಗೌ ಮುಂತಾದವರ ಬಗ್ಗೆ ಪ್ರೀತಿ-ಗೌರವ ಹೊಂದಿದ್ದರು. ಅದಕ್ಕಾಗಿಯೇ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಬಗ್ಗೆ 'ಅವಲೋಕನ', ರಾವ್‌ಬಹದ್ದೂರ್ ಅವರ 'ಗ್ರಾಮಾಯಣ' ಕಾದಂಬರಿಯನ್ನು ಕುರಿತು 'ಗ್ರಾಮಾಯಣ ಸಮೀಕ್ಷೆ', ದೇಜಗೌ ಅವರ ಬಗ್ಗೆ 'ಅಂತ:ಕರಣ' ಎಂಬ ಗ್ರಂಥಗಳನ್ನು ಸಂಪಾದಿಸಿದರು. ಪು.ತಿ.ನ.ರ ಬಗ್ಗೆ ಸುಂದರ ಕವನವನ್ನು ಬರೆದರು. 'ಸಮೀಕ್ಷಕ' ಎಂಬ ಪತ್ರಿಕೆಯನ್ನು ಕೆಲವು ದಿನ ಹೊರ ತಂದರು.

ಅಪಾರ ಮಹತ್ವಾಕಾಂಕ್ಷಿಯಾದ ಕೃಷ್ಣರು ತಾವೊಬ್ಬ ಬಹು ಪ್ರಸಿದ್ಧ ಸಾಹಿತಿಯಾಗಬೇಕೆಂಬ ಕನಸುಕಂಡಿದ್ದರು. ಶ್ರೇಷ್ಠಕೃತಿಗಳನ್ನು ಬರೆಯಬೇಕೆಂಬ ಅದಮ್ಯ ಬಯಕೆಯನ್ನು ಮನದಲ್ಲಿಟ್ಟುಕೊಂಡ ಅವರು ಕನ್ನಡ ಸಾಹಿತ್ಯಕ್ಕೆ ಮೌಲಿಕವಾದುದನ್ನೇ ಕೊಟ್ಟರು. ಆಲನಹಳ್ಳಿ ಎಂಬ ಹಳ್ಳಿಯಲ್ಲಿ ರೈತ ಕುಟುಂಬದ ಬೆಟ್ಟೇಗೌಡ, ಸಣ್ಣಮ್ಮರ ಮಗನಾಗಿ ಕೃಷ್ಣರು ಹುಟ್ಟಿದ್ದು ಏಪ್ರಿಲ್ ೩, ೧೯೪೭ರಲ್ಲಿ.

ಕಾವ್ಯ – ಕಥೆ – ಕಾದಂಬರಿ

ಕಾವ್ಯ

ಮಣ್ಣಿನ ಹಾಡು (೧೯೬೬): ಕವಿತೆಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು. ಬಿ.ಎ. ವಿದ್ಯಾರ್ಥಿಯಾಗಿದ್ದಾಗಲೇ ೨೫ ಕವನಗಳಿರುವ ಈ ಸಂಕಲನ ಹೊರಬಂದಿತು. ಆಗ ಅವರಿಗೆ ಹದಿನೆಂಟು-ಹತ್ತೊಂಬತ್ತರ ಹರೆಯ. ಇಷ್ಟು ಚಿಕ್ಕವಯಸ್ಸಿನಲ್ಲಿ ಕವಿತೆ ಬರೆದವರು ಕನ್ನಡದಲ್ಲಿ ವಿರಳವೆಂದೇ ಹೇಳಬೇಕು.

ಪ್ರಾರಂಭದ ಅವರ ಕಾವ್ಯಾಭಿವ್ಯಕ್ತಿಗೆ ಉಕ್ಕುವ ಯೌವನೋತ್ಸಾಹಕ್ಕೆ ಸಂಬಂಧಿಸಿದ ಕಾಮವೇ ಪ್ರಧಾನ ವಸ್ತು. ಬಹುಪಾಲು ಕವಿತೆಗಳಲ್ಲಿ ದೈಹಿಕ ಕಾಮದ ವಿವರಗಳು ಎದ್ದು ಕಾಣುತ್ತವೆ.

"ಮದಿಸಿದ ಸಲಗದುದ್ವೇಗದಲಿ
ಬೆದೆ ಕಡಸ ಬೆನ್ನಟ್ಟಿ ಎಲಿವಿಲಿ ಒದ್ದಾಡಿದರೂ ಬಿಡದೆ
ತುಂಬುಮೈ ಏರಿಳಿವುಗಳ ಹಳ್ಳಕೊಳ್ಳಗಳಿಗೀ
ಅಂಗಾಂಗಳಲ್ಲುಕ್ಕುತಿಹ ಉನ್ಮತ್ತ ವಸಂತವ
ಹಾಯಿಸುವೆ (ಬಿಡು ನನ್ನ, ಬಿಡು ನನ್ನ)

ಇದು ಈ ಕವಿತೆಗಳಲ್ಲಿನ ನಾಯಕನ ಮುಖ್ಯ ಧೋರಣೆಯಾಗಿದೆ. ಮುಕ್ತ ಲೈಂಗಿಕ ವ್ಯವಹಾರ ಬಯಸುವ ಈ ನಾಯಕ, ಸಮಾಜ ಒಪ್ಪಿಕೊಂಡಿರುವ ಯಾವುದೇ ನೈತಿಕ ಕಟ್ಟುಪಾಡುಗಳನ್ನು ಒಪ್ಪಿಕೊಳ್ಳುವುದಿಲ್ಲ. ಕಾಮಾತುರನಾಗಿ ತುಂಬು ಯೌವ್ವನದ ಹೆಣ್ಣುಗಳನ್ನು ಭೋಗಿಸಿಯೇ ಬಿಡುವ ಮನೋಭಾವದವನು. ದೇಹಸುಖವೇ ಅಂತಿಮ ಗುರಿಯೆಂದು, ವಿಷಯಾಸಕ್ತಿಗೆ ಸಂಬಂಧಿಸಿದ ಉತ್ಕಟತೆಯನ್ನು ಅನುಭವಿಸುವುದೇ ಯೌವನದ ಸಾರ್ಥಕತೆ - ಎಂದು ಭಾವಿಸಿದಂತಿದೆ. ತನ್ನ ದೃಷ್ಟಿಕೋನದಲ್ಲಿಯೇ ಮುನ್ನುಗ್ಗುವುದರಿಂದ ಈ ನಾಯಕ ಹೆಣ್ಣಿನ ಮನೋಧರ್ಮ ಯಾವ ಬಗೆಯದ್ದು ಎಂಬ ಬಗೆಗೆ ಯೋಚಿಸುವುದಿಲ್ಲ.

ಕಗ್ಗಲ್ಲ ಬಸಿರನ್ನೇ ಕೊರೆಕೊರೆದು
ಪಾತಾಳಗಂಗೆ ಹೊರಗುಕ್ಕಿಸದೆ ಬಿಡಲಾರೆ (ಪ್ರತಿಜ್ಞೆ)

ಎಂಬ ತನ್ನ ಹರೆಯದ ಸಾಮರ್ಥ್ಯವನ್ನು ತೋರಿಸುವ ಛಲವೇ ಎದ್ದು ಕಾಣುತ್ತದೆ. ಈ ಬಗೆಯ ಧೋರಣೆಯಿಂದ ಹೊರತಾದ ಯಾವುದೇ ಅನುಭವವನ್ನು ಅಭಿವ್ಯಕ್ತಿಸಲು ತವಕಿಸಿದಾಗಲೂ ರತಿಗೆ ಸಂಬಂಧಿಸಿದ ವಿವರಗಳಿಂದ ಮನಸ್ಸು ಮುಕ್ತವಾಗುವುದಿಲ್ಲ. ನೈತಿಕತೆಯನ್ನು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ, ಆದರೆ ಪಾಪ ಪ್ರಜ್ಞೆಯಿಂದ ನಾಯಕ ತನ್ನನ್ನೇ ತಾನು ನೀಚ, ನಾಯಿ, ಕೀಚಕ ಎಂದು ಹೀಗಳೆದುಕೊಂಡು ನರಳುತ್ತಾನೆ. 'ಬೆಳಗು' ಎನ್ನುವ ಕವಿತೆ, ಬೆಳಗಿನ ಚಿತ್ರಗಳನ್ನು ಕಟ್ಟಿಕೊಡುವಾಗಲೂ ಪೋಲಿಭಾವಗಳು ನುಗ್ಗಿ ಬಂದುಬಿಡುತ್ತವೆ. ಆದರೂ ಈ 'ಬೆಳಗು' ಪದ್ಯದಲ್ಲಿ ಶೂದ್ರನೊಬ್ಬನ ಬೆಳಗಿನ ಅನುಭವವು ವಿಶಿಷ್ಟವಾಗಿ ವ್ಯಕ್ತವಾಗಿದೆ. 'ಗೌರಿ', 'ಸಂಜೆ ನೆರಳು', 'ಬೇಡ' ಮುಂತಾದ ನೂರಾರು ಕವಿತೆಗಳನ್ನು ಹೊರತು ಪಡಿಸಿದರೆ ಉಳಿದೆಲ್ಲವೂ ಕಾಮಸಂಬಂಧೀ ದೈಹಿಕ ಸುಖದ ವಿವರಗಳಿಂದ ತುಂಬಿ ಕೊಂಡಿವೆ. ಆದರೆ ಈ ಬಗೆಯ ಅನುಭವದ ಅಭಿವ್ಯಕ್ತಿಯಲ್ಲಿ ಕವಿ ಬಿಸಿಯನ್ನು ಕಳೆದುಕೊಳ್ಳುವುದಿಲ್ಲ. ಭಾವ-ಭಾಷೆಗಳಲ್ಲಿ ಪ್ರಾಮಾಣಿಕತೆ ಕಂಡುಬರುತ್ತದೆ. ಹಳ್ಳಿಯ ದಟ್ಟ ಅನುಭವದ ವಿವರಗಳು ಶಕ್ತ ಭಾಷೆಯಲ್ಲಿ ಪ್ರತಿಮೆಗಳಾಗಿ ನಿಲ್ಲಲು ಪ್ರಯತ್ನಿಸಿವೆ. ಮುಖ್ಯವಾಗಿ ಕವಿಯ ಮಣ್ಣಿ ಜತೆಗಿನ ಗಟ್ಟಿ ಸಂಬಂಧ ಈ ಸಂಕಲನದಲ್ಲಿ ಕಾಣುವುದೊಂದು ವಿಶೇಷ.

ಕಾಡುಗಿಡದ ಹಾಡುಪಾಡು (೧೯೭೩): ಈ ಸಂಕಲನದಲ್ಲಿ ೧೭ ಕವಿತೆಗಳಿವೆ. ಪ್ರಾರಂಭದ ಕವಿತೆಗಳಲ್ಲಿ ಕಂಡು ಬಂದ ಕಾಮಸಂಬಂಧೀ ವಸ್ತುವಿನ ಏಕತಾನತೆಯಿಂದ ಈ ಸಂಕಲನವು ಹೊರತಾಗಿದೆ. ಅನುಭವದ ದೃಷ್ಟಿಯಿಂದಲೂ ವಸ್ತುವಿನ ದೃಷ್ಟಿಯಿಂದಲೂ ಇಲ್ಲಿಯ ಕವಿತೆಗಳು ಅರ್ಥವಿಸ್ತಾರದೊಂದಿಗೆ ಹೊಸ ಆಯಾಮ ಪಡೆದುಕೊಂಡಿವೆ. ಮಣ್ಣಿ ಜತೆಗಿನ ಗಾಢಪ್ರೇಮ ಪ್ರತಿ ಕವಿತೆಯಲ್ಲೂ ತುಂಬಿಕೊಂಡಿದೆ.

> "ಈ ಕಪ್ಪನೆಯ ಮಣ್ಣಲ್ಲಿ ಕಾಲಿಟ್ಟೊಡನೆ
> ಹಿಗ್ಗಿ ಪುಳಕಗೊಳ್ಳುವ ನನ್ನೀ ಮೈಮನಕ್ಕೆ
> ಮಣ್ಣಜೊತೆ ಯಾವ ಮೋಹ ಬಂಧವೊ ಕಾಣೆ (ಮಣ್ಣಾಸೆ)

ಕವಿ ಬೆರಗಾಗಿ ಹೇಳುತ್ತಾನೆ. ಹೆಣ್ಣಿರಲಿ, ಗಂಡಿರಲಿ ದಲಿತರ ಬಗ್ಗೆ ಬರೆಯುವಾಗ ಈ ಕವಿಯ ಒಲವು ಯಾವ ಬಗೆಯದೆಂದು ಗೊತ್ತಾಗುತ್ತದೆ. 'ಭೋಗಿ'ಯ ಅಧಃಪತನಕ್ಕೆ ಪುರುಷ ಸಮಾಜವೇ ಕಾರಣವಾದರೂ, ಅದು ಯಾರ ವ್ಯಥೆಗೂ ಕಾರಣವಾಗುವುದಿಲ್ಲ. 'ಮುರಿದ ಮೀಸಲ ಹಂಚಿ ಉಂಡವರ' ಬಗ್ಗೆ ಸಿಟ್ಟು ಮತ್ತು ವಿಷಾದದಿಂದ ಮರುಗುತ್ತಾನೆ. ಇಂಥ ಕವಿತೆಯಲ್ಲಿ ಹೆಣ್ಣಿನ ಬಗ್ಗೆ ಕವಿಯ ಧೋರಣೆಯೇ ಬೇರೆ ಬಗೆಯದ್ದು. ದಲಿತನಾದ 'ಕರಿಯ' ತನ್ನ ಬದುಕಿನುದ್ದಕ್ಕೂ

ಗೌಡರ ಜೀತದಾಳಾಗಿ ದುಡಿದು ಜೀವ ತೇಯ್ದಿದ್ದರೂ ಅವನ ಸಾವು ಗೌಡರಿಗೆ ತಟ್ಟುವುದಿಲ್ಲ.

"ಮುದಿ ಎತ್ತು ಅಥವಾ ಒಂದು ಮುದಿ ಎಮ್ಮೆ
ಸತ್ತಷ್ಟೆ-ಕರಿಯನ ಸಾವು" (ಕರಿಯ)

ಕವಿತೆಯುದ್ದಕ್ಕೂ, ಕರಿಯ ಬದುಕಿನಲ್ಲಿ ಉಳಿಸಿಕೊಂಡಿದ್ದ ಜೀವಂತಿಕೆಯನ್ನು ಕವಿ ನೆನೆಯುತ್ತಾನೆ. ಇಂಥ ಕವಿತೆಗಳಲ್ಲಿ ಕಥನಾಂಶ ಕಂಡುಬರುತ್ತದೆ. "ಚಿಟ್ಟೆ ಮತ್ತು ಮೇಷ್ಟ್ರು" ಸಂಕಲದಲ್ಲಿರುವ ಉತ್ತಮ ಕವಿತೆ. ಈ ಕವಿತೆಯಲ್ಲಿ ಕೃಷ್ಣ ಅವರು ತಮ್ಮ ಬದುಕಿನುದ್ದಕ್ಕೂ ಯಾವ ಬಗೆಯ ನಂಬಿಕೆ ಇಟ್ಟುಕೊಂಡಿದ್ದರೋ ಅದನ್ನೇ ಬಲವಾಗಿ ನಂಬಿಕೊಂಡು ಬಂದರು ಎಂಬುದು ವ್ಯಕ್ತವಾಗುತ್ತದೆ. ಯಾವುದೇ ಒಂದು ನಂಬಿಕೆ ಕಾಲಾಂತರದಲ್ಲಿ ತನ್ನ ತಿಳುವಳಿಕೆಗೆ ಅದು ವಿರುದ್ಧವಾದ ಮತ್ತು ಬೇರೊಂದು ಸತ್ಯ ಎದುರಾದಾಗಲೂ ತನ್ನ ನಂಬಿಕೆಯನ್ನು ಬದಲಾಯಿಸುವುದಕ್ಕೆ ಮನಸ್ಸು ಒಪ್ಪುವುದಿಲ್ಲ. "ಕಂಬಳಿ ಹುಳವೆ ಬಣ್ಣದ ಚಿಟ್ಟೆಯಾಗುತ್ತದೆ" ಎಂದು ಮೇಷ್ಟ್ರು ಹೇಳಿದರೂ ನಂಬಿಕೆ ಬರುವುದಿಲ್ಲ. ಬಂದರೂ ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಚಿಟ್ಟೆಯ ಮೇಲಿನ ಪ್ರೀತಿ ಕಂಬಳಿ ಹುಳದ ಮೇಲೆ ತೋರಿಸಲಾಗುವುದಿಲ್ಲ.

"ಸೂರ್ಯನ ಸುತ್ತ ಭೂಮಿ ಸುತ್ತುವುದೆ
ನಿಜವಾಗಿ ಬಿಟ್ಟಂತೆ ಈಗ
ಇದೂ ನಿಜವಾಗಿ ಬಿಟ್ಟರೆ?" (ಚಿಟ್ಟೆ ಮತ್ತು ಮೇಷ್ಟ್ರು)

ಎಂಬ ಭಯ. ಇದು ಮುಗ್ಧ ಭಯ. ಇಲ್ಲಿಯ ಮುಗ್ಧತೆಯೇ ಕೃಷ್ಣನವರ ಸಾಹಿತ್ಯದ ತುಂಬ ಹಲವಾರು ಬಗೆಯಲ್ಲಿ ಕಂಡುಬರುತ್ತದೆ. ಸೊಗಸಾದ ಶಬ್ದಚಿತ್ರವಾಗಿ ಮೂಡಿಬಂದ 'ಪು.ತಿ.ನ.' ಎಂಬ ಕವಿತೆಯು ಪು.ತಿ.ನ. ರ ವ್ಯಕ್ತಿತ್ವದ ಸಂಕೀರ್ಣತೆಯನ್ನು ಪರಿಚಯಿಸುತ್ತದೆ. 'ಕಾಡು' 'ಮೃಗಗಳು', 'ಸರ್ಪ', 'ಪ್ರೇತ' ಮುಂತಾದ ಕವಿತೆಗಳು ಮೊದಲ ಸಂಕಲನದ ಕವಿತೆಗಳನ್ನೇ ನೆನಪಿಗೆ ತರುತ್ತವೆ. 'ಅಜ್ಜ ಸತ್ತ ಸಂಜೆ' 'ದೇವಿ', 'ಕಾಡುಗಿಡದ ಹಾಡುಪಾಡು' ಮುಂತಾದವು ವ್ಯಕ್ತಿ ಮತ್ತು ಬದುಕಿನ ಮುಖಾಮುಖಿಯ ಒಳವಿವರಗಳು ಮತ್ತು ಅವುಗಳ ನಡುವಿನ ಸಂಘರ್ಷದ ಸ್ವರೂಪ ಕಾಣುತ್ತದೆ.

ಪ್ರಕಟಿಸಲಾಗದ ಪದ್ಯಗಳು (೧೯೮೨): ಇದು ಇವರ ಮೂರನೆಯ ಸಂಕಲನ. ೫೦ ಕವಿತೆಗಳಿವೆ. ಇಲ್ಲಿಯ ಎಲ್ಲ ಕವಿತೆಗಳಿಗೆ ಒಂದು ತಾತ್ವಿಕತೆಯನ್ನು ಜೋಡಿಸಿ ನೋಡುವುದಕ್ಕೆ ಆಗುವುದಿಲ್ಲ. ಯಾವುದೇ ಒಂದು ದೃಷ್ಟಿಕೋನದ ಹಿನ್ನೆಲೆಯಿಂದ ಇವು

ರೂಪಗೊಂಡಿಲ್ಲ. ವೈವಿಧ್ಯಮಯ ಅನ್ನಿಸಿಕೆಗಳು ಕವಿತೆಗಳಲ್ಲಿ ವ್ಯಕ್ತಗೊಂಡಿವೆ. ಯಾವುದೇ ಕವಿತೆ ತೆಗೆದುಕೊಂಡು ನೋಡಿದರೂ ಅಲ್ಲಿ ಒಂದು ಅನುಭವವನ್ನು ಗಟ್ಟಿಯಾಗಿ, ಸಮರ್ಥವಾಗಿ ಅರ್ಥೈಸಬೇಕೆಂಬ ಕಾಳಜಿ ಕಾಣುವುದಿಲ್ಲ. ನಿತ್ಯ ಬದುಕಿನ ಪ್ರತಿಕ್ಷಣದಲ್ಲಿ ಹೊಳೆಯುವ ಯಾವುದೋ ಸಣ್ಣ ಘಟನೆ, ಕಾಣುವ ದೃಶ್ಯ, ಪಡೆಯುವ ಅನುಭವ ಮುಂತಾದವುಗಳನ್ನು ಕವಿತೆಯ ಮೂಲಕ ವ್ಯಕ್ತಪಡಿಸಿದ್ದಾರೆ. 'ವಿದಾಯ', 'ಒಂದು ಪ್ರಣಯ ಪ್ರಸಂಗ', 'ಹುಲಿ ಬಂತು ಹುಲಿ', 'ನಡುರಾತ್ರಿಯಲ್ಲೊಂದು ಘಟನೆ' ಮತ್ತು 'ವಿಲಾಸಿನಿಯೊಬ್ಬಳ ಹಾಡು' ಎಂಬ ಕವಿತೆಗಳನ್ನು ಬಿಟ್ಟರೆ, ಉಳಿದವು ಚಿಕ್ಕ ಕವಿತೆಗಳೆ ಈ ಸಂಕಲದಲ್ಲಿವೆ. 'ಪ್ರಕಟಿಸಲಾಗದ ಪದ್ಯಗಳು' ಎಂದು ಹೇಳುತ್ತಲೇ ಪ್ರಕಟಿಸಿರುವ ಕವಿ, ಈ ಕವಿತೆಗಳ ಕುರಿತು.

ಬಲಿಯುವ ಮುಂಚೆಯೆ
ಖುಷಿಗೆ
ಕಿತ್ತವು
ಬೇಕೆಂದೆ
ಬಿಸಿಲಲ್ಲಿ ಸಹಜ ಬಣ್ಣ ತಿರುಗಲು
ಬಿಡದೆ
ಕಾಯದೆ
ಬೇಕೆಂದೆ - ಕಿತ್ತು
ಅಡೆಕಟ್ಟಿ
ಹಣ್ಣಾಗಿಸಿದವು

- ಎಂದು ಹೇಳಿಕೊಂಡಿದ್ದರೂ, ಈ ಕವಿ ಪುನ: ಹೇಳುವ ಮಾತು ಗಮನಾರ್ಹವಾಗಿದೆ:

ಇವು ನನ್ನವು
ನನ್ನ ಮನ
ದ್ರವಿಸಿದವು.

ವೈವಿಧ್ಯಮಯ ಅನುಭವಗಳು ಭಾವ-ಭಾಷೆಯಲ್ಲಿ ಪ್ರತಿಮೆಗಳಾಗಿ ನಿಂತ ಅನೇಕ ಸಣ್ಣ ಕವಿತೆಗಳು ಕ್ಷಣಕಾಲ ಮುದ ನೀಡುತ್ತವೆ. ಪ್ರಣಯ ಪ್ರಸಂಗಗಳಿರಲಿ, ವೈಯಕ್ತಿಕ ಬದುಕಿನಲ್ಲಿ ಎದುರಿಸಿದ ಮನುಷ್ಯ ಸಂಬಂಧಗಳ ಸುಖ-ದು:ಖಗಳಾಗಲಿ, ಸಂಸಾರಿಕ ಸಂಬಂಧಗಳಿರಲಿ ಎಲ್ಲವನ್ನೂ ಪ್ರಾಮಾಣಿಕವಾಗಿ ಅಭಿವ್ಯಕ್ತಗೊಳಿಸಲಾಗಿದೆ.

ಡೋಗ್ರಾ ಪಹಾಡಿ ಪ್ರೇಮಗೀತೆಗಳು (೧೯೭೪): ಇದೊಂದು ಅನುವಾದಿತ ಸಂಕಲನ. ಕಾಶ್ಮೀರದ ಗುಡ್ಡಗಾಡಿನ (ಪಹಾಡ್) ಜನಾಂಗದಲ್ಲಿ ಹಾಡುತ್ತಿದ್ದ ಜನಪದ ಗೀತೆಗಳಿವು. ಡೋಗ್ರಿ ಭಾಷೆಯಲ್ಲಿ ಜನಪದರು ಹಾಡುತ್ತಿದ್ದ ಪ್ರೇಮಗೀತೆಗಳನ್ನು ಡಾ. ಕರಣಸಿಂಗ್ ಅವರು ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಇವುಗಳನ್ನು ಆಲನಹಳ್ಳಿಯವರು ಕನ್ನಡಕ್ಕೆ ಶಿಷ್ಟಭಾಷೆಯಲ್ಲಿ ತಂದಿದ್ದಾರೆ. "ಅವರ ಜಾನಪದ ಸತ್ವ ಮತ್ತು ತಾಜಾತನ ನನ್ನ ಮನಸ್ಸನ್ನು ಸೂರೆಗೊಂಡಿತು. ಆ ಗುಣಗಳಿಗೆ ಲೋಪ ಬರದಂತೆ ಆ ಗೀತೆಗಳನ್ನು ಕನ್ನಡಕ್ಕೆ ಅಳವಡಿಸುವ ಪ್ರಯತ್ನ ಮಾಡಿದ್ದೇನೆ" ಎಂದು ಅವರು ಹೇಳಿಕೊಂಡಿದ್ದಾರೆ.

ಜನಪದರ ಈ ಹಾಡುಗಳಿಗೆ ಅವರದೇ ಆದ ಒಂದು ಡೋಗ್ರಿ ಭಾಷೆಯಿದೆ. ಲಯ, ಛಂದಸ್ಸಿನ ಸಂಗೀತ ಗುಣವನ್ನು ಹೊಂದಿರುವ ಈ ಗೀತೆಗಳನ್ನು ಇಂಗ್ಲಿಷಿಗೆ ತಂದಾಗಲೇ ಮೂಲಸತ್ವದ ಕೊರತೆಯಿರುತ್ತದೆ. ಇಂಗ್ಲಿಷಿನಿಂದ ಕನ್ನಡಕ್ಕೆ ಶಿಷ್ಟಭಾಷೆಯಲ್ಲಿ ತಂದಿರುವ ಈ ಗೀತೆಗಳಲ್ಲಿ ಮೂಲದ ಯಾವ ಗುಣವೂ ಉಳಿದಿರುವುದು ಕಷ್ಟ. ನವೋದಯ ಕಾಲದಲ್ಲಿ ರಚಿತವಾಗುತ್ತಿದ್ದ ಭಾವಗೀತೆಗಳ ಮಾದರಿಯಲ್ಲಿ ಈ ಗೀತೆಗಳಿವೆ. ಪ್ರಣಯಿಗಳ ವಿರಹ, ಕುತೂಹಲ ತುಂಬಿದ ಮೌನ ಸಂಭಾಷಣೆ, ಸರಸ, ವಿರಸಗಳ ಪ್ರೇಮಮಯ ಸನ್ನಿವೇಶಗಳ ಚಿತ್ರಣ ಈ ಗೀತೆಗಳಲ್ಲಿವೆ. ಒಟ್ಟು ೨೦ ಗೀತೆಗಳು ಈ ಸಂಕಲನದಲ್ಲಿವೆ.

ಕಥೆ

ತಪ್ತ (೧೯೭೦): ಇದು ಇವರ ಮೊದಲನೆಯ ಕಥಾ ಸಂಕಲನ. ಎಂಟು ಕಥೆಗಳಿವೆ. ಬಾಲ್ಯ ಮತ್ತು ಯೌವನಕ್ಕೆ ಸಂಬಂಧಿಸಿದ ಅನುಭವಗಳನ್ನು ಹಳ್ಳಿ ಮತ್ತು ನಗರ ಪರಿಸರದಲ್ಲಿಟ್ಟು ನಿರೂಪಿಸಲಾಗಿದೆ. ಕಳ್ಳ-ಬಳ್ಳಿಯ ಸಂಬಂಧವಿರಲಿ, ಪ್ರೇಮ-ಕಾಮುಗಳ ಸಂಬಂಧವಿರಲಿ ಅಥವಾ ಮನುಷ್ಯ ಮತ್ತು ಬದುಕುಗಳ ಸಂಬಂಧವಿರಲಿ ಅವುಗಳನ್ನು ಇಲ್ಲಿ ಮಾನವೀಯ ನೆಲೆಯಲ್ಲಿ ಕಂಡು ಅರ್ಥೈಸಲು ಪ್ರಯತ್ನಿಸಲಾಗಿದೆ. ಬಾಲ್ಯದ ಕುತೂಹಲ, ಯೌವನದ ಉತ್ಸಾಹಗಳ ನಡುವೆ ನೈತಿಕತೆಯ, ವೈಚಾರಿಕತೆಯ ಸಮತೋಲನ ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸುವುದು ಇಲ್ಲಿಯ ಮುಖ್ಯ ಆಶಯವಾಗಿದೆ. ಕಥೆಯಲ್ಲಿ ನಡೆಯುವ ಸನ್ನಿವೇಶಗಳು, ಘಟನೆಗಳು ಮತ್ತು ಪಾತ್ರಗಳನ್ನು ಗಮನಿಸಿದಾಗ ಕತೆಗಾರರ ದಟ್ಟವಾದ ಹಳ್ಳಿಯ ಸಂಬಂಧ ನಿಜವಾದಷ್ಟು ಪರಿಣಾಮಕಾರಿಯಾಗಿ ನಗರ ಸಂಬಂಧಿ ಅನುಭವಗಳು ನಿಜವಾಗುವುದಿಲ್ಲ ಎನ್ನಿಸುತ್ತದೆ. ಕಥೆಗಾರರು ಕಥೆ ಹೇಳುವ ಕಲೆಯನ್ನು ಬಲ್ಲವರು. ಹೂವು ಅರಳುವಂತೆ ಸಲೀಸಾಗಿ ಕಥೆಯ ವಿವರಗಳನ್ನು ಬಿಚ್ಚಿಡುತ್ತಾರೆ. ಯಾವುದೇ ತರ್ಕ, ಸಿದ್ಧಾಂತಗಳ ಮಂಡನೆಗೆ

ನಿಲ್ಲದೆ; ದು:ಖದ ಪ್ರಸಂಗವಿರಲಿ, ಪ್ರಣಯ ಸನ್ನಿವೇಶವಿರಲಿ, ಸಾವಿನ ಘಟನೆಯಿರಲಿ ಅಥವ ಇನ್ನಾವುದೇ ಇಕ್ಕಟಿನ ಸ್ಥಿತಿಯಿರಲಿ ಅವೆಲ್ಲವೂ ಜೀವಂತಿಕೆಯಿಂದ, ಲವಲವಿಕೆಯಿಂದ ಕೂಡಿರುತ್ತವೆ. ಸಂಕೀರ್ಣತೆಯಿಲ್ಲದ ಇಲ್ಲಿಯ ಪಾತ್ರಗಳು ಯಾವುದೇ ಕ್ರೈಸಿಸಿಗೆ ಒಳಗಾದರೂ ಅಂತಿಮ ಆಯ್ಕೆ ಸರಳವಾಗಿರುತ್ತದೆ. ಅದು ಕಥೆಗಾರರ ಲಿಬರಲ್ ಮನೋಭಾವವೆಂದು ಹೇಳಬಹುದು.

'ಆಗಂತುಕ'ದಲ್ಲಿ ಕಿಟ್ಟಿಯೆಂಬ ಹುಡುಗನ ಮೂಲಕ ಕಥೆ ಬಿಚ್ಚಿಕೊಳ್ಳುತ್ತದೆ. 'ಯಾರೋ ಬರ್‍ತಾರೆ' ಎಂದು ಕಿಟ್ಟಿಗೆ ಅನ್ನಿಸುವುದು ಅಸಹಜವೆಂದು ಅನ್ನಿಸಿದರೂ ಬೆಳಿಗ್ಗೆ ಕೂಗುವ ಕಾಗೆಯಿಂದ ನಂಬಿಕೆ ಇರುವಂತೆ 'ಯಾರೋ ಬರುತ್ತಾರೆ' ಎಂಬುದು ನಿಜ ಅನ್ನಿಸುತ್ತದೆ. ಆ ಮುಗ್ಧ ಕಿಟ್ಟಿಯ ನಂಬಿಕೆ ನಿಜವಾದರೂ ಅದು ಭೀಕರವಾಗಿರುತ್ತದೆ. ಸಾವು ಬಂದು ಅಜ್ಜಯ್ಯನಿಗೆ ಅಮರಿಕೊಳ್ಳುತ್ತದೆ. ಕಿಟ್ಟಿಯಲ್ಲಿ ಸಾವಿನ ಭಯವನ್ನು ತರುವುದು ಸುತ್ತಲಿನ ಜನರ ಪ್ರತಿಕ್ರಿಯೆಯಿಂದ ಮಾತ್ರ. ಆದರೆ "ಅವ್ವ ಅವನು ಬಂದ, ಬಂದ" ಎಂದು ಕಿಟ್ಟಿ ಚೀರುವುದು ಕಥೆಗೆ ಸತ್ವವನ್ನು ತರುವುದಿಲ್ಲ. ಕಿಟ್ಟಿಯ ಮುಗ್ಧ ಜಗತ್ತಿನ ಒಳಗೆ ವಾತ್ಸಲ್ಯ, ಕ್ರೌರ್ಯ ಮತ್ತು ಸಾವು ಎಲ್ಲವೂ ಒಟ್ಟಿಗೆ ತುಂಬಿಕೊಳ್ಳುವ ಪರಿ ಅನನ್ಯವಾದುದ್ದು.

ಕಿಟ್ಟಿಯ ಪ್ರಬುದ್ಧ ರೂಪವನ್ನೇ 'ನೆಲಗುಮ್ಮ' ದಲ್ಲಿ ಕಾಣುತ್ತೇವೆ. ಅಜ್ಜಿ ಸಾವಿನ ಉಡಿಯಲ್ಲಿರುವಾಗ ಮೊಮ್ಮಗ (ನಿರೂಪಕ) ನಿಗೆ ಕರೆ ಬರುತ್ತದೆ. ಅವನಿಗೆ ಅಲ್ಲಿಗೆ ಹೋಗುವುದೆಂದರೆ ಬೇಸರ. ಮೆಲ್ಲಮೆಲ್ಲನೆ ತನ್ನ ಹಾಗೂ ಕಳ್ಳಿ-ಬಳ್ಳಿಯ ಮತ್ತು ಹಳ್ಳಿಯ ಸಂಬಂಧ ಕಡಿದುಕೊಳ್ಳುವ ಹಂತದಲ್ಲಿರುವ ಮನಸ್ಥಿತಿ (?) ಅಕ್ಕನ ಮಗಳನ್ನು ಮದುವೆ ಮಾಡಿಕೊಳ್ಳು ಎಂದು ಅಜ್ಜಿಯ ಕಿರಿಕಿರಿ. ಅದು ಅವನಿಗೆ ಇಷ್ಟವಿಲ್ಲ. ಅವನು ಅಲ್ಲಿಂದ ಬಿಡುಗಡೆ ಹೊಂದಲು ಪರಿತಪಿಸುತ್ತಾನೆ. ಅಜ್ಜಿಯ ಸಾವು, ಅಕ್ಕನ ದು:ಖ, ಊರ ಜನರ ಪ್ರತಿಕ್ರಿಯೆಗಳು ಶಕ್ತವಾಗಿ ಮೂಡಿ ನಿಂತರೂ ಅವನ ಉದ್ವಿಗ್ನತೆಯಿಂದ ಪ್ರತಿಕ್ರಿಯಿಸುವ ಕ್ರಿಯೆಯಿಂದ ಸಹಜವಾಗುವ ಬದಲು ಎಲ್ಲವೂ ಮಾತುಗಳಾಗಿ ಪರಿವರ್ತಿತವಾಗುತ್ತವೆ.

ಈ ನಾಯಕನ ನಿಜವಾದ ರೂಪ ಸ್ವಲ್ಪ ಮಟ್ಟಿಗೆ 'ತಪ್ತ'ದಲ್ಲಿ ಕಾಣುತ್ತದೆ. ಅಕ್ಕನ ಮಗಳು ಗೌರಿಯನ್ನು ಮದುವೆಯಾಗಲು ಒತ್ತಾಯಿಸುತ್ತಾರೆ. ಆದರೆ ಅವನು ಪಟ್ಟಣದ ಪ್ರಭಾಳನ್ನು ಪ್ರೀತಿಸುತ್ತಿದ್ದಾನೆ. ಆಕೆಯೇ ತನಗೆ ಸರಿಯಾದ ಸಂಗಾತಿಯೆಂದು ನಂಬಿಕೊಂಡಿದ್ದಾನೆ. ಆಯ್ಕೆಯ ಸಂದಿಗ್ಧತೆಯಿಂದ ಬಳಲುತ್ತಿದ್ದಾನೆ. ಕಥೆಯ ಪರಿಣಾಮದಲ್ಲಿ ಹಳ್ಳಿಯ ಗೌರಿಯು ನಿಜ ಅನ್ನಿಸಿದಷ್ಟು, ಪ್ರಭಾ ನಿಜ ಅನ್ನಿಸುವುದಿಲ್ಲ. ಯಾಕೆಂದರೆ ನಾಯಕನ ಬೇರುಗಳು ಹಳ್ಳಿಯಲ್ಲಿ ಮತ್ತು ಕಳ್ಳಿ-ಬಳ್ಳಿಯಲ್ಲಿ ಇರುವುದರಿಂದ ಅವನ

ತೊಳಲಾಟ ಸಹಜವಾಗುವುದಿಲ್ಲ. ಗೌರಿಯನ್ನು ಗ್ರಹಿಸುವ ದೃಷ್ಟಿಯಲ್ಲಿ, ಪ್ರಭಾಳನ್ನು ಗ್ರಹಿಸುವ ದೃಷ್ಟಿಯಲ್ಲಿ ವ್ಯತ್ಯಾಸವಿದೆ. ಒಂದರಲ್ಲಿ ಆತ್ಮೀಯತೆಯಿದೆ. ಇನ್ನೊಂದರಲ್ಲಿ ಮೋಹವಿದೆ.

'ತೊರೆ' ಕಥೆಯಲ್ಲಿ ಪ್ರಭು ಮತ್ತು ಲಕ್ಷ್ಮಿಯ ಸಂಬಂಧ ಬೆಸೆಯದೆ ತಪ್ಪಿಹೋಗುತ್ತದೆ. ಆದರೂ ಬೇರೆ ಬೇರೆ ಸಂಬಂಧಗಳಿಂದ ಇಬ್ಬರಿಗೂ ಮದುವೆಯಾಗುತ್ತದೆ. ಪ್ರಭೂನ ಅಣ್ಣನ ಹೆಂಡತಿಯ ತಂಗಿಯೇ ಲಕ್ಷ್ಮಿ. ಮದುವೆಯಾದರೂ ರೋಗಿಷ್ಟ ಗಂಡ ಸತ್ತು, ವಿಧವೆಯಾಗಿ ಅಕ್ಕನ ಮನೆಯಲ್ಲಿರುತ್ತಾಳೆ. ಪ್ರಭು ತಾರಾಳನ್ನು ಮದುವೆಯಾಗಿ ಸುಖವಾಗಿರುತ್ತಾನೆ. ಒಮ್ಮೆ ಊರಿಗೆ ಬಂದಾಗ ಅಲ್ಲೇ ಇದ್ದ ಲಕ್ಷ್ಮಿಯನ್ನು ಕಾಣುತ್ತಾನೆ. ಇಬ್ಬರಿಗೂ ಹಳೆಯ ನೆನಪು ತೀವ್ರವಾಗಿ ಕಾಡುತ್ತವೆ. ಆದರೆ ಅಸಹಾಯಕರು. ಕಥೆಯ ವಸ್ತು ಗಟ್ಟಿಯಾದುದ್ದಲ್ಲ. ಇಬ್ಬರ ಮನಃಸ್ಥಿತಿ ಮತ್ತು ತೊಳಲಾಟದಲ್ಲಿ ಲಕ್ಷ್ಮಿ ಓದುಗರ ಅನುಕಂಪ ಪಡೆಯಬಹುದು. ಪ್ರಭು ಕೊನೆಯಲ್ಲಿ 'ಪಾಪ' ಎಂದು ಉದ್ಗಾರ ತೆಗೆದರೂ ಅದಕ್ಕೆ ಯಾವುದೇ ಅರ್ಥ ಉಳಿಯುವುದಿಲ್ಲ. ಒಂದರ್ಥದಲ್ಲಿ ಅವನು ಅಸಹಾಯಕನೇ ಅನ್ನಿಸಿದರೂ ಅವನ ತೊಳಲಾಟ ಹುಸಿ ಎನಿಸುತ್ತದೆ. ಆದರೆ 'ಸಂಬಂಧ'ದ ನಾಯಕ ನಿಜವಾದ ಅಸಹಾಯಕ. ಅವನು ಶೂದ್ರ. ಲಲಿತ ಬ್ರಾಹ್ಮಣ ಹುಡುಗಿ. ಬಾಲ್ಯದಲ್ಲಿ ಅವರಿಬ್ಬರೂ ಸ್ನೇಹಿತರು; ಮಾನಸಿಕವಾಗಿ ಅವರು ಸಂಗಾತಿಗಳೇ. ಲಲಿತಳಿಗೆ ದರಿದ್ರ ಗಂಡ ಸಿಕ್ಕು ಅವಳ ಬದುಕು ಬರ್ಬರವಾಗುತ್ತದೆ. ಮಡಿಲ ತುಂಬ ಮಕ್ಕಳು. ದರಿದ್ರ ಗಂಡ, ಬಡತನ. ಇಂಥ ಸ್ಥಿತಿಯಲ್ಲಿರುವಾಗ ನಾಯಕ ಲಲಿತಳನ್ನು ಭೇಟಿಯಾಗುತ್ತಾನೆ. ಕೈಲಾದ ಮಟ್ಟಿಗೆ ಸಹಾಯಮಾಡಲು ಹೋದ ನಾಯಕ ಇಲ್ಲಿ ಅಸಹಾಯಕನಾಗಿ ನಿಲ್ಲುತ್ತಾನೆ. ಭಾವನೆಗಳಿಂದ ಕಥೆ ತುಂಬಿಹೋಗಿದೆ. ಓದುಗರಲ್ಲಿ ದುರಂತ ಮನಸ್ಸನ್ನು ಆವರಿಸುತ್ತದೆ.

ಮೇಲಿನ ಕಥೆಗಳಲ್ಲಿ ಕಥೆಗಾರರ ದಟ್ಟವಾದ ಹಳ್ಳಿಯ ಸಂಬಂಧಗಳು, ಅದರಿಂದ ಪಡೆದ ಅನುಭವಗಳು ನಿಜ ಅನ್ನಿಸುತ್ತವೆ. ಆದರೆ ಈ ಸಂಕಲನದ 'ಸೀಮಂತ', 'ಶ್ರಾವಣ' ಮತ್ತು 'ಹುತ್ತ' ಕಥೆಗಳ ಪರಿಸರ, ಸನ್ನಿವೇಶ, ಘಟನೆಗಳು ಹಾಗೂ ವ್ಯಕ್ತಿಗಳು ನಗರಕ್ಕೆ ಸಂಬಂಧಿಸಿದವು. ಇವೆಲ್ಲದರ ಸಂಬಂಧಗಳು ಕಥೆಗಾರರ ದೃಷ್ಟಿಯಿಂದ ಮತ್ತು ಅಭಿವ್ಯಕ್ತಿಯ ಕ್ರಮದಿಂದ ಗಟ್ಟಿ ಅನುಭವಗಳಾಗಿ ಕಾಣಿಸುವುದಿಲ್ಲ. 'ಸೀಮಂತ' ದಲ್ಲಿ ಪದ್ಮ ಪಾಪಪ್ರಜ್ಞೆಯಿಂದ ತಲ್ಲಣಿಸಿದ್ದಾಳೆ. ತನ್ನ ಗಂಡನ ವಿದ್ಯಾರ್ಥಿಯಾದ ಶ್ರೀಧರನ ಸಂಪರ್ಕದಿಂದಾಗಿಯೇ ಗರ್ಭವತಿಯಾದದ್ದೆಂಬ ಕಾರಣದಿಂದ ಗಂಡ ನರಹರಿಗೆ ಪದ್ಮ-ಶ್ರೀಧರನ ಸಂಬಂಧದ ಅರಿವಿದೆ. ಆದರೂ ನಿರ್ಲಿಪ್ತದಿಂದಿದ್ದಾನೆ. ಅಂದಾಗ ಇಲ್ಲಿ ಪದ್ಮಾಳ ನರಳಾಟ ಯಾವುದೇ ಪರಿಣಾಮ ಬೀರುವುದಿಲ್ಲ. ನೈತಿಕತೆಯ ಬಗ್ಗೆ ಕಥೆಗಾರರಿಗೆ ಲಿಬರಲ್ ಮನೋಧರ್ಮ ಇರುವುದು ಗೊತ್ತಾಗುತ್ತದೆ. 'ಹುತ್ತ'ದ

ಯುವಕ ವಯಸ್ಸಾದ ಹೆಣ್ಣೊಬ್ಬಳ ಕಾಮ-ಪ್ರೇಮಕ್ಕೆ ಬಲಿಯಾಗಿ ತತ್ತರಿಸುವ ಚಿತ್ರಣವಿದೆ. ವಯಸ್ಸಾದವಳ ವಿರಹಕ್ಕೆ ಕಾರಣವಾಗುವ ಅಂಶಗಳು ಮತ್ತು ಆಕೆಗೆ ಬಲಿಯಾಗಲು ಯುವಕನಿಗಿರುವ ಪರಿಸ್ಥಿತಿಯನ್ನು ಕುರಿತು ಗಂಭೀರವಾಗಿ ಬರೆಯಬಹುದಾದ ಕಥೆಯನ್ನು ಅನವಶ್ಯಕ ಹಿಗ್ಗಿಸಲಾಗಿದೆ. ವಯಸ್ಸಾದವಳ ಮಗಳ ಜತೆಗಿನ ಯುವಕನ ಪ್ರೇಮ ಸಂಬಂಧ ಕೇವಲ ನೆಪವಾಗಿ ಉಳಿಯುತ್ತದೆ. 'ಶ್ರಾವಣ' ಕಥೆಯ ಹೆಸರೇ ಸೂಚಿಸುವಂತೆ, ಹಾದಿ ತಪ್ಪಿದ ಬದುಕಿನಿಂದ ಪುನ: ಹಾದಿ ಸೇರುವ ಸುಖಾಂತದ ವಸ್ತು. ಅಧ್ಯಾಪಕಿ ಶಕುಂತಲೆ - ವಿದ್ಯಾರ್ಥಿನಿ ಸವಿತಾ ಇವರಿಬ್ಬರ ನಡುವೆ ವಯಸ್ಸಿನಲ್ಲಿ ಸಣ್ಣ ಅಂತರವಿದ್ದರೂ ಅವರು ಸ್ನೇಹಿತರು ಮತ್ತು ಯೌವನದ ಕನಸುಗಳನ್ನು ಕಾಣುವ ತರುಣಿಯರು. ಶಕುಂತಲೆ ಈಗಾಗಲೇ ಪ್ರೀತಿಸಿದವನಿಂದ ವಂಚಿತಳಾಗಿದ್ದಾಳೆ. ಸವಿತಾ ಈಗ ತಾನೆ ಪ್ರೀತಿಸಿದವನ ಜತೆ ಕನಸನ್ನು ಹಂಚಿಕೊಳ್ಳುತ್ತಿದ್ದಾಳೆ. ಶಕುಂತಲೆಗೆ 'ಭೂತ'ವಾದದ್ದು, ಸವಿತಾಗೆ 'ವರ್ತಮಾನ'. 'ಭೂತ'ವಾದದ್ದನ್ನು 'ವರ್ತಮಾನ'ವಾಗಿಸಿಕೊಳ್ಳಲು ಶಕುಂತಲೆ ಪ್ರಯತ್ನಿಸುತ್ತಾಳೆ. 'ಭೂತ'ವಾದದ್ದನ್ನು 'ವರ್ತಮಾನ'ವಾಗಿಸಿಕೊಳ್ಳಲು ಶಕುಂತಲೆ ಪ್ರಯತ್ನಿಸುತ್ತಾಳೆ. ಸವಿತಾಳ 'ವರ್ತಮಾನ' ಶಕುಂತಳೆಗೆ ಪ್ರೇರಣೆ ನೀಡುತ್ತದೆ ಎಂಬಂತೆ ಕಾಣುತ್ತದೆ. ಮದುವೆಯಾಗಲು ಮುಂದೆ ಬಂದ ಬ್ರಾಹ್ಮಣ ಹುಡುಗನಿಗೆ ಒಪ್ಪಿಗೆ ಸೂಚಿಸಿ ಪತ್ರ ಬರೆಯುವುದರ ಮೂಲಕ ಶಕುಂತಳೆ 'ಭೂತ'ದ ಯಾತನೆಯಿಂದ ದೂರ ಸರಿಯುತ್ತಾಳೆ. ಕಥೆಯಲ್ಲಿ ಶಕುಂತಳೆ ಮತ್ತು ಸವಿತಾ ಕೂಡಿ ಮಳೆಯಲ್ಲಿ ನೆನೆಯುತ್ತ ಮನೆ ಸೇರುವ ಮುನ್ನ ಹಾದಿಗುಂಟ ನಡೆವಾಗ ಅವರಿಬ್ಬರ ಮನಸ್ಸಿನಲ್ಲಿ ಉಂಟಾಗುವ ಸಂತೋಷ, ವಿಷಾದ, ನೋವುಗಳ ವಿನಿಮಯದ ಸನ್ನಿವೇಶವು ಲವಲವಿಕೆಯಿಂದ ಕೂಡಿದೆ.

ಈ ಎಂಟೂ ಕತೆಗಳಲ್ಲಿ ಭಾವುಕತೆಯಿಂದ ಕೂಡಿದ 'ಸಂಬಂಧ' ಕಥೆಯ ದುರಂತ ಮತ್ತು 'ಆಗಂತುಕ'ದಲ್ಲಿ ಕಿಟ್ಟಿಯಂಥ ಮುಗ್ಧ ಮಗುವಿನ ಮನಸ್ಸಿನಲ್ಲಿ ಸಾವು ಉಂಟುಮಾಡುವ ಭಯ – ಇವು ಓದುಗರ ಮನ ತಟ್ಟಬಲ್ಲವು.

ಫೀನಿಕ್ಸ್ (೧೯೭೪): ಇದರಲ್ಲಿ ನಾಲ್ಕು ಕಥೆಗಳಿವೆ. 'ತಪ್ತ' ಕಥಾಸಂಕಲನದ ಕಥೆಗಳಲ್ಲಿ ಕಾಣುವ ಹಳ್ಳಿಯ ದಟ್ಟ ಸಂಬಂಧಕ್ಕೆ ವಿರುದ್ಧವಾಗಿ ನಗರಸಂಬಂಧಕ್ಕೆ ತಿರುಗಿದೆ. ಆದರೆ ಹಳ್ಳಿಯಲ್ಲಿ ಕಂಡುಬಂದ ಕಳ್ಳು-ಬಳ್ಳಿಯ ಸಂಬಂಧಕ್ಕೂ ಈ ನಗರದ ಸಂಬಂಧಗಳಿಗೂ ತೀರಾ ವ್ಯತ್ಯಾಸವಿದೆ. ಒಂದು ಜೀವಕ್ಕಂಟಿದರೆ ('ತಪ್ತ' ಕಥೆಗಳು) ಇನ್ನೊಂದು ತಾತ್ಕಲಿಕವಾದದ್ದು. ಒಂದರಲ್ಲಿ ನೈತಿಕ ಸಂಬಂಧಗಳಲ್ಲಿ ಹುಟ್ಟಿಕೊಳ್ಳುವ ತೊಡಕುಗಳು; ಇನ್ನೊಂದರಲ್ಲಿ, ನೈತಿಕತೆಯ ಅರ್ಥವನ್ನೇ ಬೇರೊಂದು ದೃಷ್ಟಿಯಲ್ಲಿ ಕಂಡುಕೊಂಡಾಗ ಆಗುವ ಪರಿಣಾಮಗಳು ಇವು ಯಾವ ಬಗೆಯವು ಎಂಬ ಪ್ರಶ್ನೆಗೆ ಫೀನಿಕ್ಸ್ ಕಥೆಗಳಲ್ಲಿ ಉತ್ತರ ಕಾಣಲು ಸಾಧ್ಯವಿದೆ.

'ಫೀನಿಕ್ಸ್' ಕಥೆಯ ನಾಯಕ ವ್ಯಸನಿ. ಯಾವುದರ ವ್ಯಸನಿ? ಯಾಕಾಗಿ ಇದು? ಎಂಬುದೇ ಅವನಿಗೆ ತಿಳಿಯದೆ ನೀರಿನಿಂದ ಹೊರಬಿದ್ದ ಮೀನಿನಂತೆ ಚಡಪಡಿಸುತ್ತಾನೆ. ತನ್ನ ಸುತ್ತ ಇರುವ ಎರಡು ಹೆಣ್ಣುಗಳ ಬಗ್ಗೆ ಯೋಚಿಸುತ್ತಾನೆ. ಆದರೆ ಒಂದನ್ನು ಕಟ್ಟಿಕೊಳ್ಳಲಾರದೆ ಇನ್ನೊಂದನ್ನು ಬಿಡಲಾರದೆ ಪರಿತಪಿಸುತ್ತಾನೆ. ಅಭಿವ್ಯಕ್ತನಾಗಬೇಕು: ಪೂರ್ಣಾಭಿವ್ಯಕ್ತನಾಗಬೇಕೆಂದು ಮೈ ಪರಚಿಕೊಳ್ಳುತ್ತಾನೆ. ಆತನ ಪ್ರೀತಿಯಾಗಲಿ. ಮುಕ್ತ ಲೈಂಗಿಕಾಸಕ್ತಿಯಾಗಲಿ ಯಾವುದರಲ್ಲೂ ಆಳಕ್ಕಿಳಿಯದೆ ಇಂದ್ರಿಯಗಳ ಮಟ್ಟದಲ್ಲಿ ನಿಂತೇ ಹಂಬಲಿಸುತ್ತಾನೆ. ತನ್ನನ್ನು ತಾನು ಅಭಿವ್ಯಕ್ತಿಸಿಕೊಂಡು ಪೂರ್ಣನಾಗಬೇಕೆಂಬ ಬಯಕೆ ಬರೀ ಚಪಲವಾದಂತೆನಿಸುತ್ತದೆ. ಇಡೀ ಕತೆ ನಾಯಕನು ಮೈಪರಚಿಕೊಳ್ಳುವ ಸುತ್ತ ತಿರುಗುತ್ತದೆ. ನಗರದ ಯುವ ಮನಸ್ಸಿನ ಅಥವ ಬದುಕಿನ ಇಬ್ಬಂದಿತನ. ಅನಾಥ ಪ್ರಜ್ಞೆಯನ್ನು ವ್ಯಕ್ತಪಡಿಸಲು ಕತೆಗಾರ ತವಕಿಸುತ್ತಾನೆ. ಆದರೆ ಅದಕ್ಕೊಂದು ರೂಪ ನೀಡಲಾಗಿಲ್ಲ. ಆದರೆ 'ಅಂಟಿದ ನಂಟಿನ ಕೊನೆ ಬಲ್ಲವರಾರು'. ಕಥೆಯ ನಾಯಕನಿಗೆ ಒಂದು ಉದ್ದೇಶವಿದೆ. 'ವೈದಿಕ ಕನ್ನೆಯರನ್ನ ಹಾಳು ಮಾಡೋದು'. ಶೂದ್ರನಾಗಿರುವ ಈ ನಾಯಕ ತನ್ನ ಉದ್ದೇಶಕ್ಕೆ ಅರ್ಥವಿದೆಯೆಂದೇ ನಂಬಿಕೊಂಡವನು. ಆದರೆ ಶಾಲಿನಿ ಅವನ ಪ್ರೀತಿಯ ವೈದಿಕ ಹುಡುಗಿ. ಅವಳಿಗೆ ನಾಯಕನ ದೌರ್ಬಲ್ಯ ಗೊತ್ತಿದೆ. ಅವನಂತೆ ನಡೆದು ಅವನ ಅಹಂಕಾರಕ್ಕೆ ಸವಾಲಾಗುತ್ತಾಳೆ. ಒಂದು ಹಂತದಲ್ಲಿ ನಾಯಕನೇ ಶಾಲಿನಿಯ ಆಹ್ವಾನಗಳಿಗೆ ಹಿಂಜರಿಯುತ್ತಾನೆ. ಅವನ ಮೂಲ ಉದ್ದೇಶವೇ ನಿಜವಾಗಿದ್ದರೆ ಶಾಲಿನಿ ಮದುವೆಯಾಗಿ ಹೋದಾಗ ಯಾಕೆ ಪರಿತಪಿಸುತ್ತಾನೆ? ಶಾಲಿನಿಗೆ ಯಾವುದೇ ಉದ್ದೇಶವಿಲ್ಲದೆ ಬದುಕಿಗೆ ದಕ್ಕಿದ್ದನ್ನು ಪಡೆಯುತ್ತಾ ಹೋಗುವಳು. ಇದಕ್ಕೆ ವಿರುದ್ಧವಾದ ಸ್ವಭಾವ ನಾಯಕನದು. ಆದರೆ ಪ್ರೀತಿಯ ಸಂಬಂಧದಲ್ಲಿ ಯಾವುದೇ ಕಟ್ಟುಪಾಡುಗಳು ನಿಲ್ಲಲಾರವು ಎಂಬ ಸಂಗತಿಯನ್ನು ಕಥೆ ಹೇಳಲು ಬಯಸುತ್ತದೆ. ಮುಕ್ತ ಲೈಂಗಿಕ ವಿಷಯದಲ್ಲಿ ಶಾಲಿನಿ ನಿಜ ಅನ್ನಿಸಿದಂತೆ ನಾಯಕ ಅನ್ನಿಸುವುದಿಲ್ಲ. ಅವಳು ಯಾವುದಕ್ಕೂ ಅಂಟದವಳು ಮತ್ತು ಎಲ್ಲದಕ್ಕೂ ಅಂಟಿದವಳು. 'ಇನ್ನೊಂದು ಪ್ರಣಯ ಪ್ರಸಂಗ' ಕಥೆಯಲ್ಲೂ ಇದೇ ಬಗೆಯ ಮನಸ್ಥಿತಿಯ ಪಾತ್ರಗಳಿವೆ. ಪ್ರೇಮಿಗಳಿಬ್ಬರ ಸಂಬಂಧ ಮುಗಿದು ಎಂಟು ವರ್ಷಗಳಾದ ಮೇಲೆ ಪುನ ಭೇಟಿಯಾಗುವ ಸಂದರ್ಭ. ಈ ನಡುವೆ ನಾಯಕನಿಗೆ ಮದುವೆಯಾಗಿ ಮಕ್ಕಳಿವೆ. ಪಲ್ಲವಿಗೆ ಮದುವೆಯಾಗಿ ಸಂಸಾರದ ಜತೆ ವಿದೇಶದಲ್ಲಿದ್ದವಳು. ಎಂಟು ವರ್ಷದ ಹಿಂದೆ ನಾಯಕ ವಿದ್ಯಾರ್ಥಿ. ಪಲ್ಲವಿ ಅಧ್ಯಾಪಕಿ. ಆದರೂ ಪ್ರೇಮಿಗಳು. ಪಲ್ಲವಿ ಅವನ ಜತೆ ದೈಹಿಕ ಸುಖ ಹಂಚಿಕೊಳ್ಳಲು ಇಷ್ಟ ಪಡುತ್ತಾಳೆಯೇ ಹೊರತು ಸಂಬಂಧವನ್ನು ಮದುವೆಯಂಥ ಕಟ್ಟಿನಿಂದ ಮಲಿನಗೊಳಿಸಲು ಇಷ್ಟಪಡುವುದಿಲ್ಲ. ಎಂಟು ವರ್ಷದ ನಂತರ ಭೇಟಿಯಾಗುವ ಸಂದರ್ಭ ಬಂದಾಗ ಪಲ್ಲವಿ ನಿರ್ಲಿಪ್ತವಾಗಿರುತ್ತಾಳೆ. ಆದರೆ ನಿರ್ಲಿಪ್ತತೆ ಈ ನಾಯಕನಿಗೆ ಸಾಧ್ಯವಾಗುವುದಿಲ್ಲ. ಇವು ಒಂದರ್ಥದಲ್ಲಿ ಅನೈತಿಕ ಸಂಬಂಧಗಳೇ

ಆದರೂ ಈ ಸಂಬಂಧಗಳಲ್ಲಿ ನಾಯಕಿಯರಿಗಿರುವ ನಿರ್ಲಿಪ್ತತೆ ಇಲ್ಲಿಯ ನಾಯಕರಿಗಿಲ್ಲ. ಅಂದರೆ ಅನೈತಿಕತೆಯ ಪಾಪ ಪ್ರಜ್ಞೆ ನಾಯಕರಲ್ಲಿ ಇದೆ ಎಂದು ಅರ್ಥವಲ್ಲ. ಮುಕ್ತ ಲೈಂಗಿಕ ವ್ಯವಹಾರ ಬಯಸುವ ನಾಯಕ, ತನ್ನ ಸಂಬಂಧದ ನಾಯಕಿಯರು ತಪ್ಪಿಹೋದರೆ ತಹತಹ ಪಡುವಂತೆ ನಾಯಕಿಯರು ಪಡುವುದಿಲ್ಲ. ಸ್ವಲ್ಪ ಮಟ್ಟಿನ ನಿರ್ಲಿಪ್ತತೆ 'ಗೀಜಗನ ಗೂಡು' ನಾಯಕನಲ್ಲಿ ಕಾಣುತ್ತೇವೆ. ಮುದುಮಲೈ ಅರಣ್ಯದಲ್ಲಿ ರಜಾದಿನಗಳನ್ನು ಸಂತೋಷದಿಂದ ನೂಕಲು ಬಂದಾಗ ಆಕಸ್ಮಿಕವಾಗಿ ರಷ್ಯನ್ ತರುಣಿ ಸಿಗುತ್ತಾಳೆ. ಆಕೆಯೊಡನೆ ಮುಕ್ತವಾಗಿ ಕಾಲ ಕಳೆಯುತ್ತಾನೆ, ಬೆರೆಯುತ್ತಾನೆ ಅನುಭವಿಸುತ್ತಾನೆ. ಅವರಿಬ್ಬರ ಸಂಬಂಧವೇ ಅನನ್ಯವಾದುದ್ದು: ಜೀವಂತಿಕೆಯಿಂದ ಕೂಡಿದ್ದಾಗಿರುತ್ತದೆ. ಶ್ರೀಮಂತ ಪೊವೆಲ್‌ನು ಜತೆಗಿದ್ದರೂ ಆ ತರುಣಿ ಕಾಮ ಸುಖವನ್ನು ಈ ನಾಯಕನಿಂದ ಪಡೆಯುತ್ತಾಳೆ. ಆಕೆಯಿಂದ ಧೂರವಾಗುವ ಪ್ರಸಂಗ ಬಂದರೂ ನಾಯಕನಿಗೆ ಚಡಪಡಿಕೆ ಇಲ್ಲ. ಆದರೆ ಆಕೆ ಮತ್ತೆ ಭೇಟಿಯಾಗುತ್ತೇನೆ ಅಂದಾಗ ಅವನಲ್ಲಿ ಆಶೆಯ ಎಳೆ ಹುಟ್ಟುತ್ತದೆ ಅಷ್ಟೇ. ಕಥೆಯ ದೃಷ್ಟಿಯಿಂದ ಇದೊಂದು ಸರಳ ನಿರೂಪಣೆಯ ಕಥೆ. ಆದರೆ ಪರಿಣಾಮದಲ್ಲಿ ಗಂಭೀರವಾದುದ್ದು. ಯಾವುದೇ ಲಾಜಿಕ್ ಮತ್ತು ತಂತ್ರಗಳಿಲ್ಲದೆ, ಸಿದ್ಧಾಂತಗಳಿಲ್ಲದೆ ಘಟನೆಗಳು, ಸನ್ನಿವೇಶಗಳು ಅವು ಬಂದ ಹಾಗೆ, ಕಂಡ ಹಾಗೆ, ನಡೆದ ಹಾಗೆ, ಅನುಭವಿಸಿದ ಹಾಗೆ ಯಥಾವತ್ತಾಗಿ ನಿರೂಪಿತವಾಗಿವೆ.

ಕಾದಂಬರಿ

'ಕಾಡು' (೧೯೭೧) **'ಪರಸಂಗದ ಗೆಂಡೆತಿಮ್ಮ'** (೧೯೭೪) ಮತ್ತು **'ಭುಜಂಗಯ್ಯನ ದಶಾವತಾರಗಳು'** (೧೯೮೨) ಎಂಬ ಮೂರು ಕಾದಂಬರಿಗಳನ್ನು ಬರೆದಿದ್ದಾರೆ. 'ಕಾಡು' ಇವರ ಮೊದಲ ಕಾದಂಬರಿ. ಒಂದು ಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಸ್ವಲ್ಪೇ ಕಾಲಾವಧಿಯಲ್ಲಿ ನಡೆಯುವ ಊರ ವಿದ್ಯಮಾನಗಳನ್ನು ಚಿತ್ರಿಸುತ್ತದೆ. ಕೊಪ್ಪಲು ಮತ್ತು ಹೊಸೂರುಗಳ ಸುತ್ತಮುತ್ತವೇ ಇದರ ನೋಟ. ಕೊಪ್ಪಲದ ವಿವರಗಳು ಹೆಚ್ಚಾಗಿವೆ. ಫ್ಯೂಡಲ್ ವ್ಯವಸ್ಥೆಯ ದಬ್ಬಾಳಿಕೆಯಿಂದ ಬಡವರಿಗೆ ಸಿಗದ ನ್ಯಾಯ. ವ್ಯಭಿಚಾರ-ಅನೈತಿಕ ಸಂಬಂಧಗಳಿಂದ ಹುಟ್ಟುವ ವೈರತ್ವ-ದ್ವೇಷ-ಹಿಂಸೆಯಿಂದ ಕೊನೆಗ ದುರಂತದಲ್ಲಿ ಕೊನೆಗೊಂಡು ಹಳ್ಳಿಗಳು ಅವನತಿಯತ್ತ ಸಾಗುವ ವಸ್ತು ಈ ಕಾದಂಬರಿಯಲ್ಲಿದೆ. ಈ ಕಾದಂಬರಿಯಲ್ಲಿರುವ ವಿಶೇಷವೆಂದರೆ ಕಿಟ್ಟಿಯೆನ್ನುವ ಎಂಟು ವರ್ಷದ ಹುಡುಗನ ಕಣ್ಣು ಅಳತೆಯಲ್ಲಿ ಕಾಣುವ, ಗ್ರಹಿಸುವಷ್ಟನ್ನೇ ಹಿಡಿದಿಟ್ಟಿರುವುದು. ಇದು ಈ ಕಾದಂಬರಿಯ ದೋಷವೂ ಆಗಿದೆ. ಕಿಟ್ಟಿ ತುಂಬ ಸೂಕ್ಷ್ಮ ಮನಸ್ಸಿನ ಚುರುಕು ಬುದ್ಧಿಯುಳ್ಳವನು. ಚಂದ್ರೇಗೌಡ-ಕಮಲಮ್ಮನವರಿಗೆ ಮಕ್ಕಳಿರದ ಕಾರಣ ಚಂದ್ರೇಗೌಡರು ತಮ್ಮ ಅಕ್ಕನ ಮಗನಾದ ಈ ಕಿಟ್ಟಿಯನ್ನು ಕರೆತಂದು ಇಟ್ಟುಕೊಂಡಿದ್ದರು. ಅವನು

ಕೊಪ್ಪಲದಿಂದ ಹೊಸೂರಲ್ಲಿದ್ದ ಶಾಲೆಗೆ ಊರಲ್ಲಿದ್ದ ಇನ್ನೊಂದು ಹುಡುಗಿ ನಾಗಿಯ ಜತೆ ಹೋಗಿ ಬರುತ್ತಿದ್ದ. ಕಿಟ್ಟಿಯಿಂದ ಕಮಲಮ್ಮನಿಗಿರುವ ನೋವು, ಬೇಸರ ತಾತ್ಕಲಿಕವಾಗಿಯಾದರೂ ಕಮ್ಮಿಯಾಗಿತ್ತು. ಜಮೀನ್ದಾರಿ ಗತ್ತಿನ ಚಂದ್ರೇಗೌಡರ ಮಾತಿಗೆ ಊರಲ್ಲಿ ಬೆಲೆಯಿತ್ತು, ಭಯವಿತ್ತು. ಹೊಸೂರಲ್ಲಿ ಬಸಕ್ಕನನ್ನು ಇಟ್ಟುಕೊಂಡಿದ್ದರಿಂದ ದಿನ ರಾತ್ರಿ ಹೋಗಿ ಬರುತ್ತಿದ್ದ. ಇದು ಕಮಲಮ್ಮನಿಗೆ ಅಸಾಧ್ಯ ನೋವಿನ ವಿಷಯವಾಗಿತ್ತು. ಅಂತ್ರ-ಮಂತ್ರ ಹರಕೆ ಏನೇನೋ ಮಾಡಿಸಿ ನೋಡಿದರೂ ಫಲಕಾರಿಯಾಗಲಿಲ್ಲ. ಊರಲ್ಲಿ ಕೆಂಚ-ದೇವಿಯರ ವ್ಯಭಿಚಾರದಲ್ಲಿ ಹೊಸೂರ ಶಿವಗಂಗನು ಕೆಂಚನಿಗೆ ಬೆಂಬಲ ನೀಡುವ ಮೂಲಕ ಕೊಪ್ಪಲದ ನ್ಯಾಯ ತೀರ್ಮಾನದಂಥ ವಿಷಯದಲ್ಲಿ ಕೈ ಹಾಕಿದ್ದರಿಂದ ಚಂದ್ರೇಗೌಡನಿಗೆ ಸಹಿಸಲಾಗಲಿಲ್ಲ. ಎರಡು ಊರುಗಳ ಮಧ್ಯ ಇದ್ದ ಬಾಂಧವ್ಯದಲ್ಲಿ ಬಿರುಕು ಕಾಣಿಸಿತು. ಚಂದ್ರೇಗೌಡ ಮತ್ತು ಶಿವಗಂಗನ ನಡುವಿನ ದ್ವೇಷ ಹೆಚ್ಚಾಗುತ್ತಹೋಯಿತು. ಇದರಿಂದ ಉದ್ಭವಿಸಿದ ಅನೇಕ ಅನಾಹುತಗಳಿಂದ ಊರಿಗೆ ಪೊಲೀಸರು ಬಂದರು. ಕೊನೆಗೆ ಹೊಸೂರ ಶಿವಗಂಗನ ಗುಂಪಿನಿಂದ ಕಮಲಮ್ಮನ ಮೇಲೆ ಅತ್ಯಾಚಾರವಾಗುತ್ತದೆ. ಚಂದ್ರೇಗೌಡ ಅತ್ಯಾಚಾರವೆಸಗಿದವರನ್ನು ಕೊಲೆ ಮಾಡುತ್ತಾನೆ. ಎರಡು ಊರುಗಳೂ ಸಾವು ಹಿಂಸೆಗಳಿಂದ ಬರ್ಬರವಾಗುತ್ತವೆ.

ಕಾದಂಬರಿಯಲ್ಲಿ ಇದೆಲ್ಲವನ್ನೂ ಕಿಟ್ಟಿಯ ಮೂಲಕ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಕಿಟ್ಟಿ ಸಂವೇದನಾಶೀಲ ಮತ್ತು ಮುಗ್ಧ. ಅವನಿಗೆ ಮಾವ ರಾತ್ರಿ ಜಿರಕಿ ಜೋಡು ಮೆಟ್ಟಿ ಬ್ಯಾಟರಿ ಹಿಡಿದು ಎಲ್ಲಿಗೆ ಹೋಗುತ್ತಾನೋ ತಿಳಿಯದು. ಅದನ್ನು ಕಂಡು ಅತ್ತೆ ಕಮಲಮ್ಮ ಯಾಕೆ ಅಳುತ್ತಾಳೋ ತಿಳಿಯದು. ಆಕೆ ಹನುಮಂತರಾಯನ ಗುಡಿಕಡೆ ಹೋಗಿ ಕೋಳಿ ಬಲಿ ಕೊಟ್ಟು ಪೂಜೆ ಮಾಡಿಸುವುದು ಯಾಕೆಂದು ತಿಳಿಯದು. ಮಾವ ತಾಯಿತಗಳನ್ನು ಯಾಕೆ ಕಟ್ಟಿಕೊಂಡಿದ್ದಾನೋ ತಿಳಿಯದು. ಗುಡಿ ಅಯ್ನೋರು ವಲೇರ ಕಾಳಿ ಜತೆ ಹಳ್ಳದಲ್ಲಿ ಬೆತ್ತಲೆ ಯಾಕೆ ಮಲಗಿದ್ದರೋ ತಿಳಿಯದು. ದೇವಿ ಕೆಂಚನ ಗುಡಿಸಲಿಗೆ ಹೋಗಿ ಬಂದರೇನಾಯಿತು? ಕೆಂಚ ದೇವಿಯ ಜತೆ ಬೇಲಿಯಲ್ಲಿ ಮಲಗಿದ್ದನೆಂದು ಮಾವ ಹೊಡೆಯುತ್ತಾನೆ. ಆದರೆ ಗುಡಿ ಅಯ್ನೋರು ಕಾಳಿ ಜತೆ ಮಲಗಿದ್ದರಲ್ಲ ಅವರಿಗೆ ಯಾಕೆ ಹೊಡೆಯುವುದಿಲ್ಲ? ಕಲ್ಯಾಣಿಗೆ ಮೂರು ತಿಂಗಳಾಗಿತ್ತಂತೆ. ಅಂದರೇನು? ದೊಡ್ಡವರ ಲೋಕದಲ್ಲಿ ನಡೆಯುವ ಇವುಗಳಿಗೆ ಅರ್ಥವಿದೆ. ಆದರೆ ಅವನು ಕಾಣುವ ಅದೇ ಲೋಕದ ವ್ಯವಹಾರಗಳು ಅರ್ಥವಾಗುವುದಿಲ್ಲ. ಅವನ ಕುತೂಹಲದ ಪ್ರಶ್ನೆಗೆ 'ನಿಂಗ್ಯಾಕ್ರಯ್ಯ ಚಿಕ್ಕೋರಿಗೆ' ಎಂದು ಸಿಳ್ಳ, ಲೋಂಪಿ ಗದರಿಸುತ್ತಾರೆ. ಕಿಟ್ಟಿಗೆ ದೊಡ್ಡವರ ಆಟಗಳು ರಾಕ್ಷಸರ ಕಥೆಗಳಂತೆ ಕಾಣುತ್ತವೆ. ಅತ್ತೆಯಿಂದ ಸಿಗುವ ಪ್ರೀತಿಗಿಂತ ದೊಡ್ಡವರ ಕ್ರೌರ್ಯ, ಹಿಂಸೆಯನ್ನು ಕಂಡು ತಲ್ಲಣಿಸಿಬಿಡುತ್ತಾನೆ.

ಕಾದಂಬರಿಯಲ್ಲಿ ಯೋಚನೆಗೆ ಹಚ್ಚುವ ಇನ್ನೊಂದು ಅಂಶವೆಂದರೆ ಚಂದ್ರೇಗೌಡ-ಕಮಲಮ್ಮರ ನಡುವಿನ ಗಂಡ-ಹೆಂಡತಿಯ ಸಂಬಂಧದ ಸ್ವರೂಪ. ಸರಸ-ವಿರಸಗಳೇ ಇಲ್ಲದ, ಒಂದು ದಿನವೂ ಪ್ರೀತಿಯಿಂದ ಮುಖಕೊಟ್ಟು ಮಾತಾಡದ ಅವರ ಸಂಬಂಧವೂ ಅಷ್ಟೇ ಭಯಾನಕವಾದದ್ದು, ಆದರೆ ಕೊನೆಯಲ್ಲಿ ಹೆಂಡತಿಗಾಗಿ ಚಂದ್ರೇಗೌಡ ಸ್ಪಂದಿಸುವ ರೀತಿಯೇ ಅದರ ಸಂಕೀರ್ಣತೆಯ ಅರಿವು ಮೂಡಿಸುತ್ತದೆ.

ಕಾದಂಬರಿಕಾರರು ಎಲ್ಲವನ್ನೂ ಕಿಟ್ಟಿಯ ಮೂಲಕ ನೋಡಲು ಬಯಸಿದ್ದರಿಂದ (ಇದೊಂದು ತಂತ್ರವಾಗಿ ಅಳವಡಿಸಿಕೊಂಡಿದ್ದರೂ ಕೂಡ) ಕಾದಂಬರಿಯ ವಿಸ್ತಾರತೆಗೆ ಮಿತಿ ಬಂದುಬಿಟ್ಟಿದೆ. ಒಮ್ಮೊಮ್ಮೆ ಕಿಟ್ಟಿಯ ದೃಷ್ಟಿಯನ್ನು ಮೀರಿ ಕಾದಂಬರಿಕಾರರ ದೃಷ್ಟಿ ಅವರಿಗೇ ಗೊತ್ತಿಲ್ಲದಂತೆ ಬೇರೆಕಡೆ ಹರಿಯಲು ತುಡಿಯುತ್ತದೆ. ಅದು ಅರಿವಾದ ತಕ್ಷಣ ದೃಷ್ಟಿ ಕಿಟ್ಟಿಗೆ ತಿರುಗುತ್ತದೆ. ಇದರಿಂದ ಕಾದಂಬರಿಗೆ ದಕ್ಕಬಹುದಾಗಿದ್ದ ಎಷ್ಟೋ ಅನುಭವಗಳು ಕೈತಪ್ಪಿವೆ. ಪಾತ್ರಗಳು ಬೆಳೆಯದೇ ಇರುವುದಕ್ಕೆ ಇದು ಕಾರಣವಾಗುತ್ತದೆ. ಹಿಂಸೆ, ಕ್ರೌರ್ಯ ಮತ್ತು ಸಾವುಗಳು ಮೌನವಾಗಿ ಕಿಟ್ಟಿಯನ್ನು ತುಂಬಿ ತಲ್ಲಣಗೊಳಿಸುವ ಕ್ರಿಯೆಯು ಏಕಕಾಲಕ್ಕೆ ಓದುಗನಿಗೂ ಅದರ ಅರಿವನ್ನು ಮೂಡಿಸುತ್ತದೆ.

'ಕಾಡು' ಕಾದಂಬರಿಯ ನಂತರ ಬಂದದ್ದು 'ಪರಸಂಗದ ಗೆಂಡೆತಿಮ್ಮ' ಇದರ ವಿಸ್ತಾರ ದೊಡ್ಡದು ಹಾಗೂ ಗ್ರಾಮೀಣ ಬದುಕಿನ ಮತ್ತಷ್ಟು ಗಾಢ ಅನುಭವಗಳನ್ನು ತುಂಬಿಕೊಂಡಿದೆ. 'ಕಾಡು' ಕಾದಂಬರಿಯಲ್ಲಿ ಸಾಂಪ್ರದಾಯಿಕ ಸಮಾಜ ಕಂಡು ಬರುತ್ತದೆ. ಕೊನೆಗೆ ಪೊಲೀಸರು ಬರುವ ಮೂಲಕ ಆಧುನಿಕತೆಯ ಬಿಸಿ ತಗುಲಿದಂತಾಗುತ್ತದೆ. 'ಪರಸಂಗದ ಗೆಂಡೆತಿಮ್ಮ' ದಲ್ಲಿ ಆಧುನಿಕತೆಯ ಪ್ರವೇಶವಾಗುವ ಬಗೆ ಮತ್ತು ಅದರ ಪರಿಣಾಮದ ಸ್ವರೂಪ ಯಾವ ಬಗೆಯದ್ದು? ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿಯ ಪರಿಣಾಮವೇನಾಯಿತು? ಇಂಥ ಕಾಲದ ಸಂಕ್ರಮಣಸ್ಥಿತಿಯ ಒಂದು ಮಾದರಿಯನ್ನು ಈ ಕಾದಂಬರಿ ತೋರಿಸುತ್ತದೆ.

ಬುಟ್ಟಿಯಲ್ಲಿ ಸಣ್ಣಪುಟ್ಟ ಸಾಮಾನುಗಳನ್ನು ಹೊತ್ತು ಗೌವಳ್ಳಿಯಲ್ಲಿ ಮಾರಿ ಜೀವನ ಸಾಗಿಸುವ ಸಾಲುಂಡಿಯ ಗೆಂಡೆತಿಮ್ಮ ಮುಗ್ಧನು. ತಾಯಿ, ಅಣ್ಣ, ಅತ್ತಿಗೆ ಜತೆ ಕೂಡಿ ಬದುಕುವ, ಅದೇ ರೀತಿಯಲ್ಲಿ ತನ್ನ ಸಮಾಜದ ಜತೆ ಒಳ್ಳೆಯದನ್ನೇ ಹಂಚಿಕೊಂಡು 'ಸುಳ್ಳು ತಟವಟ ಇಲ್ಲದ' ಅನನ್ಯ ವ್ಯಕ್ತಿ. ಮದುವೆಯಾಗುವ ವಯಸ್ಸು ಮೀರುತ್ತ ಬಂದರೂ ಮದುವೆಗೆ ಹಿಂಜರಿದವನು. ಆದರೂ ತಾಯಿಯ ಒತ್ತಾಯದಿಂದ ಉಳಿಮಾವಿನ ಮರಂಕಿಯನ್ನೂ ಮದುವೆಯಾಗುತ್ತಾನೆ. ಮರಂಕಿ ನಾಗರಿಕಳು. ತನ್ನ ಸ್ವಭಾವಕ್ಕನುಗುಣವಾಗಿ ಆಕೆ ಸಾಲುಂಡಿಯಲ್ಲಿ ತನ್ನ ಗಂಡನನ್ನು, ಮನೆ ಮಂದಿಯನ್ನು

ನಾಗರಿಕರನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಾಳೆ. ಗಂಡನನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ತನ್ನ ವ್ಯಕ್ತಿತ್ವದಂತೆ ಬದಲಾಯಿಸಲು ನೋಡುತ್ತಾಳೆ. ಅವನ ವ್ಯಾಪಾರಕ್ಕೆ ಹೊಸ ಆಯಾಮ ಕಲ್ಪಿಸುತ್ತಾಳೆ. ಅದರ ಪರಿಣಾಮವಾಗಿ ಲಂಗ, ಬಾಡಿ, ಪೌಡರ್, ಸಾಬೂನು, ಗಮಲದೆಣ್ಣೆ ಮುಂತಾದ ಆಧುನಿಕ ವಸ್ತುಗಳು ಗೆಂಡೆತಿಮ್ಮನಿಂದ ಸಾಲುಂಡಿ, ಗೌವ್ವಳ್ಳಿಯಲ್ಲಿ ತುಂಬಿಕೊಳ್ಳುತ್ತವೆ. ಇಲ್ಲಿಯೇ ಸಂಘರ್ಷ ಹುಟ್ಟುತ್ತದೆ. ಮರಂಕಿಯ ವ್ಯಕ್ತಿತ್ವದಲ್ಲಿಯೇ ಆಧುನಿಕತೆ ಇರುವುದರಿಂದ ಅವಳಿಗೆ ಯಾವುದೇ ಅಳುಕು ಹುಟ್ಟುವುದಿಲ್ಲ. ಅಷ್ಟೇಅಲ್ಲ, ಯಾವುದೇ ನೈತಿಕ ಮೌಲ್ಯಗಳೂ ಅವಳನ್ನು ಕಾಡುವುದಿಲ್ಲ. ಮಾದನಾಯಕ, ಶಿವಣ್ಣನ ಜತೆ ಲೈಂಗಿಕ ಸಂಪರ್ಕ ಬೆಳಸಿದರೂ ಅವಳಲ್ಲಿ ಪಾಪ ಪ್ರಜ್ಞೆಯಿಲ್ಲ. ಆದರೆ ಗೆಂಡೆತಿಮ್ಮನಿಗೆ ತನ್ನ ವ್ಯಾಪಾರದಿಂದ ಊರು ತುಂಬುತ್ತಿದ್ದ ಆಧುನಿಕ ವಸ್ತುಗಳಿಂದ ಆಗುವ ಪರಿಣಾಮದ ಬಗ್ಗೆ ಮೆಲ್ಲನೆ ಏನೋ ತಪ್ಪು ಮಾಡುತ್ತಿದ್ದೇನೆ ಎಂದು ಅನ್ನಿಸತೊಡಗುತ್ತದೆ. ಹೆಂಡತಿಯ ಬೆಂಬಲದಿಂದ ಮಾತ್ರ ಧೈರ್ಯ ಹೊಂದಿದ್ದನೇ ಹೊರತು ಸ್ವಂತ ಧೈರ್ಯದಿಂದಲ್ಲ. ಅವನ ಕಳ್ಳುಬಳ್ಳಿಗಳೇ ವಿರೋಧ ಒಡ್ಡುತ್ತಾರೆ. ದಿನ ಕಳೆದಂತೆ ಊರ ಹಿರಿಯರಿಗೆ ತಮ್ಮ ಮನೆಯ ಹೆಂಗಸರು ಬದಲಾಗುತ್ತಿರುವುದನ್ನು ಕಂಡೇ ಏನೋ ಕಳೆದುಕೊಂಡಂತೆ, ಯಾವುದೋ ಅನಿಷ್ಟ ಮನೆ ಸೇರಿದೆಯೆಂದು ಅನ್ನಿಸಿ, ಅದಕ್ಕೆ ಕಾರಣನಾದ ಗೆಂಡೆತಿಮ್ಮನನ್ನು ಕರೆದು ಛೀಮಾರಿ ಹಾಕಿ ಅವಮಾನಗೊಳಿಸುತ್ತಾರೆ, ಗೌವ್ವಳ್ಳಿಯ ಜನರು. ಶಿವಣ್ಣನ ಜತೆಗಿನ ಮರಂಕಿಯ ಸಂಪರ್ಕವನ್ನು ಕಣ್ಣಾರೆ ಕಂಡು ಗೆಂಡೆತಿಮ್ಮ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಮರಂಕಿಯೂ ಪಶ್ಚಾತ್ತಾಪದಿಂದ ಅವನ ದಾರಿ ಹಿಡಿಯುತ್ತಾಳೆ. ಮರಂಕಿಯ ನಾಗರಿಕತೆಯು ಮುಗ್ಧ ಗೆಂಡೆತಿಮ್ಮನನ್ನು ಬಲಿತೆಗೆದುಕೊಂಡದ್ದು ಮತ್ತು ಗೆಂಡೆತಿಮ್ಮನ ಆಧುನಿಕ ಸಾಮಾನುಗಳು ಗೌವ್ವಳ್ಳಿಯನ್ನು ತಲ್ಲಣಗೊಳಿಸುವುದು ಒಂದಕ್ಕೊಂದು ಪೂರಕವಾಗಿದೆ. ಇದಕ್ಕೆ ಗೆಂಡೆತಿಮ್ಮನಿಗಿರುವ ಸಂಪ್ರದಾಯಿಕ ಮನಸ್ಸೇ ಕಾರಣ. ಮರಂಕಿ ಗಂಡನ ಮುಗ್ಧತೆಗೆ ಸೋಲಲೂ ಇದೇ ಕಾರಣವಾಗುತ್ತದೆ ಎಂದು ಅನ್ನಿಸುತ್ತದೆ.

ಒಂದರ್ಥದಲ್ಲಿ ಮರಂಕಿಯ ಆಧುನಿಕತೆಯೇ ಗಂಡನ ಮತ್ತು ಸಾಲುಂಡಿ, ಗೌವ್ವಳಿಗಳ ದುರಂತಕ್ಕೆ ಕಾರಣವಾಗುತ್ತದೆ. ಆದರೆ ಮರಂಕಿಯಲ್ಲಿ ಆಧುನಿಕತೆ ಹೇಗೆ ಮೈಗೂಡಿತು ಎಂಬ ಬಗ್ಗೆ ಕಾದಂಬರಿಯಲ್ಲಿ ದಟ್ಟವಾದ ವಿವರಗಳಿಲ್ಲ. ಒಮ್ಮೆಲೆ ಬಂದು ಅಪ್ಪಳಿಸಿದಳಲ್ಲ ಅನ್ನಿಸುತ್ತದೆ. 'ಕಾಡು' ಕಾದಂಬರಿಗಿಂತ ಈ ಕಾದಂಬರಿಯ ಅನುಭವಗಳು, ಪಾತ್ರಗಳು, ಸನ್ನಿವೇಶಗಳು, ಘಟನೆಗಳು ಮತ್ತು ಇತರ ವಿವರಗಳು ಹೆಚ್ಚು ದಟ್ಟವಾಗಿಯೂ ವಿಸ್ತಾರವಾಗಿಯೂ ಸಮೃದ್ಧಗೊಂಡಿವೆ.

ಗೆಂಡೆತಿಮ್ಮನ ಮೂಲಕ ಹಬ್ಬಿದ ಆಧುನಿಕತೆಯಿಂದ ಗೌವಳ್ಳಿಯಂಥ ಸಾಂಪ್ರದಾಯಿಕ

ಹಳ್ಳಿ ತತ್ಕಾಲದಲ್ಲಿ ತಲ್ಲಣಿಸಿತು. ಆದರೆ ಗೆಂಡೆತಿಮ್ಮ ಆಧುನಿಕನಾಗಲಿಲ್ಲ. 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಬರುವ ಮಾದಳ್ಳಿ ಕೂಡ ಸಂಪ್ರದಾಯಸ್ಥ ಹಳ್ಳಿಯೇ. ಜಾತಿ, ಆಚಾರ, ವಿಚಾರ, ವ್ಯವಸಾಯ, ಮದುವೆ ಮುಂತಾದವುಗಳನ್ನು ಅವುಗಳ ಮಿತಿಯಲ್ಲೇ ನಡೆಸಿಕೊಂಡು ಬಂದಿರುವ ಜನರಿದ್ದರು. ಅವರಲ್ಲಿ ಭುಜಂಗಯ್ಯ ತನ್ನ ಅದಮ್ಯ ಉತ್ಸಾಹದಿಂದ ಪ್ರತಿಕ್ಷಣ ಬದುಕಬೇಕೆಂಬ ವ್ಯಕ್ತಿತ್ವ ಉಳ್ಳವನು: ಮಾದಳ್ಳಿಯ ಎಲ್ಲರಂತೆ ಅವನೊಬ್ಬ ಸಾಮನ್ಯ ವ್ಯಕ್ತಿಯೇ. ಆರ್ಥಿಕವಾಗಿ ಬಲಗೊಳ್ಳುವುದರ ಮೂಲಕ ಬದುಕನ್ನು ಹಸನಾಗಿರಿಸಿಕೊಳ್ಳಲು ಪ್ರಯತ್ನಿಸುವುದು ಅವನ ಗುರಿಯಾಗಿರುತ್ತದೆ. ಇದಕ್ಕೆ ಪೂರಕವೆಂಬಂತೆ ಅವನ ವ್ಯಕ್ತಿತ್ವದಲ್ಲೇ ಇದ್ದ ಕ್ರಿಯಾಶೀಲತೆಯಿಂದ ಎಲ್ಲರಿಗಿಂತ ಭಿನ್ನವಾಗಿ ಕಾಣುತ್ತಾನೆಯೇ ಹೊರತು ಮಾದಳ್ಳಿಯ ಜನರಿಗಿಂತ ಭಿನ್ನವಾಗಿರಬೇಕೆಂಬ ಉದ್ದೇಶವುಳ್ಳವನಾಗಿರುವುದಿಲ್ಲ. ಅವನು ಪ್ರತಿಯೊಂದು ಪ್ರಯೋಗವನ್ನೂ ಮಾದಳ್ಳಿಯ ಜನತೆಯೊಡನೆಯೇ ಸಾಗಲು ಯೋಜಿಸುತ್ತಾನೆ. ಆದರೆ ಮಾದಳ್ಳಿಯ ಜನ ಹಿಂದೇಟು ಹಾಕಿದಾಗಲೆಲ್ಲ ನಿರಾಶನಾಗದೆ ಭುಜಂಗಯ್ಯ ತಾನೇ ಧೈರ್ಯದಿಂದ ಮುನ್ನುಗ್ಗಿ ತನ್ನ ಆಲೋಚನಾ ವಿಧಾನಕ್ಕೆ ತಕ್ಕಂತೆ ಕಾರ್ಯ ಪ್ರವೃತ್ತನಾಗಿ ಬಿಡುತ್ತಿದ್ದ. ಮಳೆಯನ್ನವಲಂಬಿಸಿದ ಅವನ ಬೇಸಾಯದ ಬಗ್ಗೆ ಬೇಸರ ಬಂದು ಹೋಟಲಿಡುತ್ತಾನೆ. ಅದು ಊರವರ ವಿರೋಧದಿಂದ ಹಾಳಾದಾಗ ಅಂಗಡಿಯಿಡುತ್ತಾನೆ. ಮುಂದೆ 'ಕಂತ್ರಾಟ'ದಾರನಾಗುತ್ತಾನೆ. ಬಾವಿ ತೋಡಿಸುವುದರ ಮೂಲಕ ಊರವರಿಗೆ ಆಧುನಿಕ ಬೇಸಾಯಕ್ಕೆ ಸಜ್ಜಾಗುವಂತೆ ಮಾಡುತ್ತಾನೆ. ಮಾದಳ್ಳಿಯ ಜನರ ನಡುವೆಯೇ ಬದುಕಲು 'ಪರ' ಆಚರಿಸಲು ನಿಲ್ಲುತ್ತಾನೆ. ನಾಟಕ ಆಡಲು ಬಯಸುತ್ತಾನೆ. ಸ್ವಾಮಿಜಿಯನ್ನು ಊರಿಗೆ ಕರೆಸುತ್ತಾನೆ. ಇದರಲ್ಲಿ ಸೋಲಿರಲಿ, ಗೆಲುವಿರಲಿ ಲೆಕ್ಕಿಸದೆ ಮುಂದುವರಿದಿರುತ್ತಾನೆ. ಇದು ಅವನ ವ್ಯಕ್ತಿತ್ವದಲ್ಲಿರುವ ವಿಶೇಷ ಗುಣ. ಅಂತ್ಯಕಾಲದಲ್ಲಿ ಇದೆಲ್ಲವನ್ನು ಮೀರಿ ಅಹಂ ಕಳೆದುಕೊಂಡು ಭಿಕ್ಷೆ ಬೇಡಲು ತೊಡಗಿ ಮಾದಳ್ಳಿಯ ಜನರಿಗೆ ಪವಾಡ ಪುರುಷನಂತೆ ಕಾಣುತ್ತಾನೆ. ಇಂಥ ಭುಜಂಗಯ್ಯನ ಭಿನ್ನ ಭಿನ್ನ ಅವಸ್ಥೆಗಳನ್ನು ಚಿತ್ರಿಸುವುದು ಈ ಕಾದಂಬರಿಯ ಉದ್ದೇಶ.

ಭುಜಂಗಯ್ಯ ಸಾಮಾನ್ಯ ವ್ಯಕ್ತಿಯಾಗಿದ್ದು ಅಸಾಮಾನ್ಯ ವ್ಯಕ್ತಿಯಾಗಿ ಬೆಳೆಯುವುದನ್ನು ಎರಡು ಅವಸ್ಥೆಗಳಲ್ಲಿ ಕಾಣಬಹುದು. ಮೊದಲಿನ ಅವಸ್ಥೆಯಲ್ಲಿ ಅವನ ಎಲ್ಲ ವ್ಯವಹಾರಗಳು ಸುಲಲಿತವಾಗೇನೂ ನಡೆಯುವುದಿಲ್ಲ. ವ್ಯವಸಾಯ ಬಿಟ್ಟು ಹೋಟಲಿಡಲು ನಿಂತಾಗ ಮಾದಳ್ಳಿಯ ಜನರಿರಲಿ ಅವನ ತಾಯಿ, ಹೆಂಡತಿ ಮತ್ತು ಮಾವ ಇವರೇ ವಿರೋಧವನ್ನು ಒಡ್ಡುತ್ತಾರೆ. ಹೋಟಲಿನಿಂದ ಬರುವ ಆದಾಯ ಕಂಡು ಹೆಂಡತಿ ಪಾರ್ವತಿ ಅದನ್ನು ಸಹಿಸಿಕೊಂಡು ತಾತ್ಕಲಿಕವಾಗಿಯಾದರೂ ಭುಜಂಗಯ್ಯನಿಗೆ ನೆಮ್ಮದಿ ತರುವ ಹಂತದಲ್ಲಿರುವಾಗ ಸುಶೀಲೆಯ ಪ್ರವೇಶದಿಂದ ಕೆಟ್ಟುಹೋಗುತ್ತದೆ. ಅಷ್ಟೇಅಲ್ಲ, ಹೆಂಡತಿ ತನ್ನ ಮಕ್ಕಳೊಂದಿಗೆ ಗಂಡನ ಆಸ್ತಿಕಿತ್ತಿಕೊಂಡು ಕೊನೆಯ

ವರೆಗೂ ದೂರಾಗಿಬಿಡುತ್ತಾಳೆ. ಭುಜಂಗಯ್ಯನ ವ್ಯಕ್ತಿತ್ವವನ್ನು ರೂಪಿಸುವ ಉದ್ದೇಶದಿಂದಲೇ ಕಾದಂಬರಿಕಾರರು, ಊರವರ ವಿರೋಧ, ಹೆಂಡತಿಯ ವಿರೋಧ ಮುಂತಾದ ಅಂಶಗಳನ್ನು ಪೂರಕವಾಗಿ ತರುತ್ತಾರೆ. ಇನ್ನೊಂದು ಬಗೆಯ ಪೂರಕ ಅಂಶವೆಂದರೆ ಸುಶೀಲ ಮತ್ತು ರಾಜುವಿನ ಆಲೋಚನೆಯ ಮೂಲಕ. ಭುಜಂಗಯ್ಯನ ಎರಡನೇ ಅವಸ್ಥೆಯೆಂದರೆ ವೈರಾಗ್ಯದ ಕಡೆ ತಿರುಗುವುದು. ತಟ್ಟನೆ ಈ ಹಂತಕ್ಕೆ ಬರುವುದಿಲ್ಲ. ಒಳಗೆ ಆ ಬಗೆಯ ಶಕ್ತಿಗೆ "ಆಗಾಗ ಪ್ರೇರಣೆಗಳು ದೊರೆಯುತ್ತಲೇ ಇರುತ್ತವೆ". ಅಯ್ನೋರ ತತ್ವಪದಗಳನ್ನು ಆಲಿಸುತ್ತ ವೈರಾಗ್ಯದ ಕಡೆ ಚಲಿಸುತ್ತಾನೆ. ಬಸವಣ್ಣನ ವಚನಗಳಿಂದ ಪ್ರಭಾವಿತನಾಗುತ್ತಾನೆ. ಕೊನೆಕೊನೆಗೆ ಅವನಿಗೆ ಮೋಸಮಾಡಿದವರನ್ನೂ ಮರೆಯುತ್ತಾನೆ.

ಅಷ್ಟೇಅಲ್ಲ, ಭುಜಂಗಯ್ಯ ಎಷ್ಟು ಎತ್ತರಕ್ಕೆ ಏರುತ್ತಾನೆಂದರೆ ತನ್ನ ಹೆಂಡತಿ ಸುಶೀಲೆಯನ್ನು ಕೆಡಿಸಿದ ನಾರಾಯಣನಿಗೆ ಹಾವು ಕಡಿದಾಗ ತಾನೇ ವಿಷ ಹೀರಿ ತೆಗೆದು ಬದುಕಿಸಿ, ತಾನ್ನೇ ಪ್ರಾಣ ಕಳೆದುಕೊಳ್ಳುತ್ತಾನೆ.

ಕಾದಂಬರಿಯ ಕೊನೆಯ ಹಂತವನ್ನು ನೋಡಿದರೆ ಸಿನೆಮಾದಲ್ಲಿ ಕಾಣುವಂತೆ ಉದಾತ್ತ ನಾಯಕನ ದುರಂತ ಕಥೆಯನ್ನು ನೆನಪಿಗೆ ತರುತ್ತದೆ. ಕಾದಂಬರಿಕಾರರು ವ್ಯಕ್ತಿನಿಷ್ಠವಾಗಿಯೇ ನೋಡಿದ್ದಾರೆ. ಮಾದಳ್ಳಿಯ ಜನ, ಅವರ ಬದುಕಿನ ಕ್ರಮ, ಅವರ ಜಾತಿ, ವೈಷಮ್ಯ ಮುಂತಾದ ಅಂಶಗಳನ್ನು ಭುಜಂಗಯ್ಯನ ವ್ಯಕ್ತಿತ್ವವನ್ನು ಬೆಳೆಸುವುದಕ್ಕೆ ಪೂರಕವಾಗುವಂತೆ ತಂದಿದ್ದರೆ, ವಸ್ತುನಿಷ್ಠತೆ ಕಡೆ ದೃಷ್ಟಿಯೂ ಇದ್ದಿದ್ದರೆ ಕಾದಂಬರಿಗೆ ಸಮಗ್ರತೆ ಬರುತ್ತಿತ್ತು. ಆದರೂ ಭುಜಂಗಯ್ಯನ ಪಾತ್ರ ಸೃಷ್ಟಿಯೇ ವಿಶಿಷ್ಟ ಬಗೆಯದ್ದಾಗಿದೆ.

ಸಂಪಾದನ ಕೃತಿಗಳು

ಆಲನಹಳ್ಳಿಯವರು **"ಅವಲೋಕನ"** (೧೯೬೯), **"ಗ್ರಾಮಾಯಣ ಸಮೀಕ್ಷೆ"** (೧೯೭೦) ಮತ್ತು **"ಅಂತಃಕರಣ"** (೧೯೭೨) ಎಂಬ ಮೂರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಅವಲೋಕನ' ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವನ್ನು ಕುರಿತ ವಿಮರ್ಶಾ ಲೇಖನಗಳ ಸಂಗ್ರಹ. ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಯಲ್ಲಿ ಪರಂಪರೆ, ಕಾವ್ಯಶೈಲಿ, ಸೌಂದರ್ಯೋಪಾಸನೆ, ಮಹೋಪಮೆ, ಪ್ರತಿಮಾ ವಿಧಾನ, ಪ್ರಾರ್ಥನಾ ಶಕ್ತಿ ಮತ್ತು ಸಂಸಾರ ಚಿತ್ರಗಳು ಕುರಿತು ಅನೇಕ ವಿದ್ವಾಂಸರು ಬರೆದಿದ್ದಾರೆ. ಸಂಪಾದಕೀಯದಲ್ಲಿ ಆಲನಹಳ್ಳಿಯವರು "ಅತ್ಯಂತ ಸಂಕೀರ್ಣವಾದ ಈ ಆಧುನಿಕ ಯುಗಾಭಿವ್ಯಕ್ತಿಗೆ ಮಹಾಕಾವ್ಯ ತಕ್ಕ ಮಾಧ್ಯಮವಾಗದೆಂಬ ಅಭಿಪ್ರಾಯದ ಜೊತೆಗೆ ಕಾವ್ಯವೂ ನಿತ್ಯ ಬದುಕಿನಿಂದ

ದೂರವಾಗುತ್ತಿರುವ ಪರಿಸ್ಥಿತಿಯಲ್ಲಿ, ಸಾಹಿತ್ಯಕ ಮಹಾಕಾವ್ಯ ಪರಂಪರೆಯಲ್ಲೇ ಮೈತಳೆದು ಬಂದಿರುವ 'ರಾಮಾಯಣದರ್ಶನಂ' ನಾಡಿನ ವಿಮರ್ಶಾ ಪ್ರಜ್ಞೆಗೆ ದೊಡ್ಡ ಸವಾಲಾಗಿಯೆ ಉಳಿದಿದೆ. ಭಾರತೀಯ ಪರಂಪರೆಯಲ್ಲೆ ಹುಟ್ಟಿಬಂದಿರುವ ಈ ಮಹತ್ಕೃತಿ ಕಾಲದೇಶ ಸ್ಥಿತಿಗಳಿಗನುಗುಣವಾಗಿ ಸಮಗ್ರ ಜೀವನದ ಮೂಲಭೂತ ತತ್ವಗಳ ಮತ್ತು ಪರಮೋಚ್ಚ ಮೌಲ್ಯಗಳ ವಿಶ್ಲೇಷಣೆ ಅನ್ವೇಷಣೆಗಳ ಮೂಲಕ ವೈಯಕ್ತಿಕತೆಯಿಂದ ಪಾರಾಗಿ ಸಮಷ್ಟಿಪ್ರಜ್ಞೆಯ ಪ್ರತಿನಿಧಿಯಾಗಿದೆ. ಪರಿಣಿತ ಪ್ರಜ್ಞೆಯ, ಪೂರ್ಣದೃಷ್ಟಿಯ ಈ ಕಾವ್ಯ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ಮಹತ್ವಪೂರ್ಣ ಘಟನೆಯಾಗಿದೆ'' ಎಂದು ಅಭಿಪ್ರಾಯ ಪಟ್ಟಿದ್ದಾರೆ.

'ಗ್ರಾಮಾಯಣ ಸಮೀಕ್ಷೆ' ಕೃತಿಯಲ್ಲಿ ರಾವ್ ಬಹಾದ್ದೂರ್ ಅವರ ಕಾದಂಬರಿ 'ಗ್ರಾಮಾಯಣ' ಕುರಿತು ಎಂ.ಜಿ. ಕೃಷ್ಣಮೂರ್ತಿ, ಜಿ.ಎಸ್. ಆಮೂರ, ಕುರ್ತಕೋಟಿ, ಗಿರಡ್ಡಿ ಗೋವಿಂದರಾಜ ಮುಂತಾದವರ ವಿಮರ್ಶಾಲೇಖನಗಳಿವೆ. ಸಂಪಾದಕರಾದ ಆಲನಹಳ್ಳಿಯವರು ರಾವ್ ಬಹಾದ್ದೂರ್ ಅವರ ಜೀವನ ಪರಿಚಯ ಮತ್ತು ಗ್ರಾಮಾಯಣ ಕಾದಂಬರಿಯಲ್ಲಿ 'ಪಾಪ ಪ್ರಜ್ಞೆ ಮತ್ತು ದುರಂತ ಧ್ವನಿ' ಎಂಬ ವಿಮರ್ಶಾ ಲೇಖನವನ್ನೂ ಬರೆದಿದ್ದಾರೆ.

'ಅಂತ:ಕರಣ' ದೇಜಗೌ ಅವರ ಅಭಿನಂದನ ಗ್ರಂಥ. ದೇಜಗೌ ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ಇಲ್ಲಿ ಅನೇಕ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಗುರುಗಳು ಕಂಡಂತೆ, ಬಂಧುಗಳು ಕಂಡಂತೆ, ಸಾಹಿತಗಳು ಕಂಡಂತೆ, ಮಿತ್ರರು ಕಂಡಂತೆ, ಶಿಷ್ಯರು ಕಂಡಂತೆ, ಸಂದರ್ಶಕರು ಕಂಡಂತೆ ಎಂಬ ಭಾಗಗಳಲ್ಲಿ ದೇಜಗೌ ಅವರ ಪ್ರೀತಿ, ಸ್ನೇಹ ಮತ್ತು ಅವರ ಕರ್ತವ್ಯ ಪ್ರಜ್ಞೆಯ ಜತೆಗೆ ಅವರ ಮಾನವೀಯತೆಯನ್ನು ಎತ್ತಿ ತೋರಿಸುವ ಅಂಶಗಳಿವೆ. ಮುನ್ನುಡಿಯಲ್ಲಿ ಆಲನಹಳ್ಳಿಯವರೂ ಇದನ್ನೇ ವ್ಯಕ್ತಪಡಿಸಿದ್ದಾರೆ. ''ದೇಜಗೌ ಅವರನ್ನು ಗುರುಗಳಾಗಿ, ಕುಲಪತಿಗಳಾಗಿ, ಎಲ್ಲದಕ್ಕೂ ಮಿಗಿಲಾಗಿ ನನ್ನ ಬದುಕಿನಲ್ಲಿ ಕಂಡ ಒಂದಿಬ್ಬರೇ ಅಂತ:ಕರಣದ ವ್ಯಕ್ತಿಗಳಲ್ಲಿ ಒಬ್ಬರಾಗಿ ಕಂಡಿದ್ದೇನೆ. ಇಂಥ ಆತ್ಮೀಯರ ಬಗ್ಗೆ ಬರೆಯುವುದು ಎಷ್ಟು ಕಷ್ಟವೋ ಬರೆಯದಿರುವುದು ಕೂಡ ಅಷ್ಟೇಕಷ್ಟ. ಅವರನ್ನೂ ಅವರ ಎಲ್ಲ ಬಗೆಯ ಸ್ವರೂಪದಲ್ಲಿ ಕಂಡಿರುವ ನನ್ನ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿದಿರುವ ಒಂದು ದೊಡ್ಡ ಗುಣವನ್ನಂತೂ ಹೇಳದಿರುವುದು ಸಾಧ್ಯವೇ ಇಲ್ಲ. ಅದೇ ಅವರ ಅತ್ಯುದಾತ್ತ ಮಾನವೀಯತೆ.''

ವಿಮರ್ಶಕರ ದೃಷ್ಟಿಯಲ್ಲಿ ಆಲನಹಳ್ಳಿಯವರ ಸಾಹಿತ್ಯ

'ಮಣ್ಣಿನ ಹಾಡು' ಕವಿತೆಗಳಿಗೆ ಮುನ್ನುಡಿ ಬರೆಯುತ್ತ ಗೋಪಾಲಕೃಷ್ಣ ಅಡಿಗರು "ಕನ್ನಡದ ನೆಲಕ್ಕೆ ಅತ್ಯಂತ ಸಮೀಪವಾದ ಒಕ್ಕಲು ಬದುಕಿನ ಅಲಾಬಿ ರಂಗುಗಳ ಮೂಲಕವೇ ಮೈತಳೆಯುವ ಸೂಕ್ಷ್ಮವೂ ಸುಸಂಸ್ಕೃತವೂ ಪ್ರಾಮಾಣಿಕವೂ ಆದ ಅನುಭವ, ಮೌಲ್ಯ ತಾರತಮ್ಯ ಜ್ಞಾನದ ಮೂಸೆಯಲ್ಲಿ ಸುಟ್ಟು ಬರುವ ಭಾವ, ಗಟ್ಟಿಯಾದ ಕಲ್ಲುನೆಲವನ್ನೊಡೆದು ಹೊರಬೀಳುವ ಮೊಳಕೆಯ ಈ ಹಸುರು ಕೋಲಾಹಲ ಕನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಹೊಸ ಶಕೆಯ ಆರಂಭವನ್ನು ಸೂಚಿಸುತ್ತದೆ" ಎಂದು ಪ್ರಶಂಸಿಸಿದರು. ಅಡಿಗರು ಅಂದಿನ ಕನ್ನಡ ಕಾವ್ಯವನ್ನು ಅನುಲಕ್ಷಿಸಿ ಮೇಲಿನ ಮಾತುಗಳನ್ನು ಬರೆಯುತ್ತ, "ಮನಸ್ಸಿನ ಕಲ್ಪನೆಯ ಮಟ್ಟದಲ್ಲೇ ಸಾರ್ಥಕ್ಯಪಡೆಯುತ್ತ ವಾಸ್ತವವನ್ನು ಕಡೆಗಣಿಸುತ್ತ ಬಂದಿರುವ ನಮ್ಮ ಕಾವ್ಯ ಹೀಗೆ ಮಣ್ಣಿನ ಹಾಡಾಗಬಯಸುತ್ತಿರುವುದು ನಮ್ಮ ದೇಶದಲ್ಲಿ ಕನವರಿಕೆಯ ಯುಗ ಮುಗಿದು ನಿಜವಾದ ಕಸಬುಗಾರಿಕೆಯ ಯುಗ ಆರಂಭವಾಗುತ್ತಿರುವುದರ ಸೂಚನೆಯೂ ಹೌದು" ಎಂದು ಕೃಷ್ಣರ ಕಾವ್ಯಕ್ಕೆ ಬೆನ್ನು ತಟ್ಟಿದ್ದರು. ಆದರೆ ಈ ಕಾವ್ಯದ ಬಗ್ಗೆ ಅಡಿಗರಿಗೆ ಇರುವ ಅನುಮಾನಗಳನ್ನೂ ಕೂಡ ಸೂಚಿಸಲು ಮರೆಯಲಿಲ್ಲ. "ಪ್ರತಿಯೊಂದು ಕವನವೂ ಅಂತರಂಗದ ಬೆಳವಣಿಗೆಯ ಒಂದೊಂದು ತಾತ್ಕಲಿಕ ಕಾವ್ಯ ವರದಿ... ಶ್ರೀ ಕೃಷ್ಣ ಇನ್ನು ಮುಂದೆ ಬರೆಯಬಹುದಾದ ಉತ್ತಮ ಕವನವೊಂದರ ಬೇರೆ ಬೇರೆ ಕರಡುಗಳೋ" ಎಂದು. ಅಡಿಗರಿಗೆ ಕೃಷ್ಣರ ತುಡಿತ ಮತ್ತು ಆ ತುಡಿತಕ್ಕೆ ತಕ್ಕಂತೆ ಬದುಕಿಗೆ ಹತ್ತಿರವಾದ ಗಡುಸಾದ ತ್ರಾಣವುಳ್ಳ ಭಾಷೆ ಕವಿಗಿದೆ ಎಂಬ ಕಾರಣದಿಂದ, ಕವಿಯ ಭವಿಷ್ಯದ ಬಗ್ಗೆ ಆಶಾವಾದಿಯಾಗಿದ್ದರು.

ಆದರೆ ಆಲನಹಳ್ಳಿಯವರ ಕಾವ್ಯ ವಿಮರ್ಶಕರು ನಿರೀಕ್ಷಿಸಿದ ಮಟ್ಟಕ್ಕೆ ಮುಟ್ಟಲಿಲ್ಲ. ಸಲಿಗೆಯಿಂದಲೇ ಹೇಳಲಿ, ಟೀಕೆಗಾಗಿಯೇ ಹೇಳಲಿ ಪೋಲಿ ಪದ್ಯಗಳನ್ನು ಬರೆಯುವ ಕೃಷ್ಣ ಎಂತಲೋ "ಕಾಮುಕ ಕವಿ" ಎಂತಲೋ ಕರೆಯುತ್ತಿದ್ದರು. ಅಕಾಲ ಮೃತ್ಯುವಿಗೆ ಈಡಾದ ಮೇಲೆ ಈ ಕವಿಯ 'ಮಣ್ಣಿನ ಹಾಡು' ಸಂಕಲನದ ಬಗ್ಗೆ ಓ.ಎಲ್. ನಾಗಭೂಷಣ ಸ್ವಾಮಿಯವರು 'ಮಣ್ಣಿನ ಹಾಡು ಕೂಡ ದೈಹಿಕ ಕಾಮದ ವಿವರಗಳನ್ನು ತುಂಬ ದಟ್ಟವಾಗಿ ತುಂಬಿಕೊಂಡಿದೆ ಅಷ್ಟೇ. ಅದರಾಚೆ ಏನಾದರೂ ಇದೆ ಅಂತ ಕಾಣುವುದಿಲ್ಲ... ಆದರೆ ವಿಷಯವನ್ನು ವ್ಯಕ್ತಮಾಡುವುದಕ್ಕೆ ಕಾಮವೇ ಮಾಧ್ಯಮ. ಕಾಮ ಈ ಸಂಕಲನದಲ್ಲಿ ವಿಷಯವೂ ಹೌದು, ಮಾಧ್ಯಮವೂ ಹೌದು,

ಕವಿಯ ತತ್ವವೂ ಹೌದು - ಅಂದರೆ ಮಣ್ಣಿನ ಹಾಡಿನಲ್ಲಿ ಏನಾದರೂ ತತ್ವಕಾಣಲು ಸಾಧ್ಯ ಆಗುವುದಾದರೆ..." ಹೇಳುತ್ತ, ಮುಂದುವರಿದು ಕಾವ್ಯದಲ್ಲಿ ಕೃಷ್ಣರ ದೃಷ್ಟಿ ಕೋನದ ಬಗ್ಗೆ, "ಇಡೀ ಸಂಕಲನದಲ್ಲಿಹೆಣ್ಣನ್ನು ಕಾಣುವ ದೃಷ್ಟಿ ಇದೆಯಲ್ಲ ಅದು ತುಂಬ ಸಂಕುಚಿತ, ಅನಾರೋಗ್ಯಕರ, ಗಂಡು ದೃಷ್ಟಿ, ಭ್ರಮಾಧೀನ ದೃಷ್ಟಿ. ಇಲ್ಲಿ ಬರುವ ಹೆಣ್ಣುಗಳಿಗೆ ಮನಸ್ಸೇ ಇಲ್ಲ. ವ್ಯಕ್ತಿತ್ವವೇ ಇಲ್ಲ. ಗಂಡಿನ ಮೈಸುಖಕ್ಕೆ ಒದಗುವ ವಸ್ತುವಾಗಿ ಕಾಣುವ ನೋಟ ಅ-ಮಾನುಷ ಅನ್ನಿಸುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಚೆನ್ನವೀರ ಕಣವಿಯರೂ ಈ ಕವಿತೆಗಳಲ್ಲಿ ತುಂಬಿರುವುದು ಕಾಮದ ಬಗೆಗಿನ ಉತ್ಕಟತೆ. ಅದರಿಂದ ಹೆಚ್ಚಿಗೆ ಹೇಳಲು ಏನೂ ಇಲ್ಲವೆಂಬುದನ್ನು ಹೇಳಿ "ರತಿಗೆ ಸಂಬಂಧಪಟ್ಟ ಉತ್ಸಾಹ, ಉದ್ರೇಕ, ಉನ್ಮತ್ತತೆಗಳ ಅಭಿವ್ಯಕ್ತಿಯಲ್ಲಿ ಬಾಳಿನ ಒಂದು ಅಮೂಲ್ಯವಾದ ಶಕ್ತಿಯನ್ನು ಕಂಡುಕೊಳ್ಳುವ ಪ್ರಾಮಾಣಿಕತೆಯೂ ಇಲ್ಲಿ ಕಂಡು ಬರುತ್ತದೆ" ಎಂದಿದ್ದಾರೆ.

ಕೃಷ್ಣರ 'ಮಣ್ಣಿನ ಹಾಡು' 'ಕಾಡುಗಿಡದ ಹಾಡು ಪಾಡು' ಸಂಕಲನದಲ್ಲಿರುವ ಕವಿತೆಗಳನ್ನು ಗಮನಿಸಿ ನಾಗತಿಹಳ್ಳಿ ಚಂದ್ರಶೇಖರ "ನಿಚ್ಚಳವಾಗಿ ಇಲ್ಲಿ ವಿಜೃಂಭಿಸಿರುವುದು ಕಾಮ. ಕಾಮದ ನೆರಳಲ್ಲಿ ಸಾಗುವ ವಿಕೃತಿ. ವಿಷಾದ, ಭಗ್ನಸ್ವಪ್ನ, ನಿರೀಕ್ಷೆ, ಅಭಿಸಾರ, ನಿರಾಸೆ ಮುಂತಾದ ಭಾವಗಳು ಇಲ್ಲಿ ತೀರಾ ಗೌಣ - ವಿಜೃಂಭಿಸಿರುವುದೊಂದೇ ಕಾಮ. ಇಲ್ಲಿನ ಬಹುತೇಕ ಕವಿತೆಗಳು ಕಾಮದ ಸುತ್ತ ಸುತ್ತುತ್ತವೆ" ಎಂದಿದ್ದಾರೆ.

ಕೃಷ್ಣರ ಕಾವ್ಯ ಯೌವನಾವಸ್ಥೆಯ ಹಂತದ್ದು. ಅಲ್ಲಿ ಕೂಡ ಕಾಮ ಬಿಟ್ಟರೆ ಯೌವನಾವಸ್ಥೆಯ ಇತರ ಅವಸ್ಥೆಗಳು ಬಿಚ್ಚಿಕೊಳ್ಳಲಿಲ್ಲ. ಬದುಕಿನ ಬಗೆಗೆ ಮೋಹಿತನಾಗಿದ್ದ ಕೃಷ್ಣ ಜೀವನ ಮೌಲ್ಯದ ಯಾವ ಬಗೆಯ ಪ್ರಶ್ನೆಗಳನ್ನೂ ಎದುರಿಸುವ ಅಪೇಕ್ಷೆಯನ್ನು ಕಾವ್ಯದಲ್ಲಿ ತೋರುವಂತೆ ಕಾಣುವುದಿಲ್ಲ (ಪ್ರಜಾವಾಣಿ ೧೮-೩-೮೯) ಎಂದು ಜಿ.ಎಚ್. ನಾಯಕರು ಅಭಿಪ್ರಾಯ. ಇದನ್ನು ಗಮನಿಸಿದ ಪೋಲಂಕಿ ರಾಮಮೂರ್ತಿಯವರು ಕೃಷ್ಣನ ಕಾವ್ಯವನ್ನು ಸಮರ್ಥಿಸಿಕೊಂಡು ದೀರ್ಘಲೇಖನ ಬರೆದರು (ಅಪ್ರಕಟಿತ). ಕೃಷ್ಣರ 'ಒಂದು ಪ್ರಣಯ ಪ್ರಸಂಗ' ದ ಬಗ್ಗೆ ಪ್ರಸ್ತಾಪಿಸಿ ಅದರ ಒಳತಿರುಳನ್ನೂ ಒಂದೊಂದೇ ಶಬ್ದದಿಂದ ಅರ್ಥ ಬಿಡಿಸಿ ತೋರಿಸಲು ಪ್ರಯತ್ನಿಸಿದ್ದಾರೆ. ಕೊನೆಗೆ ಅವರು "ಕೃಷ್ಣನ 'ಒಂದು ಪ್ರಣಯ ಪ್ರಸಂಗ' ಕ್ಕಿಂತ ಕಾಳಿದಾಸನ ಶಕುಂತಲ, ಷೇಕ್ಸಪಿಯರಿನ 'ಸಾನೆಟ್‌ಗಳು,' ಕೀಟ್ಸ್‌ನ "ಈವ್ ಆಫ್ ಸೇಂಟ್ ಆಗ್ನೆಸ್' ದರ್ಶನದಲ್ಲಿ ತತ್ವಶ: ಮುಂದೆ ಹೋಗಿಲ್ಲ. ಆ ದರ್ಶನವನ್ನು ಎಷ್ಟೇ ಸಂಕೀರ್ಣವಾದ ಸಮೃದ್ಧವಾದ ಅನುಭವಗಳ ಸಾಂದ್ರತೆಯಲ್ಲಿ ಅವರವರ ಪ್ರತಿಭೆಗೆ ತಕ್ಕಂತೆ ಅವರು ಅವರ ಕೃತಿಗಳಲ್ಲಿ ದುಡಿಸಿಕೊಂಡಿದ್ದರೂ ಕೂಡ" ಎಂದಿದ್ದಾರೆ.

ಪೋಲಂಕಿ ರಾಮಮೂರ್ತಿಯವರು ತಮ್ಮ ಇನ್ನೊಂದು ಲೇಖನದಲ್ಲಿ ಕೃಷ್ಣರ 'ಬೆಳಕು' ಕವಿತೆಯ ಜತೆಗೆ ಬೇಂದ್ರೆಯವರ 'ಬೆಳಗು' ಕವಿತೆಯಿಟ್ಟು ತುಲನಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಬೇಂದ್ರೆಯವರ ಕವಿತೆ ಕವಿ ಸಮಯಗಳಿಂದ ಕೂಡಿದ್ದು, 'ಇದು ಬರಿ ಬೆಳಗಲ್ಲೊ ಅಣ್ಣಾ' ಅನ್ನುವಂಥಾ ಅನುಭಾವೀ ಸೋಗನ್ನು ಹಾಕಿಕೊಂಡಾಗ ಹಾಸ್ಯಾಸ್ಪದವಾಗುತ್ತದಾಗಲೀ, ಯಾವ ಗಂಭೀರ ಮನಸ್ಸನ್ನೂ ಕೆದಕುವುದಿಲ್ಲ' ಅವರು ಕೃಷ್ಣನ 'ಬೆಳಗು' ಕವಿತೆಯಲ್ಲಿ "ಹಸಿವಿದೆ, ಹಸಿವಿನ ಬೇಟೆ ಇದೆ. ಬೆದೆ ಇದೆ. ಬೆದೆಯ ಬೇಟೆಯಿದೆ. ಸಾವಿದೆ, ಸಾವಿನ ಸೆಣಸಾಟವಿದೆ" ಎನ್ನುತ್ತಾರೆ. ಒಟ್ಟಾರೆ ಇವರು ಕೃಷ್ಣನ ಕವಿತೆಗಳು ಮಣ್ಣಿನ ವಾಸ್ತವ ಜೀವವನ್ನು, ಜೀವನವನ್ನು, ಸಾಕ್ಷಾತ್ಕರಿಸುವ ಜೀವೋತ್ಕರ್ಷದ ಕೇಕೆ, ಕುಣಿತ, ಸಂಭ್ರಮ, ಸಮಾರಂಭ. ಬಾಳೇ ವೈಭೋಗ, ಈ ಬಾಳಿಗೆ ಬೆನ್ನು ತಿರುಗಿಸಿದ ಪರಂಪರೆ, ಸನಾತನ. ಎಷ್ಟೇ ಹಳತಾಗಿರಲಿ ಭವ್ಯವೆಂದೂ ದಿವ್ಯವೆಂದೂ ಪೂಜೆಗೊಂಡಿರಲಿ, ಅದು ಸಾವಿಗಿಂತಲೂ ಘೋರವಾದ ಕೇಡು, ಈವಿಲ್. **evil** ಎನ್ನುವುದನ್ನು ಪ್ರಮಾಣಿಸಿ ಪ್ರತ್ಯಕ್ಷಗೊಳಿಸುತ್ತವೆ" ಎನ್ನುತ್ತಾರೆ.

ಕೃಷ್ಣರ 'ತಪ್ತ' ಕಥಾಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಡಾ. ಯು.ಆರ್. ಅನಂತಮೂರ್ತಿಯವರು, "ನೆಲದ ದಟ್ಟ ವಾಸನೆಯಿರುವ ತನ್ನ ಬಾಲ್ಯದ ಸಂವೇದನೆಯನ್ನೂ, ತನ್ನ ಬಾಳನ್ನು ವಿವಿಧ ದಿಕ್ಕುಗಳಲ್ಲಿ ಹೊರಳಿಸುತ್ತಿರುವ ಪ್ರಬುದ್ಧ ಜೀವನದ ವೈಚಾರಿಕತೆಯನ್ನೂ ಒಟ್ಟಿಗೇ ಏಕಕಾಲದಲ್ಲಿ ದುಡಿಸಿಕೊಂಡು ತನ್ನ ನೈಜವಾದ ವ್ಯಕ್ತಿತ್ವಕ್ಕೆ ಅರ್ಥಪೂರ್ಣವಾದ ರೂಪವನ್ನು ಕೊಡುವುದು ಶ್ರೀಕೃಷ್ಣರ ಕಲೆಗಾರಿಕೆಯ ಮುಖ್ಯ ಹೋರಾಟವಾಗಿದೆ ಎಂಬುದು ಈ ಕಥೆಗಳಿಂದ ಸ್ಪಷ್ಟವಾಗುತ್ತದೆ" ಎಂದು ಬರೆದಿದ್ದಾರೆ. ಅವರು ಕೃಷ್ಣರ ವೈಚಾರಿಕತೆ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ತಮ್ಮ ಅನುಭವದ ಜತೆ ವೈಚಾರಿಕತೆಯನ್ನು ಪ್ರಬುದ್ಧ ದೃಷ್ಟಿಕೋನದಿಂದ ನೋಡಲಾಗಿಲ್ಲವೆಂದು. ಈ ಮಾತನ್ನೇ ಸಮರ್ಥಿಸಿ ಕೆ.ವಿ. ತಿರುಮಲೇಶ, "ಶ್ರೀಕೃಷ್ಣರ ವೈಚಾರಿಕತೆ ಅವರ ಅನುಭವಕ್ಕೆ ಒಂದು ಅರ್ಥ ಅಥವ ಸ್ವರೂಪ ಕೊಡುವುದಕ್ಕೆ ಇನ್ನೂ ಸಮರ್ಥವಾಗಿಲ್ಲ ಎಂಬುದು ನನ್ನ ಅಭಿಪ್ರಾಯ" ಎನ್ನುತ್ತಾರೆ. ಅನಂತಮೂರ್ತಿ ಕೃಷ್ಣರ ಕೆಲವು ಮಿತಿಗಳನ್ನು ಹೇಳುತ್ತಾ 'ಆಗಂತುಕ' ಕಥೆ ಕನ್ನಡದ ಅತ್ಯಂತ ಸಾರ್ಥಕ ಕಥೆಗಳ ಸಾಲಿನಲ್ಲಿ ನಿಲ್ಲುತ್ತದೆ ಎಂದು ಹೇಳಿ ಆ ಕಥೆಯ ಬಗ್ಗೆ ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. "ಒಬ್ಬ ಮುಗ್ಧ ಬಾಲಕನ ಸಾಕ್ಷೀಪ್ರಜ್ಞೆಯಲ್ಲಿ ಇಡಿ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಮೊದಲನೆಯ ವಾಕ್ಯದಿಂದಲೇ ನಾವು ಕಿಟ್ಟಿಯ ಮುಗ್ಧಮನಸ್ಸಿನ ಲೋಕವನ್ನು ಪ್ರವೇಶಿಸುತ್ತೇವೆ. ಕಿಟ್ಟಿಯ ಮನಸ್ಸಿನಲ್ಲಿ ಹುಟ್ಟುವ ಸಾವಿನ ಮುನ್ನಳುಕು ಗಾಢವಾಗಿ ಬೆಳೆದು ಮುಂದೆ ಮೃತ್ಯುಪ್ರಜ್ಞೆಯಾಗಿ ಕಾಡಬಹುದಾದ ಸೂಚನೆಯೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಕಥೆಯ ಕ್ಷುಬ್ಧ ವಾತಾವರಣದ ದಟ್ಟತೆಗೆ ನಿಸರ್ಗ ಎಷ್ಟು ಕಾರಣವೋ ಅಷ್ಟೇ ಮನುಷ್ಯಲೋಕದ ವ್ಯಗ್ರತೆಗಳೂ ಕಾರಣಗಳಾಗಿವೆ. ಕಿಟ್ಟಿ

ಪ್ರೀತಿಸುವ ತಾಯಿ ಅಜ್ಜಿಯರು ಪರಸ್ಪರ ಬಡಿದಾಡುತ್ತಾರೆ. ತಂದೆ ತಾಯಿಯನ್ನು ಹೊಡೆಯುತ್ತಾನೆ. ತಾಯಿ ದುಗುಡದಲ್ಲಿ ಸಾವಿನ ಬಗ್ಗೆ ಮಾತಾಡುತ್ತಾಳೆ. ತುಂಬಿದ ಅನುಭವದ ಅಜ್ಜ ವಿಷಾದದಿಂದ ಸಾವಿನ ಅನಿವಾರ್ಯತೆಯನ್ನು ಕುರಿತು ಹೇಳುತ್ತಾರೆ. ಕಿಟ್ಟಿಗೆ ಪ್ರಿಯರಾದ ಮಾವಯ್ಯ ಸಾಯುತ್ತ ಮಲಗಿದ್ದಾರೆ. ಅವರು ಒಳ್ಳೆಯವರಿದ್ದರೂ ಅವರ ಹೆಂಡತಿ 'ಬೇವಿನ ಹಟ್ಟಿ ಕಾಳವ್ವ'ನಂಥವಳು. ಅವರು ಮುದ್ದಿನಿಂದ ಸಾಕಿದ ಒಬ್ಬಳೇ ಮಗಳು ದಾರಿ ತಪ್ಪಿದವಳು, ತಂದೆ ಸಾಯುತ್ತಿದ್ದಾಗಲೂ ಬಂದು ಅವರ ಮುಖ ನೋಡದವಳು. ಪ್ರೇಮ, ಕ್ರೌರ್ಯ, ಹಿಂಸೆ, ಭಯ, ರೋಗಯಾತನೆ - ಹೀಗೆ ಎಲ್ಲವೂ ಈ ಕಥೆಯ ಲೋಕದ ಸಂಕೀರ್ಣ ಅಂಶಗಳು. ಮಗುವಿನ ಮುಗ್ಧ ಮನಸ್ಸಿನ ಮೇಲೆ ಮೌನವಾಗಿ ಪರಿಣಾಮ ಮಾಡುತ್ತಿರುವ ಸಂಗತಿಗಳು. ಕಿಟ್ಟಿ ಎಲ್ಲದಕ್ಕೂ ಸಾಕ್ಷಿಯಾಗಿ ಮಗುವಿಗೆ ಸಹಜವಾದ ನಿರ್ಲಿಪ್ತತೆ ಆಸಕ್ತಿಗಳಿಂದ ಇವುಗಳನ್ನೆಲ್ಲ ನೋಡುತ್ತಾನೆ. ಈ ಕತೆಯ ತುಂಬ ದಟ್ಟವಾದ ವಿವರಗಳ ಜೊತೆಗೇ ಕಿಟ್ಟಿ ಸ್ಕೂಲಿನಲ್ಲಿ ಕೂತು ಕಾಲುಗಳಿಗೆ ಅಂಟಿಕೊಂಡಿದ್ದ ಕೆಸರು ಚಕ್ಕೆಗಳನ್ನು ಬಿಡಿಸುವುದರಲ್ಲೇ ಮಗ್ನನಾದ ವಿವರಕ್ಕೂ ಈ ಕಥೆಗಳಲ್ಲಿ ಎಡೆಯಿದೆ. ಸಾಯುತ್ತ ಮಲಗಿರುವ ಮಾವಯ್ಯನ ಪಾದಗಳು, ಮೀನಿನ ಹೊಟ್ಟೆಯಂತೆ ಬಿಳಚಿಕೊಂಡಿರುವ ಉದರ, ಸಂಜೆಗತ್ತಲಿನಲ್ಲಿ ಗುಳವನ್ನು ಕೆಂಪಗೆ ಕಾಯಿಸುತ್ತಿರುವ ಆಚಾರಿಯ ಕುಲುಮೆ, ಗಾಢವಾದ ರೀತಿಯಲ್ಲಿ ಸಾವಿನ ಅಳುಕನ್ನು ಬೆಳೆಸುವ ಮಳೆ, ಬೊಬ್ಬಿರಿಸಿ ಮಾಡುವ ಯಮನ ವರ್ಣನೆ,ಕಜ್ಜಿ ಕೆರೆಯುತ್ತ ಬೆಂಕಿಯ ಎದುರು ಕೂತ ಈ ಅನಾಥ ಪ್ರಜ್ಞೆಯ ಬೇವರ್ಸಿಯ ಚಿತ್ರ – ಈ ಎಲ್ಲವೂ ಕೂಡಿ ಸಾಂಕೇತಿಕವೂ ಸ್ನಿಗ್ಧವೂ ಆದ ಒಂದು ಪ್ರಪಂಚವನ್ನು ಸೃಷ್ಟಿಸುತ್ತದೆ. ಗುಣವಾಚಕಗಳನ್ನು ಪೇರಿಸಿ ಬೆಳದಿಂಗಳನ್ನು ವರ್ಣಿಸುವುದರ ಬದಲು ಅದರ ಪ್ರತಿಫಲನವನ್ನು ಒಂದು ಒಡೆದ ಗಾಜಿನ ಚೂರಿನ ಮೇಲೆ ತೋರಿಸುವುದೇ ಹೆಚ್ಚು ಪರಿಣಾಮಕಾರಿಯಾದ ರೀತಿಯೆಂದು ಚೆಕೋವ್ ಹೇಳಿದ ಮಾತುಗಳು ಇಂತಹ ಕಥೆಗಳಲ್ಲಿ ಬರುವ ಸಾರ್ಥಕ ವಿವರಗಳನ್ನು ನೋಡಿದಾಗ ನೆನಪಾಗುತ್ತದೆ. ಕಥೆಯ ಉದ್ದಕ್ಕೂ ಬೆಳೆಯುತ್ತ ಬರುವ ಸಾವಿನ ಮುನ್ಸೂಚನೆಗಳು ಕಿಟ್ಟಿಯ ಮನಸ್ಸಿನಲ್ಲಿ ಒಂದು ಪರ್ಯಾಪ್ತ ಸ್ಥಿತಿಯನ್ನು ಮುಟ್ಟಿದಾಗ ಮಳೆಯಲ್ಲಿ ಅಜ್ಜನ ಹೆಣವನ್ನು ಒಳಗೆ ತರುತ್ತಾರೆ. ಆಗ ಮನೆಯಲ್ಲೆಲ್ಲ ಏಳುವ ರೋದನ ಅತ್ಯಂತ ನಿರ್ಲಿಪ್ತವಾಗಿ ಪರಿಣಾಮಕಾರಿಯಾಗಿ ವರ್ಣಿತವಾಗಿದೆ. ಕತೆಯ ಕೊನೆಯಲ್ಲಿ ಕಿಟ್ಟಿ ಪ್ರಜ್ಞೆ ತಪ್ಪಿ ಬೀಳುವುದು ಮಾತ್ರ ಅನವಶ್ಯಕವೆನಿಸುತ್ತದೆ. 'ತಪ್ತ' ಕಥಾ ಸಂಕಲನದ ಕಥೆಗಳಲ್ಲಿ ಬರುವ ನಾಯಕರು ಒಂದಲ್ಲ ಒಂದು ಕಾರಣದಿಂದ ನಿಸ್ಸಹಾಯಕರು ಮತ್ತು 'ಭೂತ'ವನ್ನು ಮರೆಯದವರು. ಈ ಅಂಶವನ್ನು ಕೆ.ವಿ. ತಿರುಮಲೇಶ ಪ್ರಶ್ನಿಸಿದ್ದಾರೆ. "ಏಕೆ ಈ ತಪ್ತರೆಲ್ಲ ಭೂತಕ್ಕೆ ಮರಳುತ್ತಾರೆ, ಅಥವ ಭೂತದಿಂದ ತಪ್ಪಿಸಿಕೊಳ್ಳಲಾರರು? ಪರಿಸರದ ವಿರುದ್ಧದ ಇವರ ಬಂಡಾಯವೆಲ್ಲ ಕೇವಲ ಕಲ್ಪನೆಯಲ್ಲೇಕೆ ಕೊನೆಗೊಳ್ಳುವುದು? ಇವರೇಕೆ ಸ್ವತಂತ್ರ ವ್ಯಕ್ತಿತ್ವಗಳನ್ನು

ರೂಪಿಸಿಕೊಳ್ಳುವುದಕ್ಕೆ ಅಸಮರ್ಥರು? ಪರಿಸರಕ್ಕಿಂತಲೂ ಇವರೆಲ್ಲರೂ ದುರ್ಬಲರಾಗಿರುವುದೇಕೆ?" ಈ ವಿಮರ್ಶಕರು ಹಾಗೂ ಮೊದಲ ನೋಟಕ್ಕೆ ಯಾರೂ ಗುರುತಿಸಬಹುದಾದಂತದ್ದು ಕೃಷ್ಣರ ಕಥೆಗಳಲ್ಲಿ (ಸಾಹಿತ್ಯದಲ್ಲಿ) ಬರುವ ಪಾತ್ರಗಳೆಲ್ಲ ಕಪ್ಪು ಬಿಳುಪಿನವು. 'ತಪ್ತ' ಕಥಾ ಸಂಕಲನದ ನಂತರ ಬಂದ 'ಫೀನಿಕ್ಸ್' ಸಂಕಲನದ ಕಥೆಗಳು ಬೇರೆ ಬಗೆಯ ಆಶಯವನ್ನು ಹೊಂದಿವೆ. ಮುಕ್ತ ಲೈಂಗಿಕ ಮನೋಭಾವದ ಕಥೆಗಳು. ಆದರೆ ಇಲ್ಲಿ ಮುಖ್ಯವಾಗಿ ನಾಯಕನ ಧೋರಣೆಗನುಗುಣವಾಗಿ ಅವನ ನಾಯಕಿಯರು ಇರುತ್ತಾರೆ. ಅಂದರೆ ಪುರುಷ ದೃಷ್ಟಿಕೋನವೇ ಪ್ರಧಾನವಾಗಿ ಕಂಡು ಬರುತ್ತದೆ. ಈ ವಿಷಯವಾಗಿ "ಗಂಡು-ಹೆಣ್ಣಿನ ಸಂಬಂಧಗಳಲ್ಲಿ ಆಲನಹಳ್ಳಿಯವರದು ಏಕಪಕ್ಷೀಯವಾದ ಪುರುಷ ಅಹಮಿಕೆಯಿಂದ ಕೂಡಿದ ಪೂರ್ವಾಕ್ರಮಿತ ಧೋರಣೆ. ಹೆಣ್ಣು ಒಂದು ವಸ್ತುವಾಗಿ ಬರುತ್ತಾಳೆ. ತನ್ನ ತೊಡೆ, ಸೊಂಟ, ಮೊಲೆಗಳನ್ನು ವರ್ಣಿಸಿಕೊಳ್ಳಲಿಕ್ಕಾಗಿ ಬರುತ್ತಾಳೆ. ಬರುವ ಸ್ತ್ರೀಪಾತ್ರಗಳೆಲ್ಲ ಬಹುತೇಕ ಕಾಮಾತುರರಾಗಿರುತ್ತಾರೆ. ನಗ್ನರಾಗಲು ಹಾತೊರೆಯುತ್ತಾರೆ. ನಾಯಕರೆದುರು ದುರ್ಬಲರೂ ಆತ್ಮವಿಶ್ವಾಸ ಕಳೆದುಕೊಂಡ ಹೆಣ್ಣುಗಳೂ ಆಗಿರುತ್ತಾರೆ. ರತಿ ಸುಖವನ್ನು ಉತ್ಕಟವಾಗಿ ಕೊಡಬಲ್ಲ ವಿಲಾಸಿನಿಯರಾಗಿರುತ್ತಾರೆ." ಎಂದು ನಾಗತಿಹಳ್ಳಿ ಚಂದ್ರಶೇಖರ ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವಾಗುವ ಹಾಗೆ "ಹೆಣ್ಣುಗಳೆಲ್ಲ ಗಂಡ ಅಪ್ಪ ಅಮ್ಮಂದಿರನ್ನು ತೊರೆದು ತನ್ನೊಡನೆ ನಡೆಸುವ ಪ್ರಣಯ ವ್ಯವಹಾರ ಅವನೊಡನೆ (ನಾಯಕ) ತಾನೂ ತಿಂದದ್ದು ಕುಡಿದದ್ದು. ಜವಾಬ್ದಾರಿಗೆ ಬಾಧ್ಯನಾಗದೆ ಭೋಗಿಸಿದ್ದು ಇವು ಕಥೆಗಳ ನೆಪದಲ್ಲಿ ಇಲ್ಲಿ ಬರುತ್ತವೆ. ಕಾರಣವಿಲ್ಲದೆ ಮತ್ತೆ ಮತ್ತೆ ಬರುವ ವೈನ್ ಕುಡಿತ, ಸಂಭೋಗಗಳ ವರ್ಣನೆ ಜುಗುಪ್ಸೆ ಹುಟ್ಟಿಸುತ್ತವೆ" ಎಂದು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಅಭಿಪ್ರಾಯವಾಗಿದೆ. ಈ ಎರಡು ಅಭಿಪ್ರಾಯಗಳಿಗಿಂತ ಭಿನ್ನವಾದ ನೆಲೆಯಲ್ಲಿ ರಾಘವೇಂದ್ರ ಪಾಟೀಲರು ಯೋಚಿಸಿದ್ದಾರೆ. ಕೃಷ್ಣನ 'ತಪ್ತ' ಸಂಕಲನದ ಕಥೆಗಳಲ್ಲಿ ಮದುವೆ ಒಂದು ಕ್ರೈಸಿಸ್ ಆಗಿದೆ, ಎನ್ನುತ್ತಾರೆ. ಅವರ 'ಫೀನಿಕ್ಸ್' ಸಂಕಲನದ ಬಗ್ಗೆ "ಈ ಎಲ್ಲ ಕಥೆಗಳಲ್ಲಿ ನನಗೆ ಕೃಷ್ಣನ ಮುಖ್ಯವಾದ ಗ್ರಹಿಕೆ ಎಂದು ತೋರುವುದು, ಲೈಂಗಿಕ ಗಾಯ. ಭಾರತದ ಇಡೀ ಸಾಂಸ್ಕೃತಿಕ ಇತಿಹಾಸದಲ್ಲಿ ಅವರು ಅತ್ಯಂತ ಮುಖ್ಯವಾಗಿ ಅನುಭವಿಸುವ ಗ್ರಹಿಕೆ ಈ ಲೈಂಗಿಕ ಗಾಯವಾಗಿದೆ. 'ಒಬ್ಬ ಬ್ರಾಹ್ಮಣ ಎಷ್ಟು ಜನ ಶೂದ್ರ ಕನ್ನೆಯರನ್ನಾದರೂ ಉಪಪತ್ನಿಯರಾಗಿ ಇಟ್ಕೋಬಹುದು. ಆದ್ರೆ, ಮದುವೆ ಮಾಡ್ಕೋಬಾರ್ದು' ಎಂಬಂತಹ ಮನುಸ್ಮೃತಿಯ ಸಾಮಾಜಿಕ ಕಟ್ಟಳೆ ಊರಿದ ಗಾಯ ಇದು. ಇದಕ್ಕೆ 'ಅಂಟಿದ ನಂಟಿನ ಕೊನೆ ಬಲ್ಲವರಾರು' ಕಥೆಯ ನಾಯಕ ಅರ್ಥೈಸಿಕೊಳ್ಳುವ ರೀತಿ 'ನೋಡು ಶಾಲಿನಿ. ಇಲ್ಲೇ ನನಗೆ ವೈದಿಕ ದ್ವೇಷ ಉಕ್ಕೋದು. ವೈದಿಕನ ಭೋಗಕ್ಕೆ ಶೂದ್ರ ಕನ್ಯೆ ಬೇಕು. ಮದುವೆ ಆದ್ರೆ ಶೂದ್ರಳ ಮಗನಿಗೆ ಇನ್ನೆಲ್ಲ ತನ್ನ ಶೋಷಣೆಯ ಬಂಡವಾಳವಾದ ವೇದ, ಧರ್ಮ ಮತ್ತು ಇರೋ ಆಸ್ತಿಯಲ್ಲೂ ಪಾಲು ಇದೆಲ್ಲ ಕೊಡಬೇಕಾಗುತ್ತೆ

ಅಂತ ಮಾಡಿಕೊಂಡ ಉಪಚಕ್ರವ್ಯೂಹ ಇದು.' ಈ ಲೈಂಗಿಕ ಗಾಯ ಅವನನ್ನು ಅದಕ್ಕೆ ಉತ್ತರವಾಗಿ ಸಾಧ್ಯವಾದಷ್ಟು ವೈದಿಕ ಕನ್ಯೆಯರನ್ನು ಹಾಳು ಮಾಡೋದು ಅಂತ ಪ್ರತಿಜ್ಞೆ ಮಾಡಿದೆ, ಅದನ್ನು ಸಾಕಷ್ಟು ಮಾಡಿಯೂ ಮಾಡಿದೆ, ಎಂಬಂತಹ ನಿಲುವು ನಡವಳಿಕೆಗೆ ದೂಡಿದೆ. ಆದರೆ ವಾಸ್ತವದಲ್ಲಿ ಸ್ಥಿತಿ ಇರುವಲ್ಲಿಯೇ ಉಳಿದು ಬಿಡುತ್ತದೆ. ಶಾಲಿನಿ ಇವನಿಗೆ ಕೊಟ್ಟು ಪಡೆದು ಆದಮೇಲೆ ವೈದಿಕ ನಂಬಿಕೆಯ ಹುಡುಗನೊಬ್ಬನನ್ನು ಮದುವೆಯಾಗಿ ಅಮೇರಿಕೆಗೆ ಹಾರಿ ಹೋಗಿಬಿಡುತ್ತಾಳೆ. ಇವನು ಊರಿದ ಬೀಜ ನಿಷ್ಫಲವಾಗುತ್ತದೆ. "ಮತ್ತೊಂದು ಪ್ರೇಮ ಪ್ರಸಂಗ"ದ ಪಲ್ಲವಿ ಕೂಡ ನಾಯಕನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಮದುವೆಗೆ ಮಾತ್ರ ಸಮ್ಮತಿಸುವುದಿಲ್ಲ. ಬೇರೊಬ್ಬನನ್ನು ಮದುವೆಯಾದ ಅವಳು ವಿಮಾನದಲ್ಲಿ ವಿದೇಶಕ್ಕೆ ಹಾರಿಹೋಗಿ ಬಿಡುತ್ತಾಳೆ." ರಾಘವೇಂದ್ರ ಪಾಟೀಲರು ಈ ರೀತಿ ಹೇಳುತ್ತ ಇಲ್ಲಿಯ ನಾಯಕಿಯರು ವಿದ್ಯಾವಂತ ಸ್ತ್ರೀಲೋಕದ ಲಿಬರಲ್ ಮನೋಭಾವದವರು ಎಂದು ಹೇಳುತ್ತಾರೆ. ಮುಂದುವರಿದು "ಸೆನ್ಸುಅಸ್ ಅನ್ನುವಂತಹ ದೇಹರಚನೆ ಹೊಂದಿರುವ ಈ ಕಥೆಗಳು ತಮ್ಮ ಮೂಲ ಕಲ್ಪನೆಯ ಲೈಂಗಿಕ ಗಾಯವನ್ನು ಮೀರಿ ಬೆಳೆಯುವ, ಈ ಲೈಂಗಿಕ ಗಾಯಕ್ಕೆ 'ಅಂಟಿ ಡೋಟ್' ನ ನಿಲುವು ತಾಳುವುದನ್ನೂ ಕಾಣುತ್ತೇವೆ. ಶಾಲಿನಿಯೊಂದಿಗಿನ ಸ್ನೇಹ ಕಾಮದ ಸಂಬಂಧದಲ್ಲಿ ನಾಯಕನ ಮನೋಭೂಮಿಕೆಯಲ್ಲಿ ಹೊಸ ಬೆಳವಣಿಗೆಗಳು ಸಾಧ್ಯವಾಗುತ್ತದೆ. ಮದುವೆ ಎನ್ನುವದೊಂದು ಸಂತೆ, ಅಲ್ಲಿ ಪ್ರೇಮ ಕಾಮಕ್ಕಿಂತ ಕಾಮರ್ಸ್‌ನ ನಿಯಮಗಳು ಹೆಚ್ಚು ಅನ್ವಯವಾಗುತ್ತವೆನ್ನುವ ಸಮಾಜ ವ್ಯವಸ್ಥೆಯ ಬಗೆಗಿನ ತಿಳುವಳಿಕೆ ಉಂಟಾಗುತ್ತದೆ. ಅಲ್ಲದೇ ಯಾವ ಸಂಕುಚಿತ ಉದ್ದೇಶದೊಂದಿಗೆ ಶಾಲಿನಿಯೊಂದಿಗೆ ತನ್ನ ಸಂಬಂಧವನ್ನು ನಾಯಕನು ಏರ್ಪಡಿಸಿಕೊಂಡಿದ್ದನೋ ಅದು ಸಂಪೂರ್ಣವಾಗಿ ಪಲ್ಲಟಗೊಂಡುಬಿಡುತ್ತದೆ. ಹೆಣ್ಣು ಗಂಡಿನ ನಡುವಿನ ಪ್ರೇಮ ಕಾಮಗಳು ಅತ್ಯಂತ ವೈಯಕ್ತಿಕವಾದ ಮೌಲ್ಯಗಳು ಮತ್ತು ಇವುಗಳನ್ನು ನಿಯಂತ್ರಿಸಲು ಹೊರಡುವ ವ್ಯವಸ್ಥೆ ಒಂದು ಕ್ರೈಸಿಸನ್ನು ನಿರ್ಮಿಸುತ್ತದೆ. ಇಂಥ ಕ್ರೈಸಿಸ್‌ಗೆ ಸಮಾಜದ ಪ್ರತಿಯೊಂದು ವರ್ಗವೂ ತನ್ನ ದೇಣಿಗೆ ಸಲ್ಲಿಸುತ್ತದೆ. ಗೌಡನೊಬ್ಬ ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗುವುದನ್ನು ಬ್ರಾಹ್ಮಣ ಸಮಾಜ ಹೇಗೆ ಸಹಿಸುವುದಿಲ್ಲವೋ ಹಾಗೆಯೇ ಒಕ್ಕಲಿಗ ಸಮಾಜ ಕೂಡ ಸಹಿಸುವುದಿಲ್ಲ. ಶಾಲಿನಿಯೊಂದಿಗಿನ ಸ್ನೇಹವನ್ನು ಕಂಡು ನಾಯಕನ ಸಂಬಂಧಿ ಹುಡುಗಿಯೊಬ್ಬಳು ಮತ್ಸರದಿಂದ ಪ್ರತಿಕ್ರಿಯಿಸುತ್ತಾಳೆ. ಅವನ ಶೂದ್ರ ಸ್ನೇಹಿತರು ವೈಚಾರಿಕ ನೆಲೆಯಲ್ಲಿ ಅವನನ್ನು ವಿರೋಧಿಸುತ್ತಾರೆ. ಶಾಲಿನಿಯ ತಂದೆ ತಾಯಂದಿರು ಅವಳ ಚಲನವಲನಗಳನ್ನು ನಿರ್ಬಂಧಿಸಿ ಅವಳಿಗೆ ಬೇಗನೇ ತಮ್ಮ ಜಾತಿಯ ವರನೊಂದಿಗೆ ಮದುವೆ ಏರ್ಪಡಿಸುತ್ತಾರೆ" ಎನ್ನುತ್ತಾರೆ.

ಕೃಷ್ಣರು ಬರೆದಿರುವ 'ಸುಪ್ರತಿಕದ ದೇವರು.' 'ಮಾಮರವೂ ಮಾಪಿಳ್ಳೆಯೂ'

ಇವೆರಡು ಅವರ ಯಾವ ಕಥಾ ಸಂಕಲನದಲ್ಲಿ ಸೇರಿರದ ಕಥೆಗಳು. 'ಸುಟ್ಟತಿಕದ ದೇವರು' ಕಥೆಯ ಬಗ್ಗೆ ರಾಘವೇಂದ್ರ ಪಾಟೀಲರು ಹೇಳುವ ಮಾತು ಗಮನಾರ್ಹವಾದುದು: "ಈ ಕಥೆ ಎತ್ತುವ ನೈತಿಕ ಪ್ರಶ್ನೆಗೆ ನಾವು ನಿರ್ದಿಷ್ಟವಾದ ಉತ್ತರವೊಂದನ್ನು ಕಂಡುಕೊಳ್ಳಲು ಸಾಧ್ಯವಾದರೆ ನಮ್ಮ ಮಾನವೀಯತೆಯ ವ್ಯಕ್ತಿತ್ವ ಖಂಡಿತವಾಗಿ ಊನಗೊಂಡಿದೆ ಎಂದಾಗುತ್ತದೆ. ಚಿನ್ನಮ್ಮ, ದೊಡ್ಡವರು (ಮರಪ್ಪ) ಮತ್ತು ಮಾದಪ್ಪ (ಸುಟ್ಟತಿಕದ ದೇವರು) ಇದರೆಲ್ಲರ ಬಗ್ಗೆ ನಮಗೆ ಮರುಕ ಹುಟ್ಟುತ್ತ ಇವರಾರ ಬಗೆಗೂ ನೈತಿಕ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ."

ಡಾ.ಕೃಷ್ಣ, ಹಾಸನ ಅವರು "ಆಲನಹಳ್ಳಿಯವರ ಬಹುಪಾಲು ಕಥೆಗಳು ಖುಷಿಕೊಟ್ಟಂತೆ, ಅವು ನಮ್ಮನ್ನು ಗಾಢವಾಗಿ ಕಲುಕುವುದಿಲ್ಲ, ಚಿಂತನೆಗೀಡು ಮಾಡುವುದಿಲ್ಲ. ಆದರೆ 'ಸಂಬಂಧ'. 'ಆಗಂತುಕ', 'ಸುಟ್ಟತಿಕದ ದೇವರು' 'ಮಾಮರವೂ ಮಾಪಿಳ್ಳೆಯೂ' - ಇವು ಈ ಮಾತಿಗೆ ಅಪವಾದವಾದ ಕಥೆಗಳು" ಎಂದು ತೀರ್ಮಾನಿಸಿದ್ದಾರೆ. ಅವರು ಕೃಷ್ಣರ ಮೊದಲ ಕಥೆ 'ಸಂಬಂಧ' ಮತ್ತು ಕೊನೆಯ ಕಥೆ 'ಮಾಮರವೂ ಮಾಪಿಳ್ಳೆಯೂ' ಇವುಗಳಲ್ಲಿ ಆಶ್ಚರ್ಯಕರ ರೀತಿಯಲ್ಲಿ ಸಾಮ್ಯತೆಯಿದೆ ಎಂದು ಗುರುತಿಸಿ ಹೀಗೆ ಬರೆಯುತ್ತಾರೆ: "ಇವೆರಡೂ ಕಥೆಗಳ ಜೀವನ ಧೋರಣೆಯಲ್ಲಿ ಸಾಮ್ಯತೆಯಿದೆ. ಇವೆರಡೂ ಕಥೆಗಳ ಜೀವಾಳ 'ವಿಷಾದ'. ಈ ವಿಷಾದ ಭಾವದ ಎಳೆಯನ್ನು ಆಲನಹಳ್ಳಿಯವರ ಒಟ್ಟು ಸಾಹಿತ್ಯದಲ್ಲಿ ಗಾಢವಾಗಿಯೇ ನಾವು ಗುರುತಿಸಬಹುದಾಗಿದೆ. 'ಸಂಬಂಧ' ಕಥೆಯಲ್ಲಿ ಶೂದ್ರನಾಯಕ ತನ್ನ ಬಾಲ್ಯದ ಸಂಗಾತಿಯಾಗಿದ್ದ ಬ್ರಾಹ್ಮಣ ತರುಣಿ ಲಲಿತಳ ಬದುಕಿನ ದುರಂತವನ್ನು ಅಸಹಾಯಕನಾಗಿ ನಿಂತು ನೋಡುತ್ತ ಮಾನಸಿಕ ಯಾತನೆಗೆ ಗುರಿಯಾಗುತ್ತಾನೆ. ಲಲಿತಳ ಬಾಡಿದ ಬದುಕನ್ನು ಕಂಡು ವಿಷಾದಭಾವ ಅವನನ್ನು ಆವರಿಸುತ್ತದೆ. 'ಮಾನವೀಯತೆ ಇಲ್ಲದ ಜ್ಞಾನ, ವಿದ್ಯೆ, ಸಂಪತ್ತು ಎಷ್ಟಿದ್ದರೂ ನಿರರ್ಥಕವೆಂದು ಈಗ ಅರಿವಾಗುತ್ತಿದೆ' ಎಂಬ ತಾತ್ವಿಕ ನಿಲುವಿಗೆ ಆತ ಬಂದು ನಿಲ್ಲುತ್ತಾನೆ. 'ಮಾಮರವೂ ಮಾಪಿಳ್ಳೆಯೂ' ಕಥೆಯಲ್ಲಿ ಕೂಡ ಈ ವಿಷಾದ ಭಾವವೇ ಸ್ಥಾಯಿಯಾಗಿಬಿಡುತ್ತದೆ. ಇಲ್ಲಿನ ಕಥಾನಾಯಕ ತನ್ನ ಕಣ್ಣ ಮುಂದೆ ಮರಗಳ, ಅದರಲ್ಲೂ ಹಲಸು ಮಾವಿನಂತೆ ಹಣ್ಣುಕೊಡುವ ಮರಗಳ ಕಗ್ಗೊಲೆಯನ್ನೂ, ಆ ಮೂಲಕ ಪ್ರಕೃತಿಯ ಮೇಲೆ ಮಾನವ ನಡೆಸುತ್ತಿರುವ ಕ್ರೌರ್ಯವನ್ನೂ ಪರಿಸರ ನಾಶದೊಡನೆ ಬದುಕಿನ ನೈತಿಕತೆಯು ನಾಶವಾಗುತ್ತಿರುವುದನ್ನೂ ಅಸಹಾಯಕನಾಗಿ ನಿಂತು ನೋಡುತ್ತ ವಿಷಾದ ಭಾವದಲ್ಲಿ ಉಳಿದುಬಿಡುತ್ತಾನೆ. 'ಸಂಬಂಧ' ಕಥೆಯಲ್ಲಿ ಮಾನವೀಯ ಸಂಬಂಧಗಳು ತರಬಹುದಾದ ನೋವಿನ ಚಿತ್ರಣವಿದ್ದರೆ, 'ಮಾಮರವೂ ಮಾಪಿಳ್ಳೆಯೂ' ಕಥೆಯಲ್ಲಿ ಪರಿಸರ ನಾಶದೊಡನೆ ಬದುಕಿನ ಅಸ್ತಿತ್ವವೇ ನಾಶವಾಗುತ್ತಿರುವ ದುರಂತದ ಚಿತ್ರಣವಿದೆ. 'ಮಾಮರವೂ ಮಾಪಿಳ್ಳೆಯೂ' ಶ್ರೇಷ್ಠ ಕಥೆಯಾಗಬಹುದಾಗಿದ್ದ ಎಲ್ಲ ಸಾಧ್ಯತೆಗಳನ್ನು

ಪಡೆದುಕೊಂಡಿದೆ. ಆದರೆ ಇದು ಅಪೂರ್ಣವಾಗಿ ಉಳಿದದ್ದು ಮಾತ್ರ ವಿಷಾದನೀಯ ಸಂಗತಿ. ಈಗ ಇರುವಷ್ಟೆ ಕಥೆ ಕೂಡ ಬೆರಗುಮೂಡಿಸುವಷ್ಟು ಅನನ್ಯವಾಗಿದೆ.''

ಕನ್ನಡ ಕಾದಂಬರಿ ಪ್ರಪಂಚದಲ್ಲಿ 'ಕಾಡು' ಬಹು ಜನಪ್ರಿಯವಾದ ಕೃತಿ. ಸಿನೆಮಾ ಆಗುವುದರ ಮೂಲಕ ಅದರ ಪ್ರಸಿದ್ಧಿಗೆ ಮತ್ತಷ್ಟು ಕಾರಣವಾಯಿತು. ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ 'ಕಾಡು' ಒಂದು-ಎಂದು ಜಿ.ಎಸ್. ಆಮೂರ ಗುರುತಿಸಿದ್ದಾರೆ. ಅವರು ಈ ಕೃತಿಯ ಬಗೆಗೆ, ''ಗ್ರಾಮ ಜೀವನವನ್ನು ಹಾಸ್ಯ ಪ್ರಸಂಗಗಳಿಗಾಗಿ ಅಥವ ಭಾವುಕ ವಿಜೃಂಭಣೆಗಾಗಿ ಬಳಸಿಕೊಂಡ ಕಾದಂಬರಿಗಳಿಗಿಂತ ತೀರ ಭಿನ್ನವಾದ ಕೃತಿ. ಆಲನಹಳ್ಳಿಯವರ 'ಕಾಡು' ನಾಗರಿಕತೆಯ ಶೋಧದಲ್ಲಿ ಮಾನವ ಬಹುದೂರ ಬಂದಿದ್ದರೂ ಅವನ ಮೂಲ ಪ್ರವೃತ್ತಿಗಳಾದ ಕಾಮ, ದ್ವೇಷ, ಕೌರ್ಯಗಳು ಇನ್ನೂ ಆದಿಮ ಸ್ಥಿತಿಯಲ್ಲಿಯೇ ಇರುವುದು ಅವನ ಜೀವನದ ದುರಂತ. ಕೊನೆಯಿಲ್ಲದ ಈ ಅವಸ್ಥೆಯನ್ನೇ ಕೊಪ್ಪಲು, ಹೊಸೂರು ಇಂಥ ಕಾಡಿನ ಮಧ್ಯದ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯ ಮೂಲಕ ಆಲನಹಳ್ಳಿ ಅಭಿನಯಿಸಿ ತೋರಿಸಿದ್ದಾರೆ. ಇಂಥ ವಸ್ತುವನ್ನು ಹೊಂದಿದ ಅವರ ಕಾದಂಬರಿಗೆ ಸಾರ್ವತ್ರಿಕತೆಯನ್ನು ಹುಡುಕಿಕೊಂಡು ಹೋಗುವ ಪ್ರಸಂಗವೇ ಬರುವುದಿಲ್ಲ'' ಎನ್ನುತ್ತಾರೆ.

ಲಕ್ಷ್ಮೀಶ ತೋಳ್ಪಾಡಿಯವರು 'ಕಾಡು' ಮತ್ತು 'ಭುಜಂಗಯ್ಯನ ದಶಾವತಾರಗಳು' ಇವೆರಡೂ ಒಂದೇ ಕಾದಂಬರಿ ಎನ್ನುತ್ತಾರೆ. ಅಂದರೆ 'ಕಾಡು' ಕಾದಂಬರಿಯ ಮುಂದುವರಿದು 'ಭುಜಂಗಯ್ಯನ' ನಲ್ಲಿ ಮುಗಿಯುತ್ತದೆ. ನಾಟಕ ಬೆಂಕಿ, ಅತ್ಯಾಚಾರ ಮತ್ತು ಭುಜಂಗಯ್ಯನ ಹೋಟೆಲು ಇವು ಕಾಡಿನಲ್ಲಿವೆ -ಎಂಬುದು ಅವರ ಅಭಿಪ್ರಾಯ. ಇವರು ಈ ಕೃತಿಯ ಬಗ್ಗೆ '' 'ಕಾಡು' ಒಂದು ಧ್ಯಾನದಂತಿದೆ. ಗಾಢವಾದ ಧ್ಯಾನ. ಅಚ್ಚರಿ ಎಂದರೆ ಇದು ಇಂದ್ರಿಯ ಪ್ರಪಂಚದ, ಪ್ರವೃತಿ ಪ್ರಪಂಚದ ಧ್ಯಾನ. ಧ್ಯಾನ ಹೇಗೆಂದರೆ ಇಲ್ಲಿಯ ಮಂಡನೆ, ಆಯ್ಕೆ ಮತ್ತು ಆಯ್ಕೆಯ ಹಿಂದಿರುವ ಮೌಲ್ಯಗಳನ್ನು ದಾಟಿ ಮಾಡಿರುವ ಮಂಡನೆಯಾಗಿರುವುದರಿಂದ ಕಾರಂತರಲ್ಲಿ ನೀವದನ್ನು ಬಹುತೇಕ ಕಾಣಲಾರಿರಿ. ಅನಂತಮೂರ್ತಿ, ತೇಜಸ್ವಿ ಇಂಥ ಕತೆಗಳನ್ನು ಬರೆದಿರುವರಾದರೂ ಮತ್ತು ಈ ಲೇಖಕರದು ಕಲೆಗಾರಿಕೆಯಲ್ಲಿ ಮೇಲ್ತರಗತಿಯಾದರೂ ''ಕಾಡು'' ಅನನ್ಯವಾಗಿರುವುದು ತನ್ನ ನಿಬಿಡ ಅನುಭವದ ಮೌಲ್ಯನಿರಪೇಕ್ಷ ದಾಖಲೆಯಲ್ಲೆ. ಮನುಷ್ಯನ ಮೂಲ ಪ್ರವೃತಿಯ ಲೋಕಕ್ಕೆ ಧ್ಯಾನದ ಮೂಲಕ ಕೈ ಹಾಕಿದಾಗ ಮಾತ್ರ ಇಂಥ ಕೃತಿ ಸಾಧ್ಯ. ವೈಚಾರಿಕತೆಯ ಮೂಲಕ ಕೈ ಹಾಕಿದಾಗ ಅಲ್ಲ. ಆದರೆ ಯಾರೂ ಇಂಥ ಧ್ಯಾನವನ್ನು ಸರ್ವಾರ್ಥ ಪ್ರತಿಪತ್ತಿದಾಯಕವೆಂದು ತಿಳಿಯದಿರಲಿ. ಏಕೆಂದರೆ ಇಂಥದೇ ಸಜಾತೀಯ ಕೃತಿ 'ಮಲೆಗಳಲ್ಲಿ ಮದುಮಗಳು' ವಿನ ಹತ್ತಿರಕ್ಕೂ 'ಕಾಡು' ಸುಳಿಯಲು ಸಾಧ್ಯವಿಲ್ಲ. ಏಕೆಂದರೆ 'ಮಲೆಗಳಲ್ಲಿ

'ಮದುಮಗಳು' ಚರಿತ್ರೆಯ ಧ್ಯಾನವಾಗಿದೆ. ಆದುದರಿಂದಲೇ ಮೌಲ್ಯಗಳ ಜಿಜ್ಞಾಸೆಯೂ ಆಗಿದೆ. ಹಾಗಾಗಿ ನಾನು 'ಕಾಡ'ನ್ನು ನವ್ಯದ ಒಂದು ಪ್ರಯೋಗವನ್ನಾಗಿ, ಗಂಭೀರವಾದ ಪ್ರಯೋಗವನ್ನಾಗಿ ಮಾತ್ರ ತಿಳಿಯುತ್ತೇನೆ' ಎಂದಿದ್ದಾರೆ.

'ಕಾಡು' ಕಾದಂಬರಿಯಲ್ಲಿ ಬರುವ ಸಾವಿನ ಬಗ್ಗೆ ಡಾ. ಆರ್. ರಾಮಚಂದ್ರರು ಮುಖ್ಯ ಒಳನೋಟವನ್ನು ಪ್ರಸ್ತಾಪಿಸುತ್ತಾರೆ. ಕಿಟ್ಟಿಗೆ ಒಂದು 'ಅಂತರಂಗ' ಜಗತ್ತು, 'ಬಾಹ್ಯ' ಜಗತ್ತು ಎರಡಿವೆ. ಆ ಎರಡನ್ನು ಸಮೀಕರಿಸಲು ಅವನಿಗೆ ಸಾಧ್ಯವಾಗುವುದಿಲ್ಲ. ಅದಕ್ಕೆ ಅನೇಕ ತೊಡಕುಗಳಿವೆ. ರಾಮಚಂದ್ರರು 'ಕಾಡು'ವಿನಲ್ಲಿ 'ಸಾವು' 'ಆಳುಕೂಗಿನ ಹಕ್ಕಿ' ಮತ್ತು 'ಆಟ' ಈ ಮೂರು ಅಂಶಗಳ ಮೇಲೆ ಹುಡುಕಾಟ ನಡೆಸಿದ್ದಾರೆ. "ಬಾಲ್ಯದಿಂದ ಬಾಲಿಕಾವಸ್ಥೆಗೆ ಸಾಗುವ ಈ ಘಟ್ಟದಲ್ಲಿ ಕಿಟ್ಟಿ ಬಾಹ್ಯಜಗತ್ತಿನಿಂದ ಬೇರೆಯೆ ಆದ ಒಂದು ಅಂತರಂಗ ಪ್ರಪಂಚವನ್ನು ರೂಪಿಸಿಕೊಳ್ಳುತ್ತಾ ಆ ಎರಡು ಪ್ರಪಂಚಗಳ ನಡುವಿನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತಲೇ ಅವುಗಳ ನಡುವೆ ಸಂಪರ್ಕವನ್ನೇರ್ಪಡಿಸುವಂಥ ಸೂಕ್ಷ್ಮ ಪ್ರಕ್ರಿಯೆಯಲ್ಲಿ ತೊಡಗಿರುತ್ತಾನೆ. ಇದು ಸೂಚಿತವಾಗುವುದು ಕಾದಂಬರಿಯಲ್ಲಿರುವ ಕಿಟ್ಟಿಯ ಜಾಗೃತಾವಸ್ಥೆ, ನಿದ್ರಾವಸ್ಥೆಗಳ ನಡುವಿನ "ಸಂಧಿಕಾಲದ" ಉಲ್ಲೇಖಗಳಿಂದ. ಕಿಟ್ಟಿ ನಿದ್ದೆ ಹೋಗುವುದು, ಎಚ್ಚರಗೊಳ್ಳುವುದು - ಇವು ನಾಡಿ ಮಿಡಿಯುವಷ್ಟು ಕ್ರಮಬದ್ಧವಾಗಿ ಕಾದಂಬರಿಯುದ್ದಕ್ಕೂ ನಡೆಯುತ್ತವೆ... ತನ್ನ ಅಂತರಂಗ ಪ್ರಪಂಚವನ್ನು ರೂಪಿಸಲು ಬೇಕಾಗುವ ಸರಕನ್ನು ಕಿಟ್ಟಿ ಬಾಹ್ಯಪ್ರಪಂಚದಿಂದಲೇ ತೆಗೆದುಕೊಂಡು ಹೋಗಬೇಕು. ಕಾದಂಬರಿ ಶುರುವಾಗುವ ವೇಳೆಗೆ ಅವನ ಒಳ ಪ್ರಪಂಚದ ಏರ್ಪಾಡಿಗೆ ಬೇಕಾಗುವ ಕನಿಷ್ಟ ಸರಕನ್ನು ಅವನು ಪಡೆದಿರುತ್ತಾನೆ. ಅದು ಅವನ ಅಜ್ಜಿ ಅವನಿಗೆ ಹೇಳಿರುವ ರಾಕ್ಷಸ ಹಾಗೂ ರಾಜಕುಮಾರನ ಕತೆ. ಈಗ ಅವನು ಬಾಹ್ಯದೊಂದಿಗೆ ವ್ಯವಹರಿಸಿ ತನ್ನ ಅಂತರಂಗದ ವ್ಯಾಪ್ತಿಯನ್ನು ವಿಸ್ತರಿಸಬೇಕು. ಬಾಹ್ಯ ಜಗತ್ತಿನಿಂದ ಕಿಟ್ಟಿಯ ಅಂತರಂಗಕ್ಕೆ ಸಾಗುವ ಸರಕುಗಳಲ್ಲಿ ಅತಿ ಮುಖ್ಯವಾದದ್ದು ಸಾವಿನ ಚಿತ್ರ. ಅವನು ಪ್ರತಿ ಸರ್ತಿ ಮಲಗಲು ಹೋಗುವಾಗ ಸಾವಿನ ಚಿತ್ರ ಅವನನ್ನು ಜರ್ಜರಗೊಳಿಸುತ್ತದೆ - ಗೌರಿ ಕಡಸಿನ ಸಾವು, ಮೊಣ್ಣನ ಸಾವು, ಸಾವಿತ್ರಮ್ಮನ ಸಾವು, ನಾಗಿಯ ಅಜ್ಜಿಯ ಸಾವು, ಅತ್ತೆಯ ಸಾವು, ಸಂತೆಯಲ್ಲಿ "ಬೊಂಬಾಯಿ ಕಲಕತ್ತದವನು ತೋರಿಸಿದ ಯಮಧರ್ಮರಾಯನ ಪಟ್ಟಣ ಕೋಳಿಯ ಬಲಿ ಇತ್ಯಾದಿ. ಅಲ್ಲದೆ ಕಿಟ್ಟಿಯ ಮಟ್ಟಿಗೆ ಸಾವು ಮತ್ತು ರಕ್ತ ಇವುಗಳ ಸಮೀಕರಣವಾಗುತ್ತದೆ. ಕೋಳಿಬಲಿ-ರಕ್ತ; ಗೌರಿಕಡಸು-ರಕ್ತ; ಅಜ್ಜಿಯ ಸಾವು-ರಕ್ತ, ಕೀವು; ಮಾವ ಕಡಿಯುವ ಕುರಿಯ ಕತ್ತು-ರಕ್ತ, ಸಾವಿನ ಚಿತ್ರ ಕಿಟ್ಟಿಯ ಅಂತರಂಗಕ್ಕೆ ಅನುಭವವಾಗಿ ಇಳಿಯುವುದು ರಕ್ತದ ಬಣ್ಣದಿಂದ."

"ಆದರೆ ಕಿಟ್ಟಿಯನ್ನು ಆವರಿಸುವ ಕಾಡು ಮಾನವೀಯ ವ್ಯಕ್ತಿತ್ವಕ್ಕೆ ಎಡೆ ಮಾಡಿ

ಕೊಡದಂತಹದು. ಮಾನವೀಯ ವ್ಯಕ್ತಿತ್ವದ ಅಲ್ಲಗಳೆಯುವಿಕೆ - ಅಂದರೆ - 'ಅಂತರಂಗ' 'ಬಹಿರಂಗ'ಕ್ಕೆ ಹರಿಯಲಾಗದಿರುವಿಕೆ - ಇದೇ 'ಸಾವು'. ಈ ದೃಷ್ಟಿಯಿಂದಲೇ ಆಳುಕೂಗಿನ ಹಕ್ಕಿಯು ಕತೆ ಅರ್ಥಪೂರ್ಣವಾದದ್ದು. ಅರ್ಥಾತ್, ಮಾನವೀಯ ಸಂಬಂಧಗಳ, ಮಾನವೀಯ ವ್ಯಕ್ತಿತ್ವದ ಅನನ್ಯತೆಯತ್ತ ಲಕ್ಷ್ಯ ಹರಿಸಲೇಬಾರದು."

"ಒಳಗಿನ ಮತ್ತು ಹೊರಗಿನ ಪ್ರಪಂಚಗಳ ನಡುವೆ ಸಮತೋಲವೇರ್ಪಡಿಸಿ ಮಾನವ ವ್ಯಕ್ತಿತ್ವವನ್ನು ಸಂರಕ್ಷಿಸುವಂಥ ಗುಣ 'ಆಟ'ಕ್ಕಿದೆ. ಸ್ಕೂಲು ಕಂಡರೆ ಕಿಟ್ಟಿಗಾಗದು. ಕಾರಣ ಇಷ್ಟೇ: ದೊಡ್ಡವರೆಲ್ಲರೂ ಅದರ ಮೂಲಕ ಅವನನ್ನು ಬಾಹ್ಯಕ್ಕೆ ಎಳೆಯುತ್ತಿರುತ್ತಾರೆ. 'ಆಟ' ಹಾಗಲ್ಲ. ಮನುಷ್ಯನ ರಾಕ್ಷಸಗುಣ, ಹಿಂಸಾ ಪ್ರವೃತ್ತಿಯನ್ನು 'ಆಟ' ನಿಯಂತ್ರಿಸಬಲ್ಲದು; ಒಳಹೊರ ಪ್ರಪಂಚಗಳ ನಡುವೆ ಸಮಸ್ಥಿತಿ ಏರ್ಪಡಿಸಲು ಸಹಾಯಕಾರಿಯಾಗಬಲ್ಲದು. ಆದರೆ ಕಾಡುವಿನಲ್ಲಿ 'ಆಟ' ಕೂಡ ಆಟವಾಗದೆ ಹೋಗುತ್ತದೆ. ಉದಾಹರಣೆಗೆ ಓಕಳಿಯಾಟ, ಇಲ್ಲಿ ಜನರ ಬಡಿದಾಟ ಓಕಳಿ ಅಂಗಳಕ್ಕೆ ಸೀಮಿತವಾಗುವಂಥದ್ದಲ್ಲ. ಅಥವಾ ಕೊಪ್ಪಲಿನವರು ಆಡಬೇಕೆಂದಿದ್ದ ನಾಟಕ ನಡೆಯುವುದೇ ಇಲ್ಲ. ರುದ್ರ ರಾವಳನ 'ಪಾರ್ಟು' ಮಾಡಬೇಕಿಲ್ಲ. ಚನ್ನೂರನನ್ನು ಜಜ್ಜುವಾಗ ಅವನು ನಿಜವಾದ ರಾಕ್ಷಸನೇ ಆಗುತ್ತಾನೆ. ಕಿಟ್ಟಿ ಆಡುವ ಮರಕೋತಿ ಆಟ ಕೂಡ 'ನ್ಯಾಯ'ವಾದ ಆಟವಾಗುಳಿಯದು. ಮರಕೋತಿ ಆಡುವವರಲ್ಲಿ ಕಿಟ್ಟಿ ಎಲ್ಲರಿಗಿಂತ ಚಿಕ್ಕವನು. "ಶಿವ ಬೇಕೆಂದೇ ತನ್ನನ್ನು ಹಿಡಿಯಲು ಬಂದಾಗ ಕಿಟ್ಟಿ ಇನ್ನೂ ಮೇಲೆ ತವೆಯುತ್ತ ರಾಜ ಮತ್ತು ಅವರ ಕಡೆ ನೋಡಿದ. ಅವರು ಕೆಳಗೆ ಧುಮುಕಿ ಕೋಲನ್ನು ಎತ್ತಿ ದೂರ ಎಸೆಯದೆ ಹಾಗೆ ಕೂತಿದ್ದು ಕಂಡು ಕಿಟ್ಟಿಗೆ ತುಂಬಾ ಕೋಪ ಬಂತು. ಶಿವ ಇನ್ನೇನು ಹಿಡಿದೇ ಬಿಟ್ಟ ಎನ್ನುವಾಗ ಕಿಟ್ಟಿ ತುಂಬ ಗಾಬರಿಯಾಗಿ ಕವಲೊಳಗಿಂದ ಕಾಲು ತೆಗೆದು ಬಳಕುವ ಕೊಂಬೆಗೆ ಜಿಗಿಯುತ್ತಿದ್ದಂತೆ ಮೇಲೆ ಹಿಡಿದಿದ್ದ ಸಣ್ಣಕೊಂಬೆ ಲಟ್ಟನೆ ಮುರಿದು ಕೆಳಗೆ ಬಿದ್ದ." ಕಮಲತ್ತೆ, ಮಾವ, ಕರಿಯ, ಲೋಂಪಿ ಮುಂತಾದವರಂತೆ ಆಟದ ಹುಡುಗರೂ ಕಿಟ್ಟಿ ಚಿಕ್ಕವನೆಂದು ತೋರಿಸುತ್ತಾರೆ. ಆಟದಲ್ಲೂ ಅವನು ಬಾಹ್ಯ ಜಗತ್ತಿನೊಂದಿಗೆ ಸಮರ್ಪಕವಾಗಿ ಸಂಧಾನ ನಡೆಸದಂತೆ ಮಾಡುತ್ತಾರೆ. ಇದೇ ರೀತಿ ಆಟಕ್ಕೆ ಪಟಾಕಿಯಾಗಿ ಬರುವ ಮದ್ದು ಗೌರಿಯ ಪ್ರಾಣವನ್ನು ತೆಗೆಯುವ ಸಿಡಿಮದ್ದೂ ಆಗುತ್ತದೆ."

'ಪರಸಂಗದ ಗೆಂಡೆತಿಮ್ಮ' ಕಾದಂಬರಿಯ ಬಗ್ಗೆ ಭಿನ್ನ ರೀತಿಯಲ್ಲಿ ವಿಮರ್ಶಕರು ನೋಡಿರುವುದು ಕಮ್ಮಿ. ಆಧುನಿಕತೆ ಹಳ್ಳಿಯಲ್ಲಿ ಮಾಡಿದ ಪರಿಣಾಮವನ್ನೇ ಕುರಿತ ವಿಮರ್ಶೆಗಳಿವೆ. ಮಾಧವ ಕುಲಕರ್ಣಿಯವರು ಭಿನ್ನವಾದ ನೆಲೆಯಲ್ಲಿ ನೋಡಿದ್ದಾರೆ. "ಪರಸಂಗದ ಗೆಂಡೆತಿಮ್ಮ" 'ದಂತಕತೆ'ಯಾಗುವ ಬಗೆಯನ್ನು (process) ಅಭ್ಯಸಿಸುವ ಒಂದು ವಿಶಿಷ್ಟವಾದ ಕಾದಂಬರಿ. ಒಂದು ದಂತಕತೆಗೆ ಬೇಕಾದ ಸಾಹಿತ್ಯಕ ಸರಕುಗಳೆಲ್ಲ ಇಲ್ಲಿವೆ. ಆದರೆ ಲೇಖಕ ಈ ಕಾದಂಬರಿಯನ್ನೂ ಒಂದು ದಂತಕತೆಯನ್ನು ಹೇಳುವ

ರೀತಿಯಲ್ಲಿಯೇ ಬರೆದು ಸಾರ್ವಕಾಲಿಕತೆಯತ್ತ ನೆಗೆಯಲು ಮಾಡಿದ ಪ್ರಯತ್ನ ಅದ್ಭುತವಾದದ್ದು. 'ಗೆಂಡೆತಿಮ್ಮ' ಹಾಗೂ 'ಮರಂಕಿ'ಯರ ಸುತ್ತ ಬೆಳೆಯುವ ಕತೆ ಸಾಲುಂಡಿ, ಮೈಸೂರು, ಹಾಗೂ ಗೌವಳ್ಳಿಗಳನ್ನು ಪಾತ್ರವಾಗಿಸಿಕೊಳ್ಳುತ್ತದೆ. ಸಾಲುಂಡಿಯ ಗೆಂಡೆತಿಮ್ಮ, ನವನಾಗರಿಕತೆಯ ಮೈಸೂರಿನಿಂದ ಗೌವಳ್ಳಿಗೆ ವ್ಯಾಪಾರಕ್ಕೆ ಹೋಗುತ್ತಾನೆ. ಮದುವೆಯಾದ ಮೇಲೆ, ಅವನ ಹೆಂಡತಿ ಮರಂಕಿ ಸಾಲುಂಡಿಯಲ್ಲಿ ಈ ನಾಗರಿಕತೆಯನ್ನು ಬಿತ್ತಿದರೆ, ಅವಳಿಂದ ಪ್ರೋತ್ಸಾಹಿತನಾದ ಗೆಂಡೆತಿಮ್ಮ ಗೌವಳ್ಳಿಯಲ್ಲಿ ಈ ನಾಗರಿಕತೆಯನ್ನು ಬಿತ್ತುತ್ತಾನೆ. ಇದರ ಫಲವಾಗಿ ಇಬ್ಬರೂ ಸಾವನ್ನಪ್ಪುತ್ತಾರೆ. ಲೇಖಕರ ಆಶಯವೂ ತೋರಿಕೆಗೆ ಇಷ್ಟೇ ಎಂದು ಮೇಲುನೋಟಕ್ಕೆ ಕಾಣುತ್ತದೆ. ಆದರೆ, ಕಾದಂಬರಿಯನ್ನು ತೀವ್ರವಾದ ಅಭ್ಯಾಸಕ್ಕೆ ಗುರಿಪಡಿಸಿದರೆ, ಈ ದಂತಕತೆಯಂತೆ ಕಾಣುವ ಕಾದಂಬರಿ, ಈ ವಸ್ತುವಿನಿಂದ ಸಾಕಷ್ಟು ದೂರ ಹೋಗುತ್ತದೆಂದು ಸ್ಪಷ್ಟವಾಗುತ್ತದೆ. ವಿಚಿತ್ರವೆಂದರೆ, ಗೌವಳ್ಳಿ ಗೌಡರ ಮಗ ಮುದ್ದ ಕುಪ್ಪೆಯ ಹೊಗೆಯಿಂದ ಕಪ್ಪಾದ ಸ್ಥಳದಲ್ಲಿ ಮರಂಕಿ ಹಾಗೂ ಗೆಂಡೆತಿಮ್ಮನ ಹೆಸರುಗಳನ್ನು ಕೆತ್ತಿದಾಗ ಆ ಹೆಸರುಗಳು ಮರುಕ್ಷಣ ಇಲ್ಲವಾಗುತ್ತದೆ. ಇದೊಂದು ಪ್ರತಿಮೆ ಎಂದು ಕಾದಂಬರಿಯಲ್ಲಿ ಬಳಕೆಯಾಗಿದ್ದರೂ, ಎಂಥ ಪ್ರಾಥಮಿಕ ಪ್ರತಿಮೆ! ಆದರೆ ದಂತಕತೆಗೆ ಎಷ್ಟು ಔಚಿತ್ಯ ಪೂರ್ಣವಾದ ಪ್ರತಿಮೆ! ಇಂಥ ಪ್ರತಿಮೆಗಳನ್ನು ಅರ್ಥೈಸುತ್ತ ಈ ಕಾದಂಬರಿಯ ಮೂಲಾರ್ಥಕ್ಕೆ ಹೊರಟರೆ ನಾನು ಈಗ ಮೇಲೆ ವಿವರಿಸಿರುವ ಕಾದಂಬರಿಯ ವಸ್ತುವನ್ನು ಬಿಟ್ಟು ಬೇರೆ ಇನ್ನೇನೂ ಸಿಗುವ ಸಾಧ್ಯತೆಯೇ ಇಲ್ಲ. ಈ ದೃಷ್ಟಿಯಿಂದ ಆಳವಾದ ಅರ್ಥವನ್ನು ಹೊಂದಿಯೂ ತೀರಾ ಸಾದಾ ಆಗಿ ಕಾಣುವ ಈ ಕಾದಂಬರಿ ನಮ್ಮ ಸಾಹಿತ್ಯಕ್ಕೆ ಹೊಸದು ಹಾಗೂ ಗಂಭೀರ ಸಾಹಿತ್ಯ ಮತ್ತು ಸಾಮಾನ್ಯ ಓದುಗನ ನಡುವಿನ ಕಂದರವನ್ನು ಸಂಕುಚಿತಗೊಳಿಸುವ ವಿಶಿಷ್ಟ ಪ್ರಯತ್ನ''.

ಮನುಷ್ಯನ ಮಾನವೀಯತೆಯನ್ನು ಅವನ ಸಂಬಂಧಗಳ ಮೂಲಕ ಕಾಣಿಸಲು ಪ್ರಯತ್ನಿಸುವ ಆಲನಹಳ್ಳಿಯವರ ಮುಖ್ಯಗುಣದ ಬಗ್ಗೆ ಜಿ.ಪಿ. ಬಸವರಾಜ ಹೀಗೆ ಬರೆಯುತ್ತಾರೆ: ಮನುಷ್ಯ ಸಂಬಂಧಗಳಿಗೇ ಹೆಚ್ಚು ಒತ್ತುಕೊಡುವ ಆಲನಹಳ್ಳಿ ಸಮಾಜವನ್ನು ಗ್ರಹಿಸುವುದು ಈ ಸಂಬಂಧಗಳ ಮೂಲಕವೇ. ಸಮಾಜದ ಪರಿವರ್ತನೆಗಳನ್ನು, ಏರು-ಇಳಿವುಗಳನ್ನು, ಪಲ್ಲಟಗಳನ್ನು ದಾಖಲಿಸುವುದೂ ಈ ವ್ಯಕ್ತಿ ಸಂಬಂಧಗಳ ಪರಿವರ್ತನೆಯಲ್ಲಿಯೇ. ಕಾದಂಬರಿಕಾರರು ಗೆಂಡೆತಿಮ್ಮನ ಕುಟುಂಬ ಕಥೆಯನ್ನು ಹೇಳುತ್ತಿರುವಾಗಲೇ, ಅದು ಗೆಂಡೆತಿಮ್ಮ ಬದುಕಿದ ಊರಿನ, ಅಂಥ ಹಲವಾರು ಊರುಗಳ ಕಥೆಯೂ ಆಗುವುದು. ಒಂದು ಕಾಲ ಘಟ್ಟದಲ್ಲಿ ಈ ಊರುಗಳ ಬದುಕು ಕಂಡುಕೊಳ್ಳುವ ಅವಸ್ಥಾಂತರದ ದಾಖಲೆಯೂ ಆಗುವುದು. ಹೀಗೆಯೇ ಒಂದು ಸಮರ್ಥ ಕಲಾಕೃತಿ ಮಾಡಬೇಕಾದ ಕೆಲಸ ಇದೆ ಅಲ್ಲವೆ?''

"ಭುಜಂಗಯ್ಯನ ದಶಾವತಾರಗಳು" ಕಾದಂಬರಿಯಲ್ಲಿ ಆಲನಹಳ್ಳಿಯವರ ಎಲ್ಲ ಕೃತಿಗಳಲ್ಲಿ ಬರುವ ಮತ್ತು ಅವರು ಉಳಿಸಿಕೊಳ್ಳುತ್ತಲೇ ಬಂದಿರುವ ಕೆಲವು ಅಬ್‌ಸೆಷನ್‌ಗಳಿಂದ ಬಿಡುಗಡೆ ಹೊಂದುವುದಿಲ್ಲ ಎಂಬುದನ್ನು ಮತ್ತು 'ಭುಜಂಗಯ್ಯ...' ನನ್ನ ವ್ಯಕ್ತಿನಿಷ್ಠನನ್ನಾಗಿ ನೋಡಿರುವ ಬಗ್ಗೆ ಜೆ.ಪಿ. ಬಸವರಾಜ ಹೀಗೆ ಹೇಳುತ್ತಾರೆ: "ಆಲನಹಳ್ಳಿ ತಮ್ಮ ಕೆಲವು ಅಬ್‌ಸೆಷನ್‌ಗಳಿಂದ ಪಾರಾಗಲಾರರು ಎಂಬುದಕ್ಕೆ ಈ ಕಾದಂಬರಿಯ ರಾಜು-ಸುಶೀಲರ ನಡುವಿನ ಸಂಬಂಧ ಉದಾಹರಣೆಯಾಗುತ್ತದೆ. ಕಾಮ ನಿಧಾನಕ್ಕೆ ಅರಳುವ ಪರಿಯನ್ನು (ರಾಜುವಿನ ಬಾಲ್ಯದ ಮೂಲಕ) ಮತ್ತು ಸುಪ್ತ ಕಾಮ ಜಾಗೃತಗೊಳ್ಳುವ ಕ್ರಿಯೆಯನ್ನು (ಸುಶೀಲ ರಾಜುವಿನ ಸಾಮೀಪ್ಯ ಬಯಸುವ ಮೂಲಕ) ಆಲನಹಳ್ಳಿಯವರು ಈ ಸಂಬಂಧದಲ್ಲಿ ಚೆನ್ನಾಗಿ ಚಿತ್ರಿಸುತ್ತಾರಾದರೂ ಇದು ಆಲನಹಳ್ಳಿಯವರನ್ನು ಅಬ್‌ಸೆಷನ್ ಆಗಿ ಕಾಡುವ ಕಾರಣ, ಅನಗತ್ಯವಾಗಿ ಈ ಸಂಬಂಧ ಮೇಲಿಂದ ಮೇಲೆ ತಲೆ ಹಾಕಿ ಒಟ್ಟಾರೆಯ ಪರಿಣಾಮಕ್ಕೆ ಧಕ್ಕೆ ತರುತ್ತದೆ.

ಆಲನಹಳ್ಳಿಯವರ ಕಾದಂಬರಿ ಮುಖ್ಯವಾಗಿ ಸೋಲುವುದು, ಕಾದಂಬರಿಕಾರ ವ್ಯಕ್ತಿನಿಷ್ಠನಾಗುವ ಕಾರಣದಿಂದ. ಈ ಕಾದಂಬರಿಯ ಉದ್ದಕ್ಕೂ ವ್ಯಕ್ತಿನಿಷ್ಠತೆಗೆ ಉದಾಹರಣೆಗಳು ಸಿಗುತ್ತವೆ. ಸ್ವಲ್ಪ ಮಟ್ಟಿಗಾದರೂ ಆಲನಹಳ್ಳಿ ನಿಷ್ಠರಾಗಿದ್ದಿದ್ದರೆ ಕಾದಂಬರಿ ಇಷ್ಟೊಂದು ಸೋಲುತ್ತಿರಲಿಲ್ಲ. ಭುಜಂಗಯ್ಯನಿಗೆ ನಿಷ್ಠರಾದ ಆಲನಹಳ್ಳಿ ಎಲ್ಲ ಸಂದರ್ಭದಲ್ಲೂ ಅವನ ವ್ಯಕ್ತಿತ್ವವನ್ನು ಪ್ರೊಜೆಕ್ಟ್ ಮಾಡುವುದಕ್ಕಾಗಿಯೇ ಎಲ್ಲವನ್ನೂ ಸೃಷ್ಟಿಸುತ್ತಾರೇನೋ ಎಂದನಿಸುತ್ತದೆ. ಇಲ್ಲಿನ ಕೋಮು ಘರ್ಷಣೆ, ಇಡೀ ಹಳ್ಳಿಯ ಬದುಕು, ಅಲ್ಲಿನ ರಾಜಕೀಯ, ತೊಡಕು, ಜಗಳ, ಇತ್ಯಾದಿ ಎಲ್ಲವೂ ಕೇವಲ ಪರಿಣಾಮದ ಮೂಲಕ ನಮಗೆ ಅವುಗಳ ಇರುವನ್ನು ಸಾರುತ್ತವೆಯೇ ಹೊರತು ಎಲ್ಲಿಯೂ ಮುಖ ತೋರುವುದಿಲ್ಲ. ಅಂದರೆ ಆಲನಹಳ್ಳಿ ಹಳ್ಳಿಯ ಬದುಕಿನ ಸೂಕ್ಷ್ಮ ಪದರುಗಳನ್ನು ಚಿತ್ರಿಸುವಲ್ಲಿ, ಸ್ಪಂದನ ಕೇಳಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಹೀಗಾಗಿ ಇಲ್ಲಿನ ಕೋಮು ಘರ್ಷಣೆ ಎಂದರೆ ಕೇವಲ ಎರಡು ಗುಂಪುಗಳ ಹೊಡೆದಾಟವಾಗಿ ಮಾತ್ರ ಕಾಣಿಸುತ್ತದೆ. ಹಳ್ಳಿಯ ರಾಜಕೀಯ ಎಂದರೆ ಕೇವಲ ವ್ಯಕ್ತಿ-ವ್ಯಕ್ತಿಗಳ ವೈಷಮ್ಯವಾಗಿ ತೋರುತ್ತದೆ. ಇಡೀ ಸಂಕೀರ್ಣತೆಯನ್ನು ಹಿಡಿದಿಡುವ ಗೋಜಿಗೇ ಆಲನಹಳ್ಳಿ ಹೋಗುವುದಿಲ್ಲ. ಅವರಿಗೆ ಭುಜಂಗಯ್ಯ ಮಾತ್ರ ಮುಖ್ಯನಾಗುವ ಕಾರಣದಿಂದ. ಆಲನಹಳ್ಳಿ ವಸ್ತುನಿಷ್ಠ ಬರಹಗಾರರಾಗಿದ್ದರೆ ಕಾದಂಬರಿ ಭುಜಂಗಯ್ಯನ ಏಳು-ಬೀಳುಗಳನ್ನು ಚಿತ್ರಿಸಿದಾಗೆಲ್ಲ ಅದು ಇಡೀ ಒಂದು ಹಳ್ಳಿಯ ಉನ್ನತಿ - ಅವನತಿಯ ಚಿತ್ರಣವಾಗಬೇಕಿತ್ತು."

ಭುಜಂಗಯ್ಯನಲ್ಲಿರುವ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಅವನಲ್ಲಿರುವ ಅಸ್ಪಷ್ಟತೆಯೇ

ಕಾರಣವೆಂದು ಕೆ. ಸತ್ಯನಾರಾಯಣ ಅಭಿಪ್ರಾಯ ಪಡುತ್ತಾರೆ. ಅವನು ಬದಲಾವಣೆಗೆ ತೆರೆದುಕೊಳ್ಳುವ ಮನಸ್ಸಿಗೆ ಕಾರಣವೇ ಈ ಅಸ್ವಸ್ಥತೆ ಎಂಬುದನ್ನು ಗುರುತಿಸಿದ್ದಾರೆ. ಮೊದಲನೆಯ ನೆಲೆ ಕಾದಂಬರಿಯ ಅಸ್ವಸ್ಥತೆ ಮತ್ತು ದೈನಿಕವನ್ನು ಕ್ರಿಯಾಶೀಲವಾಗಿಸಿಕೊಳ್ಳುವ. ಹೊಸದು ಮಾಡಿಕೊಳ್ಳುವ ಸ್ತರಕ್ಕೆ ಸಂಬಂಧಪಟ್ಟಿದ್ದು. ಇದು ಮುಖ್ಯವಾಗಿ ವ್ಯಕ್ತವಾಗುವುದು ಭುಜಂಗಯ್ಯನ ಮೂಲಕ ಮತ್ತು ಆತನ ಚಟುವಟಿಕೆಯಿಂದ ಚಡಪಡಿಸುವ. ಅಸ್ವಸ್ಥಗೊಳ್ಳುವ ಹಾಗೆಯೇ ಕ್ರಿಯಾಶೀಲವೂ ಆಗುವ ಮಾದಳ್ಳಿಯ ಮೂಲಕ ಕಾದಂಬರಿ ಪ್ರಾರಂಭವಾಗುವುದೂ ಭುಜಂಗಯ್ಯನ ಅಸ್ವಸ್ಥತೆ ಮತ್ತು ಹೊಸದರ ಹಂಬಲದಿಂದ. ಈ ಹಂಬಲ ಅಸ್ವಸ್ಥತೆ ಅವನ ವ್ಯಕ್ತಿತ್ವದೊಳಗೆ ಇರುವಂತದ್ದು ಮತ್ತು ಸದಾ ಹೊಸ ಅವಕಾಶಗಳನ್ನು ಹುಡುಕುತ್ತಾ ಇರುವಂತದ್ದು....

ಈ ಅಸ್ವಸ್ಥತೆ ಮತ್ತು ಹೊಸದರ ಹಂಬಲ ಭುಜಂಗಯ್ಯನ ವ್ಯಕ್ತಿತ್ವಕ್ಕೆ. ಮಾದಳ್ಳಿಗೆ ತರುವಂತದ್ದೆಲ್ಲ ಹೊಸದೇ ಆಗಿದೆ. ಪತ್ರಿಕೆ. ಹೋಟಲು. ಸುಶೀಲ. ವ್ಯಾಪಾರ. ಬಾವಿ. ಕಂಟ್ರಾಕ್ಟರ್‌ಗಿರಿ. ಕಾಮಗಾರಿ ಇತ್ಯಾದಿ. ಇವೆಲ್ಲವುಗಳ ಮೂಲಕ ಭುಜಂಗಯ್ಯನನ್ನು ಕ್ರಿಯಾಶೀಲವಾಗಿಸುವುದರ ಜೊತೆಗೆ ಮಾದಳ್ಳಿ ಅವೆಲ್ಲವನ್ನೂ ಒಪ್ಪಲು. ನಿರಾಕರಿಸಲು ಪ್ರತಿಕ್ರಿಯಿಸಲು ಸದಾ ಆತಂಕದಲ್ಲಿರುತ್ತದೆ. ಈ ಆತಂಕವೆಂದರೆ ಜೀವನನಾಡಿಯ ಮಿಡಿತದ ಸ್ವರೂಪದ್ದು. ಈ ಆತಂಕ. ಈ ಮಿಡಿತದಿಂದಾಗಿಯೇ ಘಟನೆಗಳು ಅದನ್ನು ಆಹ್ವಾನಿಸುವ ಮನೋಭೂಮಿಕೆ ಮತ್ತು ಅದಕ್ಕೆ ಪ್ರತಿಕ್ರಿಯಿಸುವ ಮನೋಭೂಮಿಕೆ ಒಂದರ ಹಿಂದೆ ಒಂದು ಓಘವಾಗಿ ಸೇರಿಕೊಂಡು ಕತೆ ಬೆಳೆಯುತ್ತದೆ. ಕಾದಂಬರಿಗೆ ಚಲನೆ ಬರುತ್ತದೆ. ಈ ಚಲನೆ ಮತ್ತು ಈ ಚಲನೆಗೆ ದೈನಿಕದ ಪ್ರತಿಹೆಜ್ಜೆಯನ್ನೂ ಬದಲಾಯಿಸುವ. ವಿಸ್ತರಿಸುವ ಶಕ್ತಿ ಇರುವುದರಿಂದಲೋ ಏನೋ ಈ ಕಾದಂಬರಿಯಲ್ಲಿ Gestures ಮುಖ್ಯವಾದಷ್ಟು. ಇತರ ಕನ್ನಡ ಕಾದಂಬರಿಗಳಲ್ಲಿ ಆಗುವುದಿಲ್ಲ. ಕೂರುವುದು. ನಿಲ್ಲುವುದು. ನೋಡುವುದು. ಉಣ್ಣುವುದು. ಮಲಗುವುದು. ಉಳುವುದು. ಘಸಲಾಗುವುದು - ಇವೆಲ್ಲ ಇಲ್ಲಿಯ ನಿತ್ಯ ಕ್ರಿಯೆಗಳಾಗಿವೆ. ಇದಕ್ಕಿಂತ ಮುಖ್ಯವಾಗಿ ಇದನ್ನು ಸಾವಧಾನವಾಗಿ ಗಮನಿಸುವುದನ್ನು ಕಾದಂಬರಿ ಒಂದು ಮೌಲ್ಯವಾಗಿ ಒಪ್ಪಿಕೊಂಡಿದೆಯೆಂಬ ಸೂಚನೆ ಅನೇಕ ಕಡೆ ಸಿಕ್ಕುತ್ತದೆ....

ಈ ಅಸ್ವಸ್ಥತೆ ಮತ್ತು ಹೊಸ ಬಯಕೆಯ ಮೂಲಕ ಮಂಡನೆಯಾಗುವುದು. ನಮ್ಮ ಕಾಲದ ಮುಖ್ಯ ದ್ವಂದ್ವ-ಜೀವನದಲ್ಲಿ ಅರ್ಥ ಮತ್ತು ಯಶಸ್ಸು ಎರಡನ್ನೂ ಏಕಕಾಲದಲ್ಲಿ ಬಯಸುವ-ಆಧುನಿಕ ಮನುಷ್ಯನ ದ್ವಂದ್ವ. ಎಷ್ಟೇ ಸಾಧಿಸಿದರೂ ಎಷ್ಟೋ ಪ್ರಯೋಗ ಮಾಡಿದರೂ ಭುಜಂಗಯ್ಯನನ್ನು ಕೊನೆಗೂ ತಾನೂ ಮಾಡಿದೆಲ್ಲವರ ಅರ್ಥದ ಪ್ರಶ್ನೆ ಮಾತ್ರ ಬಾಧಿಸುತ್ತಲೇ ಇರುತ್ತದೆ. ಈ ಬಾಧೆಯಿಂದಲೇ ಅವನ

ವ್ಯಕ್ತಿತ್ವಕ್ಕೊಂದು ಕಾಂತಿಯೂ ಅರ್ಥವೂ ಬರುತ್ತದೆ. ಯಶಸ್ಸು ಎಲ್ಲ ಉತ್ತಮ ಸಾಹಿತ್ಯ ಕೃತಿಗಳಲ್ಲಾಗುವಂತೆ, ಆಲನಹಳ್ಳಿ ದ್ವಂದ್ವಕ್ಕೆ ಉತ್ತರ ನೀಡುವುದಿಲ್ಲ. ಅದಕ್ಕೆ ಪ್ರಯತ್ನಿಸುವುದಿಲ್ಲ. ಅರ್ಥ ಮತ್ತು ಯಶಸ್ಸಿನ ನಡುವಿನ ದ್ವಂದ್ವ ನಮ್ಮ ಕಾಲದ ಮನುಷ್ಯನ ಅದೃಷ್ಟ ಮತ್ತು ಹೋರಾಟಗಳ ಮೇಲೆ ಮಾಡುವ ಪರಿಣಾಮವನ್ನೂ ನಿರ್ಮಲವಾಗಿ ಮಂಡಿಸುತ್ತಾರೆ. ಹಾಗೆಂದೇ ಎಷ್ಟೇ ತನ್ಮಯತೆಯಿದ್ದರೂ, ನಿಲುವಿಲ್ಲದ ಕೃತಿ ಇದು."

ಎಚ್.ಎಸ್. ರಾಘವೇಂದ್ರರಾವ್ ಅವರು ಭುಜಂಗಯ್ಯನ ಪಾತ್ರ ದೃಷ್ಟಿಯ ಬಗ್ಗೆ ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ, ಕನ್ನಡ ಕಾದಂಬರಿ ಪ್ರಪಂಚದಲ್ಲಿ ಸಿಗುವ ಪಾತ್ರಗಳಿಗಿಂತ ಭುಜಂಗಯ್ಯನ ಪಾತ್ರ ಭಿನ್ನವಾದದ್ದು. ಈ ಭಿನ್ನ ಪಾತ್ರವು "ಕಾದಂಬರಿಯ ಸ್ವರೂಪದ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರಿದೆ. ನಮಗೆ ಪರಿಚಿತವಾಗಿರುವ ಕಾದಂಬರೀ ಬಂಧದಲ್ಲಿ ದೋಷಗಳೆಂದು ತೋರುವ ಕೆಲವು ಲಕ್ಷಣಗಳು ಬೇರೆ ದೃಷ್ಟಿಕೋನದಿಂದ ನೋಡಿದಾಗ ಸಮರ್ಪಕವೆಂದು ಸಾಬೀತಾಗುತ್ತವೆ" ಎಂದು ಹೇಳುತ್ತ ಅವರು ಭುಜಂಗಯ್ಯನ ಪಾತ್ರವನ್ನು ಇತರ ಪಾತ್ರಗಳು ಪೋಷಿಸುತ್ತ ಬರುತ್ತವೆ. ಊರ ಜನರ ಪ್ರತಿಕ್ರಿಯೆಗಳು, ಸುಶೀಲೆ ಮನೋಭಾವ ಮತ್ತು ಅದಕ್ಕಿಂತ ಹೆಚ್ಚಾಗಿ ರಾಜನ ಗ್ರಹಿಕೆಗಳಲ್ಲಿ ಭುಜಂಗಯ್ಯನ ವ್ಯಕ್ತಿತ್ವ ಬೆಳೆಯುತ್ತ ಹೋಗುತ್ತದೆ ಎಂದು, ಅದಕ್ಕೆ ಹಲವಾರು ರೀತಿಯಲ್ಲಿ ಕಾದಂಬರಿಯ ಸಮರ್ಥನೆಯನ್ನು ಕೊಡುತ್ತಾರೆ. ಮುಂದುವರಿದು "ಕಥನ ಕೃತಿಯಲ್ಲಿ ಪಾತ್ರದ ರಚನೆಯು ಎರಡು ರೀತಿಯಲ್ಲಿ ನಡೆಯುತ್ತದೆ. 'ನಿರ್ದಿಷ್ಟಗುಣ' ಗಳನ್ನು ಈಗಾಗಲೇ ತನ್ನ ಸ್ವಭಾವದ 'ಘಟಕ'ಗಳಾಗಿ ಹೊಂದಿರುವ 'ಸಿದ್ಧ ಪಾತ್ರ' ವೊಂದು, ತಾನು ಎದುರಿಸುವ 'ಸನ್ನಿವೇಶ'ಗಳಿಗೆ 'ಪೂರ್ವನಿರ್ಧಾರಿತ'ವಾದ ರೀತಿಯಲ್ಲಿ ಪ್ರತಿಕ್ರಿಯಿಸುವ ಬಗೆ ಮತ್ತೊಂದು. ಇಂಥಲ್ಲಿ ಪಾತ್ರಗಳು ವರ್ತನ ಮಾದರಿಗಳ ಒತ್ತಡದೊಳಗೆ ಕೆಲಸ ಮಾಡುತ್ತಾರೆ. ಭುಜಂಗಯ್ಯ ಎರಡನೆಯ ಬಗೆಯ ಪಾತ್ರ. ಅವನು ಕ್ರಿಯೆಯಲ್ಲಿ ಸಂಭವಿಸುತ್ತಾ ಹೋಗುವ ಪಾತ್ರವೆ ವಿನಾ, ಘಟನೆಗಳಿಗೆ ಪ್ರತಿಕ್ರಿಯಿಸುತ್ತಾ ಹೋಗುವ 'ಗುಣಸಮಗ್ರ'ವಲ್ಲ. ಸರಳವಾಗಿ ಹೇಳುವುದಾದರೆ ಭುಜಂಗಯ್ಯನೆಂದರೆ ಅವನ ಬದುಕಿನ ಬೇರೆ ಬೇರೆ ಸಂದರ್ಭಗಳಲ್ಲಿ ತೊಡಗಿಕೊಳ್ಳುವ ಕ್ರಿಯೆಗಳ ಮೊತ್ತವೇ ಹೊರತು ಬೇರೇನೂ ಅಲ್ಲ. ಪ್ರತಿಯೊಂದು ಹೊಸ ಸನ್ನಿವೇಶವೂ ಅವನ ಪಾತ್ರಕ್ಕೆ ಒಂದು ಮಗ್ಗುಲನ್ನು ಜೋಡಿಸುತ್ತದೆ."

ಈ ಕಾದಂಬರಿ 'ಮೌಖಿಕ ಸಂಪ್ರದಾಯ'ವನ್ನು, 'ಹರಟೆ'ಯ ಸಂಪ್ರದಾಯವನ್ನೂ ಹೊಂದಿದೆ ಎಂದು ಕಿಕ್ಕೇರಿ ನಾರಾಯಣರು ಹೇಳುತ್ತಾರೆ: ಭಾಷೆಯ ಬಳಕೆಯಲ್ಲಿ ಬಿಗುವೂ ಬಂಧವೂ, ಸಾಂಕೇತಿಕತೆಯೂ ಶಿಲ್ಪವೂ ಇರುವುದು ನಮ್ಮ ಕಾದಂಬರಿಯ

ಪ್ರಮುಖ ಗುಣಗಳು. ಇವುಗಳನ್ನು ಗಮನದಲ್ಲಿಟ್ಟುಕೊಂಡು ಓದಿದರೆ "ಭುಜಂಗಯ್ಯ ವಿರುದ್ಧ ದಿಕ್ಕಿನಲ್ಲಿರುವುದು ಕಂಡುಬರುತ್ತದೆ. ಇದಕ್ಕೆ ಬದಲಾಗಿ ಮೌಖಿಕ ಸಂಪ್ರದಾಯದ ಕೆಲವು ಮುಖ್ಯ ಲಕ್ಷಣಗಳು ಕಂಡು ಬರುತ್ತದೆ" ಎಂದು ಅವರು ಕಾದಂಬರಿಯಿಂದ ಹಲವು ಸನ್ನಿವೇಶಗಳಲ್ಲಿ ನಡೆಯುವ ಇಂಥ ಅಂಶಗಳನ್ನು ಎತ್ತಿ ತೋರಿಸಿದ್ದಾರೆ. "ಈ ಕಾದಂಬರಿಯ ಪ್ರಮುಖ ಪಾತ್ರ ಊರಿನ ಉಸಾಬರಿಯನ್ನೆಲ್ಲ ಭೂಮಿಯನ್ನು ಹೊತ್ತುಕೊಂಡ ಆದಿಶೇಷನಂತೆ. ತನ್ನ ಮೇಲೆ ಹೊತ್ತುಕೊಳ್ಳುವ, ಯಾವಾಗಲೂ ಕ್ರಿಯಾತ್ಮಕವಾಗೇ ಇರುವ, ಅದಕ್ಕಾಗಿ ಅನೇಕ ರೀತಿಯ "ಕಾಯಕ"ಗಳನ್ನು ಕೈಗೊಳ್ಳುವ ಭುಜಂಗಯ್ಯ ಕಾದಂಬರಿಯಲ್ಲಿ ಚಿತ್ರಿತವಾಗಿರುವುದು ಕೇವಲ ಭುಜಂಗಯ್ಯನ ಕ್ರಿಯೆಗಳೇ ಅಲ್ಲ. ಅದಕ್ಕೆ ಅವನು ತೋರಿಸುವ ಪ್ರತಿಕ್ರಿಯೆ ಮಾತ್ರವಲ್ಲ. ಅವನ ಸುತ್ತ ಅವನು ತೊಡಗಿಸಿಕೊಂಡಿರುವ ಪಾತ್ರಗಳು ಅವನ ಬಗ್ಗೆ. ಅವನ ಕ್ರಿಯೆಯ ಬಗ್ಗೆ ಪ್ರತಿಕ್ರಿಯೇ ವ್ಯಕ್ತಪಡಿಸುತ್ತದೆ. ಆದ್ದರಿಂದ ಕೇಂದ್ರ ಪಾತ್ರದ ಕ್ರಿಯೆಯಲ್ಲಿ ಸುತ್ತಲಿನ ಪಾತ್ರದ ಕ್ರಿಯೆಗಳು. ಅನಿಸಿಕೆಗಳು ಕಾದಂಬರಿಯ ಕೇಂದ್ರ ಪ್ರಜ್ಞಾಬಿಂದುವಿನ ಸುತ್ತಲಿಂದಲೂ ಅಪ್ಪಳಿಸುತ್ತಿರುತ್ತವೆ. ಒಂದೇ ವಿಷಯಕ್ಕೆ ಸಂಬಂಧಪಟ್ಟಂತಹ ಅನೇಕ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ. ಆದ್ದರಿಂದ ಘಟನೆಗಳ ಪುನರಾವರ್ತನೆ, ಅವುಗಳ ಬಗೆಗಿನ ಪ್ರತಿಕ್ರಿಯೆ ಬರುವುದರಿಂದ ಹೇಳಿದ್ದನ್ನೇ ಮತ್ತೆ ಹೇಳುತ್ತಿರುವಂತೆ ಭಾಸವಾಗುತ್ತದೆ. ಇದು ಮೌಖಿಕ ಸಂಪ್ರದಾಯದ ಹರಟೆಯ ವಿಧಾನವೂ ಹೌದು. "ಹರಟೆ"ಯಲ್ಲೂ ಒಂದು ಘಟನೆಯನ್ನು ನಾಕಾರು ಜನ ತಮ್ಮ ಅನಿಸಿಕೆಯ ಹಿಂದೆ ಅವುಗಳಿಗೆ ಅರ್ಥವನ್ನು ಕಟ್ಟುತ್ತಾ ಹೋಗುತ್ತಾರೆ ಎಂಬುದನ್ನು ಗಮನಿಸಬಹುದು. ಭುಜಂಗಯ್ಯ ಹೋಟಲ್ ಇಟ್ಟಿದ್ದಕ್ಕೆ ನಾನಾ ಜನ ನಾನಾ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸುವುದನ್ನು ಉದಾಹರಣೆಗೆ ನೋಡಬಹುದು. ಅಂತೆಯೇ ಮೊದಲ ಎರಡು ಅಧ್ಯಾಯಗಳಲ್ಲಿ ಭುಜಂಗಯ್ಯ ಯಾವತ್ತೂ ಭೂಮಿಯ ಬಗ್ಗೆ ನಿಷ್ಠೆ ಕಳೆದುಕೊಳ್ಳದವನು. ಆ ದಿನ ನಿಷ್ಠೆ ಪರಿಶ್ರಮವಾಗಿರುವುದನ್ನು ವಿವರಿಸುವಲ್ಲಿ ಅದರಿಂದ ಅವನ ಮನಸ್ಸಿನಲ್ಲಿ ಉಂಟಾಗುವ ಮಾನಸಿಕ ತುಮುಲ, ಅದನ್ನು ಅವನ ಹೆಂಡತಿ ಗಮನಿಸುವ ರೀತಿ. ಅಕ್ಕಪಕ್ಕದ ಹೊಲದವರು ಗಮನಿಸುವ, ಪ್ರತಿಕ್ರಿಯಿಸುವ ರೀತಿ ಮತ್ತು ಅದೇ ವಿಷಯವನ್ನು ಸಂಗ್ರಹಿಸಿ ಎರಡನೇ ಅಧ್ಯಾಯದಲ್ಲಿ ಓದುಗರಿಗೆ ಮತ್ತೆ ಜ್ಞಾಪಿಸುವ ರೀತಿಯನ್ನು ಗಮನಿಸಬಹುದು. ಇದು ಮೌಖಿಕ ಸಂಪ್ರದಾಯದ ಒಂದು ಗುಣ. ಆದ್ದರಿಂದ ಕಾದಂಬರಿಯಲ್ಲಿ ಬಿಗುವನ್ನು ಕಾಣುವವರಿಗೆ ಪುನರಾವರ್ತನೆ ಮತ್ತು ಅತಿಶಯ ಗುಣ (ರಿಡಂಡನ್ಸಿ) ಕಾಣುತ್ತದೆ." ಇಂಥ ಕ್ರಮ ಕಾದಂಬರಿಯ ಉದ್ದಕ್ಕೂ ಕಾಣುವುದನ್ನು ಅವರು ಹೇಳಿದ್ದಾರೆ. "ಮೌಖಿಕ ಸಂಪ್ರದಾಯದ ಭಾಷೆಯಲ್ಲಿ ವಾಕ್ಯರಚನೆ ಶಿಷ್ಟದಲ್ಲಿನಂತೆ ಉದ್ದವೂ ಸಂಕೀರ್ಣವೂ ಆಗಿರುವುದಿಲ್ಲ. ನೇರವೂ ಸರಳವೂ ಆದ ವಾಕ್ಯಗಳು ಇರುವಂತೆ "ಭುಜಂಗಯ್ಯ... " ಕಾದಂಬರಿಯಲ್ಲೂ ಇದೆ."

ಕಿಕ್ಕೇರಿ ನಾರಾಯಣರು ಈ ಕಾದಂಬರಿಯಲ್ಲಿ ಕಾಣುವ ಮುಖ್ಯ ಪರಿಕಲ್ಪನೆ "ಒಳಗು-ಹೊರಗು" ಎಂಬುದನ್ನು ಗುರುತಿಸಿದ್ದಾರೆ. ಇದಕ್ಕೆ ಅವರು ಕೊಡುವ ನಿದರ್ಶನಗಳೆಂದರೆ: ಭುಜಂಗಯ್ಯ ಕೃಷಿಯಿಂದ ದೂರಾಗುವುದು, ಹೆಂಡತಿಯಿಂದ ದೂರಾಗುವುದು, ಊರವರಿಂದ ದೂರಾಗುವುದು, ಮಕ್ಕಳಿಂದ ದೂರಾಗುವುದು ಮುಂತಾದ ಕ್ರಿಯೆಗಳು ಹೊರಗು ಮತ್ತು ಸುಶೀಲೆಯನ್ನು ಕೂಡುವುದು, ನಾಟಕ ಆಡಿಸುವ ಮೂಲಕ ಊರವರನ್ನು ಹತ್ತಿರ ಕರೆಯುವುದು, ಗೌಡರ ವಿಷ ಇಳಿಸುವುದು ಕೊನೆಗೆ ನಾರಾಯಣನನ್ನು ಬದುಕಿಸುವುದು, ಅವನ ಕೊನೆಯ ಅವಸ್ಥೆಗಳಲ್ಲಿ 'ಒಳಗು' ಆಗುವುದನ್ನು ಗುರುತಿಸಿದ್ದಾರೆ. ಅಂದರೆ 'ಒಳಗೂ-ಹೊರಗೂ' ಒಂದಾಗುವ ಕ್ರಮವನ್ನು ಕಾದಂಬರಿಯಲ್ಲಿ ಗುರುತಿಸಿದ್ದಾರೆ.

ಡಾ. ಕೆ. ವಿ. ನಾರಾಯಣ ಅವರು 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಮೈತಾಳಿದ 'ನಾಯಕ'ನ ಬಗ್ಗೆ ಬಹುಮುಖ್ಯ ಒಳನೋಟಗಳತ್ತ ಗಮನ ಸೆಳೆದಿದ್ದಾರೆ. ಅಲ್ಲದೆ ಆಲನಹಳ್ಳಿಯವರ ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಒಂದಾದ 'ಕಥನ'ದ ಬಗ್ಗೆ ಕೂಡ ಪ್ರಸ್ತಾಪಿಸುತ್ತಾರೆ:

"ಕಾದಂಬರಿ ಪ್ರಕಾರದ ಪೂರ್ವರೂಪವಾದ 'ರಮ್ಯಕಥಾನಕ'ಗಳ ಆಕೃತಿಯನ್ನು ಬಳಸಿಯೇ ಮುಂದುವರೆಯುತ್ತದೆ. ಆದರೆ 'ರಮ್ಯ ಕಥಾನಕ'ಗಳು ನಾಯಕನ ಆರಾಧನೆಯ ಜೊತೆಗೆ, ಅವನು ಸಮುದಾಯದೊಡನೆ ಬೆರೆಯುವ, ಒಂದಾಗುವ ದಿಕ್ಕಿನತ್ತ ಧಾವಿಸುತ್ತವೆ. ವಾಸ್ತವ ನೆಲೆಗಳಲ್ಲಿ ಗ್ರಹಿಸುವದಾದರೆ ಅಲ್ಲಿ ಅವನ ಜಯ, ಪುನಃ ಸ್ಥಾಪನೆ, ವಿವಾಹ ಮುಂತಾದ ಹಂತಗಳತ್ತ ಕಥನ ಮುಂದುವರೆಯುತ್ತದೆ. ಆದರೆ ಇಂಥ 'ಕಥಾನಕ'ಗಳ ಧಾಟಿಯಲ್ಲಿ ಸಮುದಾಯದಿಂದ ಬೇರೆಯಾಗುವ, ಎದುರು ನಿಲ್ಲುವ, ಮೌಲ್ಯಗಳ ತಾಕಲಾಟಕ್ಕೆ ಅವಕಾಶಮಾಡಿಕೊಡುವ ನಾಯಕನ ಕಥೆಯನ್ನು ಆಲನಹಳ್ಳಿ ಇಲ್ಲಿ ಹೇಳಿದ್ದಾರೆ. ಮೇಲುನೋಟಕ್ಕೆ ಇದು ಪರಸ್ಪರ ವಿರುದ್ಧವಾದ ಸಂಗತಿ ಎನಿಸಿದರೂ ಕಾದಂಬರಿಯಲ್ಲಿ ಕಥನದ ಆಕೃತಿಯ ಒತ್ತಡ ಹಾಗೂ ಪ್ರಭಾವಗಳು ಎಷ್ಟೊಂದು ತೀವ್ರವಾಗಿದೆಯೆಂದರೆ ಸಮುದಾಯ ವಿಮುಖಿಯಾಗಿದ್ದ ನಾಯಕನ ಸಾವು, ವ್ಯಕ್ತಿಯೊಬ್ಬನ ಸಾವಿನಂತೆ ಕೊನೆಗೊಳ್ಳುವುದಿಲ್ಲ; ಬದಲಾಗಿ ಅದು ಸಮಷ್ಟಿಯ ಚೈತನ್ಯದ ಭಾಗವಾಗುತ್ತದೆ. ಅವನ ಸಾವು ತಂದ ಅಳಲು, ಕಟ್ಟಿದ್ದ ಮೋಡಗಳಿಂದ ಧೋಯೆಂದು ಮಳೆಯಾಗಿ ಸುರಿಯತೊಡಗುತ್ತದೆ. ಹೀಗಾಗಿ ಇದು ದುರಂತವಲ್ಲ. ಬಳಕೆಯ ಮಾತುಗಳಲ್ಲಿ ಹೇಳುವುದಾದರೆ 'ಬಿಡುಗಡೆ'."

"ಪರಿಸರದೊಡನೆ ಅವನನ್ನು ಇರಿಸಿ ನೋಡಿದರೆ ಆತ ಎಲ್ಲರಿಂದ ಭಿನ್ನವಾಗಿ ತೋರುತ್ತಾನೆ. ಅವನಿಗೆ ಆರಾಧಕರಿದ್ದಾರೆ. ಜೊತೆಗೆ ಅವನ ಏಳಿಗೆಯನ್ನು ಕಂಡು

ಕರುಬುವವರೂ ಇದ್ದಾರೆ. ಆದರೆ ಇವರು ಮಾರ್ಗ ಕಾವ್ಯಗಳಲ್ಲಿರುವಂಥ, ಪ್ರತಿನಾಯಕರಂತಲ್ಲ. ನಾಯಕನ ಅಭ್ಯುದಯಕ್ಕೆ ಇವರು ವಿರೋಧಿಗಳಾಗಿದ್ದು ನೆರವಾಗುವವರು. ಪಾರ್ವತಿ, ರುದ್ರಪ್ಪ, ಮಂಜ ಮೊದಲಾದವರು ಇಲ್ಲಿ ಗಮನಕ್ಕೆ ಬರುವ ಪಾತ್ರಗಳು. ಇವರು ನಾಯಕನ ಎದುರು ಕುಬ್ಜರು. ನಾಯಕನ ಒಳಗಿರುವ 'ನಾಯಕ'ನನ್ನು ಬಯಲಿಗಿಡಲು ತಕ್ಕ ಸಂದರ್ಭಗಳನ್ನು ರೂಪಿಸುತ್ತಾರೆ.''

''ಭುಜಂಗಯ್ಯನಲ್ಲಿ ಮೊದಲು ಸ್ಥಾಯಿಯಾಗಿದ್ದ ಚಡಪಡಿಕೆ, ತವಕ, ಛಲ, ಸಾಹಸ ನಿಧಾನವಾಗಿ ಸ್ಥಿರತೆ ತಾಳ್ಮೆಗಳಿಗೆ ಜಾಗಮಾಡಿಕೊಡುತ್ತವೆ. ಈ ಪರಿವರ್ತನೆ ತಟಕ್ಕನೆ ಆದುದಲ್ಲ; ಆದರೂ ಮದ್ದಿನ ಸಿಡಿತಕ್ಕೆ ಸಿಕ್ಕಿ ಅವನು 'ಕಣ್ಣು' ಕಳೆದುಕೊಂಡು ಬಿಡುವ ಹಂತದಿಂದ ಬದಲಾವಣೆ ಹೆಚ್ಚು ಗಾಢವಾಗುತ್ತದೆ. ತಾನು ಕಣ್ಣು ಮುಚ್ಚಿದವನು, ಕುರುಡಾದವನು ಈಗ ಕಣ್ಣು ತೆರೆದವನಂತೆ, ಕಣ್ಣು ಪಡೆದವನಂತೆ ವರ್ತಿಸತೊಡಗುತ್ತಾನೆ. ಅನಂತರ ಅವನ ಗ್ರಹಿಕೆಗೆ ಲೋಕಾನುಭವಕ್ಕೆ ಮಾಧ್ಯಮಗಳೆಂದರೆ ತತ್ವಪದಗಳು ಹಾಗೂ ತಂಬೂರಿಯ ತಂತಿಯ ನಾದ ಇವುಗಳ ಮೂಲಕವೇ ಆತ ಮಾತನಾಡತೊಡಗುತ್ತಾನೆ. ಗಡ್ಡಬಿಟ್ಟು, ಕೂದಲು ಬೆಳಸಿ, ವೇಷ ಬದಲಿಸಿ ಕೊನೆಗೆ ಬೀದಿಗಳಲ್ಲಿ ನಡೆದು ಮನೆಗಳ ಮುಂದೆ ನಿಂತು ರಿಕ್ತನಂತೆ ಬೇಡುತ್ತಾನೆ. ತನ್ನ ಚಡಪಡಿಕೆಯ ಮೂಲಕವೇ ನಾಯಕ ಈ ಹಂತವನ್ನು ತಲುಪುವಂತಾದದ್ದು. ಅಂದರೆ ತನ್ನ ಸ್ಥಾಯಿಗುಣದ ಮೂಲಕವೇ ಅದನ್ನು ಮೀರುವ ಹಂತವನ್ನು ಮುಟ್ಟುವ ಇಲ್ಲಿನ ಬಗೆ ಗಮನಾರ್ಹವಾಗಿದೆ. ನಿರೂಪಕನಿಗೆ ತನ್ನ ನಾಯಕನಲ್ಲಾದ ಈ ಬೆಳವಣಿಗೆ ಜೀವಸಾಫಲ್ಯದ ಒಂದು ನೆಲೆಯಂತೆ ತೋರುತ್ತದೆ. ಸುಶೀಲಳ ಮೇಲೆ, ಛಲ ಹಿಡಿದು ಅತ್ಯಾಚಾರಮಾಡಿದ ನಾರಾಯಣನನ್ನು ಹಾವು ಕಚ್ಚಿದಾಗ ಅವನನ್ನು ಉಳಿಸಹೋಗಿ ನಾಯಕ ತಾನು ಸತ್ತು ಸಮುದಾಯದಲ್ಲಿ ದೇವತೆಯಾಗಿ ಬಿಡುತ್ತಾನೆ. ಜೀವನದ ಗತಿಯಲ್ಲಿ ತನ್ನ ಹೆಜ್ಜೆಗಳನ್ನು ತಾನೇ ಕಾಣುತ್ತಾ, ತನ್ನ ವರ್ತನೆಗಳನ್ನು ತಾನೇ ವಿಶ್ಲೇಷಿಸುತ್ತಾ, ಚಿಂತಿಸುತ್ತಾ ಹೋಗುವ ವ್ಯಕ್ತಿ ತೋರಿಕೆಗೆ ಕುರುಡ, ಒಬ್ಬಂಟಿ ಆದರೆ ನಿಜದಲ್ಲಿ ಅವನು ನಾಯಕ. ಆರಾಧನೆಗೆ ತಕ್ಕವನು.''

''ಮೇಲು ನೋಟಕ್ಕೆ ಈ ಕಾದಂಬರಿ ಕನ್ನಡದ ನವೋದಯ ಕಾಲದ ವಾಸ್ತವವಾದಿ ಕಾದಂಬರಿಗಳ ಪರಂಪರೆಯ ಮುಂದುವರಿಕೆ ಎನಿಸಿದರೂ ನಿಜದಲ್ಲಿ ಹಾಗಲ್ಲ. ಬಂಧ ಹಾಗೂ ಆಶಯಗಳ ನೆಲೆಯಲ್ಲಿ ಇದು ಒಂದು ಕಡೆ ದೇಸೀ ಕಥನ ಕಾವ್ಯಗಳ ಪರಂಪರೆಗೆ ಸೇರಿದರೆ ಇನ್ನೊಂದು ಕಡೆ ಹೊಸಜಗತ್ತಿನ ಮನುಷ್ಯನನ್ನು ಅವನ ಪರಿಸರದಲ್ಲೇ ಶೋಧಿಸುವ, ರೂಪಿಸುವ ಆಧುನಿಕ ನೆಲೆಗಳಿಗೆ ಸೇರುತ್ತದೆ. ಏಕೆಂದರೆ ಇಲ್ಲಿ ನಾಯಕ, ದೇಸೀ ಕಾವ್ಯಗಳಂತೆ ಎಲ್ಲಿಂದಲೋ ಬರುವುದಿಲ್ಲ, ಅಲ್ಲಿಯೇ 'ಆಗುತ್ತಾನೆ'. ಈ ಸಂಗತಿಯಿಂದಾಗಿ ಕೂಡ ಕಾದಂಬರಿ ಮುಖ್ಯವಾಗುತ್ತದೆ.''

ಶ್ರೀಕೃಷ್ಣ ಆಲನಹಳ್ಳಿ

ಆಲನಹಳ್ಳಿಯವರ ಮೂರು ಕಾದಂಬರಿಗಳನ್ನೂ ಗಮನಿಸಿದ ಟಿ.ಪಿ.ಅಶೋಕರು, ಗ್ರಾಮೀಣ ಸಮಾಜ, ಆ ಸಮಾಜದ ಪರಿವರ್ತನೆಗೆ ಕಾರಣವಾಗುವ ಹೋಟೆಲ್, ಪೋಲೀಸ್, ಕೋರ್ಟು, ಬಸ್ಸು, ಗೆಂಡೆತಿಮ್ಮ ಮಾರುವ ಸಾಮಾನು ಮುಂತಾದ ಆಧುನಿಕತೆಗೆ ಕಾರಣವಾದ ಅಂಶಗಳು ಗ್ರಾಮೀಣ ಸಮಾಜಕ್ಕೆ ಬಂದ ರೀತಿಯನ್ನು ಗುರುತಿಸುತ್ತಾ "ಗೆಂಡೆತಿಮ್ಮ, ಭುಜಂಗಯ್ಯ ಕ್ರಾಂತಿಕಾರಿಗಳೂ ಅಲ್ಲ, ಸಾಮಾಜಿಕ ಸುಧಾರಕರೂ ಅಲ್ಲ. ಅವರು ಗ್ರಾಮೀಣ ಭಾರತೀಯ ಬದುಕಿನಲ್ಲೇ ಬೇರು ಬಿಟ್ಟವರು. ಅದರ ಬಹುತೇಕ ಮೌಲ್ಯಗಳನ್ನು ರೂಢಿಸಿಕೊಂಡವರು. ಆದರೆ ತಮಗೆ ಗೊತ್ತಿಲ್ಲದಂತೆಯೇ ಆಧುನೀಕರಣದ ಪ್ರಕ್ರಿಯೆಗೆ ಒಡ್ಡಿಕೊಂಡವರು; ಅದಕ್ಕೆ ಚಾಲನೆಯನ್ನು ಕೊಟ್ಟವರು. ಹೂವಯ್ಯ, ಜಗನ್ನಾಥರಂಥಹ ವಿಚಾರಗಳು ಗೆಂಡೆತಿಮ್ಮ, ಭುಜಂಗಯ್ಯರ ವ್ಯಕ್ತಿತ್ವದಲ್ಲಿ ಕರಗಿದಾಗ ಮಾತ್ರ ಸಾಮಾಜಿಕ ಸಂರಚನೆಗಳ ಪಲ್ಲಟ ಸಾಧ್ಯವೇನೋ. ಆಗಲೂ ಈ ಪಲ್ಲಟ ಪೂರ್ಣವಾಗಲಾರದು; ಅದಕ್ಕೆ ದಲಿತರೂ ಸಿದ್ಧವಾಗಬೇಕು ಎಂದು ಮಹಾದೇವರ ಕೃತಿಗಳು ಸೂಚಿಸುತ್ತವೆ. ಕೃಷ್ಣರ ಕಿಟ್ಟಿ, ರಾಜ, ಮಹಾದೇವರ ಶಿವೂ ಆಧುನಿಕ ವಿದ್ಯಾಭ್ಯಾಸ ಪಡೆದು ತಮ್ಮ ಸ್ಥಿತಿಯಿಂದ ಬಿಡುಗಡೆ ಪಡೆಯಬಲ್ಲರು ಎಂಬ ಸೂಚನೆ ಆಯಾ ಕಾದಂಬರಿಗಳಲ್ಲಿ ಇದೆ."

೧೯ನೆಯ ಶತಮಾನದಿಂದ ಭಾರತೀಯ ಸಮಾಜವನ್ನು ಪ್ರವೇಶಿಸಿದ ಆಧುನಿಕತೆಯನ್ನು ಜನ ಸಮುದಾಯಗಳು ಹೇಗೆ ಗ್ರಹಿಸಿದವು, ಕುವೆಂಪು ಹಾಗೂ ಅವರ ತಲೆಮಾರಿನವರು ತಮ್ಮ ಸಾಹಿತ್ಯದಲ್ಲಿ ಆಧುನಿಕತೆಗೆ ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ಡಾ. ರಹಮತ್ ತರೀಕೆರೆಯವರು ಆಲನಹಳ್ಳಿಯವರ ಸಾಹಿತ್ಯವನ್ನು ನೆಪವಾಗಿಟ್ಟುಕೊಂಡು ಪರಿಶೀಲಿಸುತ್ತ ಕೆಲವು ಮುಖ್ಯ ಸಂಗತಿಗಳನ್ನು ಚರ್ಚಿಸಿದ್ದಾರೆ. ಹೊರರೂಪೀ ಆಧುನಿಕತೆಯನ್ನು ಸ್ವೀಕರಿಸುವ ಮಟ್ಟಿಗೆ ಮಾತ್ರ ಆಲನಹಳ್ಳಿಯವರ ದೃಷ್ಟಿಯಿತ್ತು ಎಂದು ಅಭಿಪ್ರಾಯಪಡುತ್ತಾರೆ. ಅವರ ವಾದ ಹೀಗಿದೆ: "ಆಲನಹಳ್ಳಿಯವರಿಗೆ ತಮ್ಮಲ್ಲಿ ಕುತೂಹಲ ಹುಟ್ಟಿಸಿರುವ ವ್ಯಕ್ತಿಯೊಬ್ಬನ ಕಥೆ ಹೇಳುವುದು ಮುಖ್ಯವೇ ವಿನಾ, ಆ ವ್ಯಕ್ತಿಯನ್ನು ಆವರಿಸಿರುವ ಇಡೀ ಸಾಮಾಜಿಕ ಪರಿಸರ ಅಂದರೆ ಇಡೀ ಸಮೂಹದ ಕಥೆಯನ್ನು (ಕುವೆಂಪು ಅವರಂತೆ) ಹೇಳುವುದಿಲ್ಲ. ಹೀಗಾಗಿ ಒಂದು ವ್ಯಕ್ತಿಯ ಹೆಚ್ಚೆಂದರೆ ಆ ವ್ಯಕ್ತಿಗೆ ಸಂಬಂಧಿಸಿದ ವ್ಯಕ್ತಿಗಳ ಕಥೆಯಾಗಲೆಳಸುವ ಅವರ ಕಥನ ಕ್ರಮದಲ್ಲಿ (ಇದು ನವ್ಯದ ಕಥನ ಕ್ರಮದ ಮಿತಿ) ಇಡೀ ಸಾಮಾಜಿಕ ರಚನೆಯಲ್ಲಿ ನಡೆಯುತ್ತಿರುವ ಪರಿವರ್ತನೆಗಳನ್ನು ತಾಳ್ಮೆಯಿಂದ ಗಮನಿಸುವ ಸೂಕ್ಷ್ಮಗುಣ ಕಡಿಮೆ ಎಂದು ನನ್ನ ಅಭಿಪ್ರಾಯ. ಇಲ್ಲಿನ ಆಧುನಿಕತೆಯು ಬಾಡಿ, ಲಂಗ, ಗಮಲದೆಣ್ಣೆ, ಕ್ರಾಪು. ಬಟ್ಟೆಬರೆಗಳಂಥ ಹೊರರೂಪಿಯಾಗಿ ಪ್ರವೇಶಿಸಿದೆ. ಹೀಗಾಗಿ ವಿಚಾರ-ವಿದ್ಯೆಗಳಂಥ ಒಳರೂಪಿನ ಆಧುನಿಕತೆಯಿಂದ, ಒಂದು ಊರಿನ ಮೌಲ್ಯಗಳ ಜಗತ್ತಿನಲ್ಲಿ ಕೋಲಾಹಲ ಗೆಯ್ಯಬಲ್ಲ ಒಬ್ಬ ಚೆನ್ನ (ಕುಸುಮಬಾಲೆ) ಒಬ್ಬ

ಹೂವಯ್ಯ-ದೇವಯ್ಯ, ಒಬ್ಬ ಸುಮಾನಿ (ಬೆಸಗರಹಳ್ಳಿಯವರ 'ದೇವರ ಹಣ') ಅಂಥವರನ್ನು ಇಲ್ಲಿ ಕಾಣಲಾರೆವು. ನಂಜನಗೂಡಲ್ಲೋ ಮೈಸೂರಲ್ಲೋ ಎಸ್ಸೆಲ್ಸಿ ಹತ್ತಿ ಬಂದ ರಾಜ ಶಂಭುವಿನಂಥ ಹುಡುಗರು "ಮೇಲು ಜಾತಿ ಕೀಳು ಜಾತಿ ಅನ್ನದೆ ಒಂದೇ ಹೊಟ್ಟೆಯಿಂದ ಬಿದ್ದಂತೆ ಹೊಲಾರ ಲಕುಮನೊಡನೆ ತಿರುಗುವುದು" ಅಥವಾ ಪಟೇಲರೆದುರು ಪ್ರಶ್ನೆಗಳಾಗಿ ಕಾಡುವುದಕ್ಕೂ (ದೇವನೂರರ 'ಡಾಂಬರು ಬಂದುದು') ಮರಂಕಿಯೊಡನೆ ಲೈಂಗಿಕಾನುಭವಕ್ಕೆ ಹಾತೊರೆವ ಶಿವಣ್ಣನಿಗೂ ಅಥವಾ ಸುಶೀಲನೊಡನೆ ಲೈಂಗಿಕಾನುಭವ ಪಡೆಯುವುದೊಂದೇ ಮುಖ್ಯಾನುಭವವಾಗುವ ರಾಜ, ನಾರಾಯಣರಿಗೂ ಹೋಲಿಸಿದರೆ ತಾತ್ವಿಕ ವ್ಯತ್ಯಾಸ ಗೊತ್ತಾಗುತ್ತದೆ. ನಗರದಲ್ಲಿ ಶಿಕ್ಷಣ ಪಡೆದು ಬರುವ ಈ ಎಲ್ಲ ಪಾತ್ರಗಳು ಆಧುನಿಕತೆಯನ್ನು ಸಮುದಾಯ ಪ್ರಜ್ಞೆಯಾಗಿಸಿಕೊಳ್ಳುವ ಬದಲು ಲೈಂಗಿಕ ಸ್ವಚ್ಛಂದವು ಎಷ್ಟು ಪುರುಷ ದೃಷ್ಟಿಕೋನಿಯೆಂದರೆ, ಅವು ಭೋಗಿಸುವ ಹೆಣ್ಣು ಹೆಸರೇ ಇಲ್ಲದ 'ಅವಳು' ಮಾತ್ರ. ಆಧುನಿಕತೆಯನ್ನು ಶೋಕಿ, ಥಳಕು, ಆಡಂಬರ, ಭೋಗಗಳಾಗಿ ಗ್ರಹಿಸಿರುವುದರಿಂದ, ಅದು ವ್ಯಕ್ತಿ ಸುಖಕ್ಕೆ ಮಾತ್ರ ಸಾಧನವಾಗಿದೆ - ಮರಂಕಿಯಲ್ಲಿ ಆದಂತೆ. ಸಾಮಾಜಿಕ ಕಟ್ಟುಪಾಡುಗಳನ್ನು ಹಿರಿಯರನ್ನು ಉಲ್ಲಂಘಿಸುವುದಕ್ಕೆ ಇದು ಸ್ವಲ್ಪ ಮಟ್ಟಿಗೆ ಕಾರಣವಾಗುತ್ತಿದೆ ಅನಿಸಿದರೂ ಅಲ್ಲಿಯೂ ಲಂಪಟತನ, ಬೇಜವಾಬ್ದಾರಿಗಳೇ ಮಿಗಿಲಾಗಿ ಕಾಣುತ್ತವೆ. ಆಧುನಿಕತೆಯು ಮೋಹಿನಿಯಂತೆ ಮೋಸಮಾಡುವ ಆಕರ್ಷಣೆಯುಳ್ಳದ್ದೂ ಆಗಿದೆ. ಮುಖಕ್ಕೆ ಮರುಳಾದಾಗ ಸಿಕ್ಕಿದ್ದು ಅಮೃತವಲ್ಲ. ಮರಂಕಿ ಹೀಗೆ ಹೊರರೂಪಿಗೆ ಮರುಳಾಗಿದ್ದಕ್ಕೆ ಅವಳು ಸಾವನ್ನಪ್ಪಬೇಕಾಗುತ್ತದೆ."

ಸಮಾರೋಪ

ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯವನ್ನು ಕುರಿತು ತಮ್ಮದೇ ಆದ ದೃಷ್ಟಿಕೋನಗಳಿಂದ ವಿಮರ್ಶಕರು ನೋಡಿದ್ದಾರೆ. ಆದರೂ ಅವರ ಸಾಹಿತ್ಯವನ್ನು ಗಂಭೀರವಾಗಿ ಪರಿಣಮಿಸಿ ಬರೆದ ವಿಮರ್ಶಕರು ಬಹಳ ಕಮ್ಮಿ ಎನಿಸುತ್ತದೆ. ಇದಕ್ಕೆ ಹಲವು ಕಾರಣಗಳಿವೆ. ಕೃಷ್ಣರು ಯಾವುದೇ ಐಡಿಯಾಲಜಿಯನ್ನು ಪ್ರತಿಪಾದಿಸಿಕೊಂಡು ಸಾಹಿತ್ಯವನ್ನು ರಚಿಸಲಿಲ್ಲ. ಎಲ್ಲ ಸಾಹಿತ್ಯಕ ಚಳುವಳಿಗಳ ನಡುವಿದ್ದರೂ ಅವುಗಳ ಗುಂಟ ಅವರ ಸಾಹಿತ್ಯ ಸಾಗಲಿಲ್ಲ. ಕೇವಲ ತಮ್ಮ ಅನುಭವಗಳಿಗೆ ನಿಷ್ಠರಾಗಿ ಬರೆದರು. ಇದರಿಂದ ಒಂದಲ್ಲ ಒಂದು ಪಂಥ, ವಾದಗಳಿಗೆ ಬದ್ಧರಾಗಿರುವ ವಿಮರ್ಶಕರಿಗೆ ಕೃಷ್ಣರ ಸಾಹಿತ್ಯವನ್ನು ತಮ್ಮ ತಕ್ಕಡಿಗೆ ಹೊಂದಿಸಿಕೊಂಡು ತೂಗಿ ಅಳೆಯುವುದಕ್ಕೆ ಕಷ್ಟವಾಗಿರಬೇಕು. ಮೇಲಾಗಿ ಕೃಷ್ಣರು ಬಹುಬೇಗ ಕಣ್ಮರೆಯಾದರು. ಆದರೆ ಕಣ್ಮರೆಯಾದ ಮೇಲೆಯೂ ಅವರ ರೋಚಕ ವ್ಯಕ್ತಿತ್ವದ ಬಗ್ಗೆ ಮಾತಾಡಿಕೊಂಡಷ್ಟು ಅವರ ಸಾಹಿತ್ಯವನ್ನು ಕುರಿತು ಚರ್ಚಿಸಲಿಲ್ಲ. ಕೃಷ್ಣರ ವ್ಯಕ್ತಿತ್ವವನ್ನು ಕಂಡವರು ಆ ವ್ಯಕ್ತಿತ್ವವನ್ನೇ ಬೇರೆ ಬೇರೆ ರೀತಿಯಾಗಿ ಗ್ರಹಿಸಿಕೊಂಡು ಅದನ್ನೇ ಅವರ ಸಾಹಿತ್ಯದ ಹಲವು ಹಂತಗಳಲ್ಲಿ ಗುರುತಿಸಿ ವಿಮರ್ಶಿಸಲು ಪ್ರಯತ್ನಿಸಿದರು.

ಪ್ರಾರಂಭದಲ್ಲಿ ಕೃಷ್ಣರನ್ನು ನವ್ಯರ ಸಾಲಿಗೆಳೆದು ನಿಲ್ಲಿಸಿದ ಅಡಿಗ, ಅನಂತಮೂರ್ತಿ ಮುಂತಾದವರು ಮೆಚ್ಚಿಗೆಯ ಮಾತುಗಳನ್ನಾಡಿದರು. ಅದೇ ಕೃಷ್ಣರನ್ನು 'ಕಾಮುಕ' ಎಂದೂ ಹೆಣ್ಣುಗಳನ್ನು ಭೋಗದ ವಸ್ತುಗಳನ್ನಾಗಿ ಕಂಡ ಸಾಹಿತಿ-ಎಂದೂ ಕೆಲವರು ಟೀಕಿಸಿದರು. ಆದರೆ 'ಮರಂಕಿ'ಯನ್ನು ಸೃಷ್ಟಿಸಿದ ಸಾಹಿತಿ 'ಸುಶೀಲೆ'ಯನ್ನೂ ಸೃಷ್ಟಿಸಿದ - ಎಂಬುದನ್ನು ಎತ್ತಿ ಹಿಡಿದ ವಿಮರ್ಶಕರು ಕೃಷ್ಣರ ಸಾಹಿತ್ಯವನ್ನು ಈ ಬಗೆಯ ಪೂರ್ವಗ್ರಹಗಳಿಲ್ಲದೆ ನೋಡಲು ಪ್ರಯತ್ನಿಸಿದರು. ಕೆ.ವಿ. ನಾರಾಯಣ ಮತ್ತು ಎಚ್.ಎಸ್.ರಾಘವೇಂದ್ರರಾವ್ ಅವರು 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯ 'ಭುಜಂಗಯ್ಯ' ಪಾತ್ರ ಸೃಷ್ಟಿಯ ಮಹತ್ವವನ್ನು ಕುರಿತು ಅನೇಕ ಮುಖ್ಯ ಹೊಸ ಸಂಗತಿಗಳ ಕಡೆಗೆ ಗಮನ ಹರಿಸಿ, ಕನ್ನಡ ಕಾದಂಬರಿಗಳಲ್ಲಿ ಬರುವ ಎಷ್ಟೋ ಪಾತ್ರಗಳಿಗಿಂತ 'ಭುಜಂಗಯ್ಯ' ಹೇಗೆ ಭಿನ್ನ ಮತ್ತು ವಿಶಿಷ್ಟ ಎಂಬುದನ್ನು ವಿಶ್ಲೇಷಿಸಿದ್ದಾರೆ. ಮೂಲತ: ಕೃಷ್ಣರು ವಿಮರ್ಶಕರ ಸಾಹಿತಿಯಾಗದೆ, ಸಾಹಿತಿಗಳ, ಸಾಹಿತಿಯಾಗದೆ ಓದುಗರ ಮೆಚ್ಚಿನ ಸಾಹಿತಿಯಾಗಿ ಬೆಳೆದದ್ದು ಗಮನಾರ್ಹ ಸಂಗತಿಯಾಗಿದೆ. ಹಾಗೆಂದು 'ಜನಪ್ರಿಯ' ಸಾಹಿತಿಯಾಗಲು ಇಷ್ಟಪಟ್ಟನೆಂದಲ್ಲ. 'ಖ್ಯಾತಿ' ಮತ್ತು 'ಜನಪ್ರಿಯತೆ' ಎರಡನ್ನೂ ಗಳಿಸುವುದು ಕಷ್ಟ. ಇದು ತೇಜಸ್ವಿ, ಆಲನಹಳ್ಳಿ ಅಂಥವರಿಗೆ ಸಾಧ್ಯವಾಗಿದೆ.

ಶ್ರೀಕೃಷ್ಣ ಆಲನಹಳ್ಳಿಯವರು ಸಾಹಿತ್ಯ ಲೋಕಕ್ಕೆ ಕಾಲಿಟ್ಟು ನವೋದಯದವರ ಸಂಭ್ರಮವನ್ನೂ ನವ್ಯರ ಉತ್ಸಾಹವನ್ನೂ ಹಾಗೂ ಬಂಡಾಯ-ದಲಿತರ ಆವೇಶವನ್ನೂ ಬೆರಗಿನಿಂದಲೂ ತಮಾಷೆಯಿಂದಲೂ ನೋಡಿದವರು. ಎಷ್ಟೇ ಒಲವಿದ್ದರೂ ಕುವೆಂಪು, ಕಾರಂತ, ರಾವ್‌ಬಹಾದ್ದೂರ್ ಅವರನ್ನು ಅನುಸರಿಸಲಿಲ್ಲ. ಬೆನ್ನಿಗೇ ಇದ್ದ ಅನಂತಮೂರ್ತಿ, ಲಂಕೇಶ, ಕಾರ್ನಾಡ್, ಚಿತ್ತಾಲರನ್ನು ಅನುಸರಿಸಲಿಲ್ಲ. ಕೃಷ್ಣರ ಕಾಲವೆಂದರೆ ನವ್ಯರ ಏರುತ್ಸಾಹದ ಕಾಲ. ನವ್ಯದ ಐಡಿಯಾಲಜಿಗಳು, ಪರಿಭಾಷೆ, ನುಡಿಗಟ್ಟುಗಳು ಮತ್ತು ತಂತ್ರಗಳು ಯಾರನ್ನೂ ತಮ್ಮೆಡೆ ಸೆಳೆದುಕೊಳ್ಳುವ ಶಕ್ತಿ ಪಡೆದಿದ್ದವು. ಅಂಥ ಸಂದರ್ಭದಲ್ಲಿ ಕೃಷ್ಣರು ಅದರಿಂದ ಒಂದು ಡಿಸ್ಟೆನ್ಸ್ ಕಾಯ್ದುಕೊಂಡದ್ದೂ ಅವರ ಸಾಧನೆಯೆಂದೇ ಹೇಳಬೇಕಾಗುತ್ತದೆ. ಯಾಕೆಂದರೆ ಯಾವುದೇ ಸೃಜನಶೀಲ ಬರಹಗಾರನು ತನ್ನ ಸಮಕಾಲೀನ ಸಂದರ್ಭದ ಯಾವುದೇ ಪಂಥ, ವಾದ ಮತ್ತು ಸಾಹಿತ್ಯಕ ಚಳುವಳಿಗಳೊಡನೆ ಗುರುತಿಸಿಕೊಳ್ಳುವ ಅನಿವಾರ್ಯತೆಯಿದ್ದರೂ(?) ಅಂಥ ಒಟ್ಟಾರೆ ಸಾಂಸ್ಕೃತಿಕ ಸಂದರ್ಭದ ಲಾಭ ಪಡೆದೂ, ಅಂಥದ್ದರ ಒಳಗೇ ಇರುವ ಮಿತಿಯನ್ನು ಮೀರಿ ಬೆಳೆಯುವ ಸವಾಲನ್ನು ಸ್ವೀಕರಿಸಿ ಎದುರಿಸಬೇಕಾಗುತ್ತದೆ. ಇದು ಕೃಷ್ಣರಿಗೆ ಸಾಧ್ಯವಾಗಿದೆ. ಆದ್ದರಿಂದಲೇ ಅವರು ಪಾಂಡಿತ್ಯ, ಬೌದ್ಧಿಕತೆಯಿಂದ ದೂರ ಸರಿದಿದ್ದು, ತಮ್ಮ ಸಹಜ ಪ್ರತಿಭೆಗೆ ದಕ್ಕಿದ್ದನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಒಂದು ಪ್ರತ್ಯೇಕ ಸ್ಥಾನವನ್ನು ಸ್ಥಾಪಿಸಿಕೊಂಡು ನಿಂತಿದ್ದು ಅವರ ಸಾಧನೆಯಾಗಿದೆ.

ಪ್ರಾರಂಭದ ಅವರ ಕವಿತೆ, ಕಥೆಗಳಲ್ಲಿ ನವ್ಯದ ಛಾಯೆ ಇದೆ ಎಂದು ಗುರುತಿಸಬಹುದು. ಆದರೂ ಅಲ್ಲಿ ಕೃಷ್ಣರ ಮೂಲಭೂತ-ತುಡಿತ ಯಾವ ಬಗೆಯದ್ದು ಎಂದು ಕಂಡುಕೊಳ್ಳಬಹುದು. ತಾನು ಹುಟ್ಟಿಬೆಳೆದ ಹಳ್ಳಿಯ ಪರಿಸರ, ಅಲ್ಲಿಯ ಕಳ್ಳು-ಬಳ್ಳಿಯ ಸಂಬಂಧಗಳು, ಅನೇಕ ಬಗೆಯ ಮಾನವ ಮುಖಗಳು ಅವರ ಸಾಹಿತ್ಯಾಭಿವ್ಯಕ್ತಿಗೆ ಸಾಮಗ್ರಿಯಾದವು. ಮನುಷ್ಯ ಮತ್ತು ಸಮಾಜ ಪರಿವರ್ತನೆಗೊಳ್ಳುವ ಹಂತಗಳನ್ನು ಕೃಷ್ಣರ ಸಾಹಿತ್ಯ ವ್ಯಕ್ತಪಡಿಸುತ್ತದೆ. ಇಲ್ಲಿ ಕೆ.ವಿ. ತಿರುಮಲೇಶ ಹೇಳುವ ಮಾತು ಮುಖ್ಯವಾಗಿದೆ. "ಬದಲಾವಣೆಯ ಅನಿವಾರ್ಯತೆಯನ್ನು ಒಪ್ಪಿಕೊಂಡೇ ಅದರಿಂದ ಬುಡಮೇಲಾಗುವ ಜನಾಂಗ ಸಂಸ್ಕೃತಿಯನ್ನು ಚಿತ್ರಿಸುವುದೂ ಬಹಳ ಮುಖ್ಯವಾಗಿತ್ತು. ಹಾಗೂ ಇಂಥ ಚಿತ್ರಣವೇ ಅದರ ರಕ್ಷಣೆ ಎಂದು ಕೂಡ ಅವನಿಗೆ ಅನಿಸಿರಬಹುದು... ಒಂದು ರೀತಿಯಲ್ಲಿ ಇದು ಕೃಷ್ಣ ನವ್ಯದ ವೈಚಾರಿಕತೆಗೆ ನೀಡಿದ ಪ್ರತಿಕ್ರಿಯೆಯೆಂತಲೂ ಹೇಳಬಹುದು. ಬದುಕಿನ ಬಗ್ಗೆ ಅನುಮಾನದಿಂದ ನೋಡುತ್ತಿದ್ದವರಿಗೆ ಈತ ಬದುಕಿನ ವಿಜೃಂಭಣೆಯ ಉತ್ತರವನ್ನು ಕೊಟ್ಟಹಾಗಿದೆ."

ಕೃಷ್ಣರ ಮೂರು ಕಾದಂಬರಿಗಳು ಕನ್ನಡದಲ್ಲಿ ವಿಶಿಷ್ಟ ಸ್ಥಾನವನ್ನು ಕಾಯ್ದುಕೊಂಡಿವೆ. ಕಿಟ್ಟಿ, ಗೆಂಡೆತಿಮ್ಮ, ಭುಜಂಗಯ್ಯ, ಮರಂಕಿ, ಸುಶೀಲೆ ಇವರು ಕೃಷ್ಣರ ಕೊಡುಗೆಯಾಗಿವೆ.

ಅನುಬಂಧ

ಶ್ರೀಕೃಷ್ಣ ಆಲನಹಳ್ಳಿಯವರ ಕೃತಿಗಳು

ಕಾವ್ಯ

೧. ಮಣ್ಣಿನ ಹಾಡು (೧೯೬೬)
೨. ಕಾಡುಗಿಡದ ಹಾಡುಪಾಡು (೧೯೭೩)
೩. ಪ್ರಕಟಿಸಲಾಗದ ಪದ್ಯಗಳು (೧೯೮೨)
೪. ಡೋಗ್ರಿ ಪಹಾಡಿ ಪ್ರೇಮಗೀತೆಗಳು (ಅನುವಾದ) (೧೯೭೩)

ಸಣ್ಣಕಥೆ

೧. ತಪ್ತ (೧೯೭೦)
೨. ಫೀನಿಕ್ಸ್ (೧೯೭೪)

ಬಿಡಿ ಕಥೆಗಳು

೧) ಸುಟ್ಟತಿಕದ ದೇವರು (೧೯೮೭-ಲಂಕೇಶ್ ಪತ್ರಿಕೆ ವಿಶೇಷಾಂಕ)
೨) ಮೂಮರವೂ ಮಾಪಿಳ್ಳೆಯೂ (೧೯೮೯ - ಅಪೂರ್ಣ)

ಕಾದಂಬರಿ

೧. ಕಾಡು (೧೯೭೧)
೨. ಪರಸಂಗದ ಗೆಂಡೆತಿಮ್ಮ (೧೯೭೪)
೩. ಭುಜಂಗಯ್ಯನ ದಶಾವತಾರಗಳು (೧೯೮೨)
೪. ಗೋಡೆ (ಅಪೂರ್ಣ)
೫. ಅರಗಿನ ಅರಮನೆ (ಅಪೂರ್ಣ)

ಸಂಪಾದನೆ

೧. ಅವಲೋಕನ (೧೯೬೯)
(ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ)
೨. ಅಂತ:ಕರಣ (೧೯೭೨)
(ದೇಜಗೌ ಅವರ ಸಂಭಾವನಾ ಗ್ರಂಥ)
೩. ಗ್ರಾಮಾಯಣ ಸಮೀಕ್ಷೆ (೧೯೭೦)
(ರಾವ್ ಬಹದ್ದೂರರ ಗ್ರಾಮಾಯಣ ಕಾದಂಬರಿ ಸಮೀಕ್ಷೆ)

ಪತ್ರಿಕೆ ಸಂಪಾದನೆ

೧. ಸಮೀಕ್ಷಕ

ಶ್ರೀಕೃಷ್ಣ ಆಲನಹಳ್ಳಿ ಕುರಿತ ಕೃತಿಗಳು

೧. ಕಾಡಿನ ಹುಡುಗ ಕೃಷ್ಣ (೧೯೯೦)
(ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಅಂಚೆ - ೫೭೭ ೫೩೧)

೨. ಪುಸ್ತಕ ಪ್ರಪಂಚ (೧೯೮೯)
(ಮಾಸಿಕ/ಸಂಪುಟ-೪೩/ಸಂಚಿಕೆ-೭-೮)
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು - ೫೭೦ ೦೦೪

೩. ಸಂಸ್ಕೃತಿಯ ಸ್ಥಿತ್ಯಂತರ ಮತ್ತು ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ
(ವಿವಿಧ ಲೇಖಕರು)
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು - ೫೬೦ ೦೦೨.

ಲೇಖನಗಳು

೧. ಶ್ರೀಕೃಷ್ಣ ಆಲನಹಳ್ಳಿಯವರ ಕಾಡು: ಬಿ. ಜಯದೇವಪ್ಪ
ಸಾಕ್ಷಿ: ಹೇಮಂತ ಸಂಚಿಕೆ, ಜನವರಿ-೧೯೭೩, ಅಕ್ಷರ ಪ್ರಕಾಶನ
(ಸಂ: ಗೋಪಾಲಕೃಷ್ಣ ಅಡಿಗ)

೨. ತಪ್ತ: ಆಲನಹಳ್ಳಿಯವರ 'ಮಣ್ಣಿನ ಕಥೆಗಳು': ಕೆ.ವಿ. ತಿರುಮಲೇಶ
ಸಾಕ್ಷಿ: ಶರತ್ ಸಂಚಿಕೆ, ಆಕ್ಟೋಬರ್-೧೯೭೧, ಅಕ್ಷರ ಪ್ರಕಾಶನ
(ಸಂ: ಗೋಪಾಲಕೃಷ್ಣ ಅಡಿಗ)

೩. ಆಲನಹಳ್ಳಿಯವರ - ಪರಸಂಗದ ಗೆಂಡೆತಿಮ್ಮ: ಮಾಧವ ಕುಲಕರ್ಣಿ
ಸಾಕ್ಷಿ: ವರ್ಷ ಸಂಚಿಕೆ, ಜುಲೈ-೧೯೭೫, ಅಕ್ಷರ ಪ್ರಕಾಶನ
(ಸಂ: ಗೋಪಾಲಕೃಷ್ಣ ಅಡಿಗ)

೪. ಭುಜಂಗಯ್ಯನ ದಶಾವತಾರಗಳು: ಜಿ.ಪಿ. ಬಸವರಾಜು
ರುಜುವಾತು: ಏಪ್ರಿಲ್-ಜೂನ್-೧೯೮೪
ಸಂ: ಯು.ಆರ್. ಅನಂತಮೂರ್ತಿ

೫. ಭುಜಂಗಯ್ಯನ ದಶಾವತಾರಗಳು: ಎಲ್.ಎಸ್. ಶೇಷಗಿರಿರಾವ್
ಚಂದನ: ಸಂಪುಟ-೩/ಆಗಸ್ಟ್-ಅಕ್ಟೋಬರ್-೧೯೮೫
ಪ್ರ.ಸಂ: ಕೆ.ಎಸ್. ನಿಸಾರ್ ಅಹಮದ್

೬. ಕಾಡು: ಗಿರಡ್ಡಿ ಗೋವಿಂದರಾಜ
ಕಾದಂಬರಿ: ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಬೆಂಗಳೂರು.

೭. ಕೃಷ್ಣನ ಕಣ್ಮರೆ: ಪಿ. ಲಂಕೇಶ್
ಕೃಷ್ಣ: ಒಂದು ಸಂತಾಪ ಸಭೆ: ಪಿ. ಲಂಕೇಶ್
ಟೀಕೆ-ಟಿಪ್ಪಣಿ, ಪತ್ರಿಕೆ ಪ್ರಕಾಶನ, ಬೆಂಗಳೂರು

೮. ನಾಯಕನಿಗಾಗಿ: ಡಾ. ಕೆ. ವಿ. ನಾರಾಯಣ
ಶೂದ್ರ: ಸಂಚಿಕೆ-೩, ಸಂಪುಟ ೧೧, ನವೆಂಬರ್-೧೯೮೫

ಅನ್ಯ ಭಾಷೆಯಲ್ಲಿ ಶ್ರೀಕೃಷ್ಣರ ಆಲನಹಳ್ಳಿಯವರ ಸಾಹಿತ್ಯ

೧. ಹಿಂದಿಗೆ ಅನುವಾದವಾದ ಕೃತಿಗಳು
೧) ಕಾಡು: ಅನು: ಚಂದ್ರಕಾಂತ ಕುಸನೂರು
೨) ಪರಸಂಗದ ಗೆಂಡೆತಿಮ್ಮ: ಅನು:ಭಾಲಚಂದ್ರ ಜಯಶೆಟ್ಟಿ

೨. ಇಂಗ್ಲಿಷಿಗೆ ಅನುವಾದವಾದ ಕೃತಿಗಳು
ಕಾಡು: ಅನು: ಗಿರೀಶ್ ಕಾರ್ನಾಡ್

೩. ಮಲೆಯಾಳಂಗೆ ಅನುವಾದವಾದ ಕೃತಿಗಳು
೧) ಕಾಡು: ಅನು: ಎ.ವಿ.ಎಂ. ನಾರಾಯಣ
೨) ಪರಸಂಗದ ಗೆಂಡೆತಿಮ್ಮ: ಅನು: ಎ.ವಿ.ಎಂ. ನಾರಾಯಣ
೩) ಭುಜಂಗಯ್ಯನ ದಶಾವತಾರಗಳು: ಅನು: ಎ.ವಿ.ಎಂ. ನಾರಾಯಣ
೪) ತಪ್ತ

೪. ತೆಲುಗಿಗೆ ಅನುವಾದವಾದ ಕೃತಿಗಳು
ಕಾಡು: ಅನು. ಶ್ರೀಕಂಠ ಮೂರ್ತಿ

ಚಲನಚಿತ್ರಗಳಾದ ಕೃತಿಗಳು

೧. ಫೀನಿಕ್ಸ್ (ಕತೆ)
೨. ಗೀಜಗನ ಗೂಡು (ಕತೆ)
೩. ಕುರುಬರ ಲಕ್ಕನೂ ಎಲಿಜಬೆತ್ ರಾಣಿಯೂ (ಕತೆ)
೪. ಕಾಡು (ಕಾದಂಬರಿ) ರಾಷ್ಟ್ರ ಪ್ರಶಸ್ತಿ ಸಂದಿದೆ
೫. ಪರಸಂಗದ ಗೆಂಡೆತಿಮ್ಮ (ಕಾದಂಬರಿ)
೬. ಭುಜಂಗಯ್ಯನ ದಶಾವತಾರಗಳು (ಕಾದಂಬರಿ)

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು